29 September 2026 Tuesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಜಗತ್ತು ಬದಲಾದಂತೆ ಜನರ ಅಭಿರುಚಿಯೂ ಬದಲಾವಣೆ ಹೊಂದುತ್ತಾ ಹೋಗುತ್ತದೆ!
-ಸ್ನೇಹಾ ಆನಂದ್



ಸಿಎಂ ಸ್ವಕ್ಷೇತ್ರದಲ್ಲಿ ರೈತ ಸ್ವಾಭಿಮಾನ ಯಾತ್ರೆ — ಪುಟ ಸಂ. 2



ಹೇರಂಬ ಪಂಚಮುಖಿ ಗಣಪತಿ ಮೂರ್ತಿ ವಿಸರ್ಜನೆ — ಪುಟ ಸಂ. 3



ದಸರಾ ಆಯೋಜನೆ, ಅನುದಾನಕ್ಕೆ ಆಗ್ರಹ: ಅನಿರ್ದಿಷ್ಟಾವಧಿ ಧರಣಿ: — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು

ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 284 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಮೈಸೂರು ದಸರಾ ಆರಂಭಕ್ಕೂ ಮುನ್ನವೇ ಅಪಸ್ವರ

# ‘ಕೈ’ ನಾಯಕರಲ್ಲಿ ಭಿನ್ನಮತ ಸ್ಫೋಟ

## ಸಚಿವ ಯತೀಂದ್ರ ಸಿದ್ದರಾಮಯ್ಯ ವಿರುದ್ಧ ತನ್ವೀರ್ ಸೇಠ್ ಕಿಡಿ

**ಮೈಸೂರು:** ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಆರಂಭದಲ್ಲೇ ಕಾಂಗ್ರೆಸ್ ನಾಯಕರ ನಡುವಿನ ಭಿನ್ನಮತ ಸ್ಫೋಟಗೊಂಡಿದೆ.

ಜಿಲ್ಲಾಡಳಿತದಿಂದ ಸೋಮವಾರ ಆಯೋಜಿಸಿದ್ದ ಮಾವುತರ ಉಪಾಹಾರ ಕೂಟ ಸಮಾರಂಭಕ್ಕೆ ಸಮಯಕ್ಕೆ ಸರಿಯಾಗಿ ಬಾರದ ಸಚಿವ ಯತೀಂದ್ರ ಸಿದ್ದರಾಮಯ್ಯ ವಿರುದ್ಧ ಹಿರಿಯ ಶಾಸಕ ತನ್ವೀರ್ ಸೇಠ್ ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಸಚಿವರ ವಿರುದ್ಧ ಬಹಿರಂಗವಾಗಿ ಕಿಡಿಕಾರಿ, ಸಮಾರಂಭ ಸ್ಥಳದಿಂದ ಹೊರನಡೆದಿರುವುದು ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿಯಿಲ್ಲ ಎಂಬುದು ಬಹಿರಂಗವಾಗಿದೆ.

ಅಂಬಾವಿಲಾಸ ಅರಮನೆ ಆವರಣದಲ್ಲಿ ದಸರಾ ಗಜಪಡೆ ಮಾವುತರು ಹಾಗೂ ಕಾವಾಡಿ ಕುಟುಂಬಕ್ಕೆ ಸೋಮವಾರ ಜಿಲ್ಲಾಡಳಿತ ಉಪಹಾರ ಕೂಟ ಏರ್ಪಡಿಸಿತ್ತು. ಬೆಳಗ್ಗೆ 9 ಗಂಟೆಗೆ ಕಾರ್ಯಕ್ರಮ ನಿಗದಿಯಾಗಿತ್ತು. ಮಾವುತರನ್ನು ಉಪಾಹಾರಕ್ಕೆ ಕೂರಿಸಿ, ಬಾಳೆ ಎಲೆ ಕೂಡ ಹಾಕಲಾಗಿತ್ತು. ಆದರೆ ಸಚಿವರಾದ ಯತೀಂದ್ರ ಸಿದ್ದರಾಮಯ್ಯ 10.15ಕ್ಕೆ ಆಗಮಿಸಿದ್ದು, 1 ಗಂಟೆಗೂ ಹೆಚ್ಚು ಕಾಲ ತಡವಾಗಿ ಬಂದಿದ್ದು ಅಸಮಾಧಾನಕ್ಕೆ ಕಾರಣ ಆಯಿತು.



**ಯತೀಂದ್ರ ಸ್ಪಷ್ಟನೆ:** ಮಾವುತರ ಉಪಹಾರ ಕೂಟಕ್ಕೆ ತಡವಾಗಿ ಬಂದ ಯತೀಂದ್ರ ಸಿದ್ದರಾಮಯ್ಯ ಅವರು ನಾವು ಹೊಸಮನೆಯಲ್ಲಿ ಈಗ ಎಲ್ಲಾವನ್ನು ವ್ಯವಸ್ಥೆ ಮಾಡಿಕೊಳ್ಳಬೇಕಾಗಿದೆ. ಹೀಗಾಗಿ ಸಮಯ ಆಗಿದೆ. ಉದ್ದೇಶಪೂರ್ವಕವಾಗಿ ತಡವಾಗಿ ಬಂದಿಲ್ಲ. ಈ ಬಗ್ಗೆ ತನ್ವೀರ್ ಸೇಠ್ ಜೊತೆ ಮಾತನಾಡಿದ್ದೇನೆ ಎಂದು ಉಪಹಾರ ಕೂಟಕ್ಕೆ ತಡವಾಗಿ ಬಂದಿದ್ದಕ್ಕೆ ಯತೀಂದ್ರ ಸಿದ್ದರಾಮಯ್ಯ ಸ್ಪಷ್ಟನೆ ನೀಡಿದರು. ಪುಟ 2ಕ್ಕೆ

### 1 ಗಂಟೆ 15 ನಿಮಿಷ ಕಾದಿದ್ದ ಮಾವುತರು

ಮಾವುತರು ಮತ್ತು ಕವಾಡಿಗಳಿಗೆ ಆಯೋಜಿಸಿದ್ದ ಉಪಾಹಾರ ಕೂಟಕ್ಕೆ ಸಚಿವ ಯತೀಂದ್ರ ಸಿದ್ದರಾಮಯ್ಯ ಅವರು 1 ಗಂಟೆ 15 ನಿಮಿಷ ತಡವಾಗಿ ಬಂದ ಹಿನ್ನೆಲೆ ಮಾವುತರು ಬಾಳೆ ಎಲೆ ಮುಂದೆಯೇ ಕಾದು ಕುಳಿತುಕೊಳ್ಳಬೇಕಾದ ಅನಿವಾರ್ಯತೆ ಉಂಟಾಗಿತ್ತು. ಬೆಳಗ್ಗೆ 9 ಗಂಟೆಗೆ ಕಾರ್ಯಕ್ರಮ ನಿಗದಿಯಾಗಿತ್ತು. ಆದರೆ ಯತೀಂದ್ರ ಅವರು 10 ಗಂಟೆ 15 ನಿಮಿಷಕ್ಕೆ ಬಂದು ಬಳಿಕ ಮಾವುತರಿಗೆ ಉಪಾಹಾರ ಬಡಿಸಿದರು.

### ಸಮಯ ಪ್ರಜ್ಞೆ ಇಲ್ವೇನ್ರಿ?

ಊಟದ ಕೂಟಕ್ಕೆ ಅರ್ಧ ಗಂಟೆಗೂ ಹೆಚ್ಚು ಕಾಲ ಕಾದು ನಿಂತಿದ್ದ ಶಾಸಕ ತನ್ವೀರ್ ಸೇಠ್ ಕೋಪಗೊಂಡಿದ್ದರು. ಅಲ್ಲಿಂದ ಹೊರನಡೆದ ಅವರು, ದೊಡ್ಡವರಿಗೆ ಸಮಯ ಪ್ರಜ್ಞೆ ಇರಬೇಕು. ಸಮಯ ಪ್ರಜ್ಞೆ ಇಲ್ಲ ಅಂದ್ರೆ ಏನ್ಮಾಡಬೇಕು? ಬೇರೆ ಕಾರ್ಯಕ್ರಮ ಆದರೇ ಹೇಗೊ ಸರಿ. ಇಂತಹ ಕಾರ್ಯಕ್ರಮಕ್ಕೆ ತಡವಾಗಿ ಬಂದರೆ ಅದರ ಅರ್ಥ ಏನು? ಇದನ್ನೆಲ್ಲ ಸಹಿಸಿಕೊಳ್ಳಲು ಆಗಲ್ಲ. ಮಾವುತರನ್ನ ಹೀಗೆ ಕಾಯಿಸುವುದೇ? ನೋ ನೋ ನಾನು ಇಲ್ಲಿಂದ ಹೊರಡುತ್ತೇನೆ ಎಂದು ಜಿಲ್ಲಾಧಿಕಾರಿಗೆ ಫೋನ್‌ನಲ್ಲಿ ಹೇಳಿ ಸಿಟ್ಟಿನಿಂದ ಹೊರಟರು.



## ಗವಿಶ್ರೀಗಳಿಗೆ ದಸರಾ ಉದ್ಘಾಟನೆಗೆ ಆಹ್ವಾನ



**ಕೊಪ್ಪಳ:** ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಉದ್ಘಾಟನೆಗೆ ಆಗಮಿಸುವಂತೆ ಕೊಪ್ಪಳದ ಗವಿಮಠದ ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಸೋಮವಾರ ಅಧಿಕೃತ ಆಹ್ವಾನ ನೀಡಿ, ಗೌರವಿಸಿದರು.

ನಾಡಹಬ್ಬಕ್ಕೆ ಬರುವಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ನೀಡಿದ ಆಹ್ವಾನ ಪತ್ರಿಕೆಯನ್ನು ಸಚಿವರು ಸ್ವಾಮೀಜಿಗೆ ನೀಡಿದರು. ಸರ್ಕಾರದ ಆಹ್ವಾನವನ್ನು ಸಂತೋಷದಿಂದಲೇ ಸ್ವೀಕರಿಸಿದ ಸ್ವಾಮೀಜಿ ಅವರು, ನಾಡಹಬ್ಬದಲ್ಲಿ ಸಂತೋಷದಿಂದ ಪಾಲ್ಗೊಳ್ಳುತ್ತೇನೆ ಎಂದು ತಿಳಿಸಿದರು.

ಬಳಿಕ ಮಾಧ್ಯಮಗಳ ಜೊತೆ ಮಾತನಾಡಿದ ಸಚಿವ ತಂಗಡಗಿ, ಗವಿಮಠದ ಸ್ವಾಮೀಜಿ ದಸರಾ ಉದ್ಘಾಟನೆ ಮಾಡಲು ಒಪ್ಪಿರುವುದು ಅತ್ಯಂತ ಸಂತೋಷ ನೀಡಿದೆ. ಇದರಿಂದ ದಸರಾ ಹಬ್ಬದ ಘನತೆ ಹೆಚ್ಚಾಗಿದೆ. ಗವಿಮಠದ ಶ್ರೀಗಳು ಅತ್ಯಂತ ಸೂಕ್ಷ್ಮ ಮನಸ್ಸಿನ ಸಂವೇದನಾಶೀಲರು. ಯಾರೂ ಸುಳ್ಳು ಸುದ್ದಿ ಹಬ್ಬಿಸಬಾರದು ಎಂದು ಮನವಿ ಮಾಡಿದರು.

ಈ ವರ್ಷ ದಸರಾ ಉದ್ಘಾಟನೆಗೆ ಗವಿಶ್ರೀಗಳನ್ನ ಆಯ್ಕೆ ಮಾಡಿರುವುದು ಖುಷಿ ತಂದಿದೆ. ಶ್ರೀಗಳನ್ನ ಒಪ್ಪಿಸಲಿಕ್ಕೆ ಸಿಎಂ ಡಿಕೆಶಿ ಅವರು ಮನವಿ ಮಾಡಿದ್ದರು. ಅದರಂತೆ ಪ್ರೀತಿ ವಿಶ್ವಾಸದಿಂದ ಶ್ರೀಗಳು ಒಪ್ಪಿಕೊಂಡಿದ್ದಾರೆ ಎಂದು ಹೇಳಿದರು.

ಆದರೆ ಕೆಲವು ಕಿಡಿಗೇಡಿಗಳು ಅಪಪ್ರಚಾರ ಮಾಡುವ ಕೆಲಸ ಮಾಡಿದ್ದಾರೆ. ಯಾರೇ ಇರಲಿ ಅಪಪ್ರಚಾರ ಮಾಡಿದವರ ಮೇಲೆ ಕ್ರಮ ಕೈಗೊಳ್ಳಲು ಸೂಚನೆ ನೀಡಿದ್ದೇನೆ. ಅಧಿಕೃತ ಸಾಕ್ಷಿಗಳಿಲ್ಲದೆ ಮಾಧ್ಯಮಗಳಲ್ಲಿ ಬರುವ ಕೆಲಸ ಆಗಿದೆ. ಸುಳ್ಳು ಸುದ್ದಿ ಮಾಡಿದ ಮಾಧ್ಯಮಕ್ಕೆ ನೀಡಿಲಾಗುತ್ತದೆ. ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳುವಂತೆ ಪೊಲೀಸ್ ಇಲಾಖೆಗೆ ಸೂಕ್ತ ನಿರ್ದೇಶನ ನೀಡಿದ್ದೇನೆ ಎಂದು ಹೇಳಿದರು.

ಇದು ನಮ್ಮ ಜಿಲ್ಲೆಗೆ ಸಿಕ್ಕಿರುವ ಸೌಭಾಗ್ಯ. ಗವಿಶ್ರೀಗಳಿಂದ ಉದ್ಘಾಟನೆ ಮಾಡಿಸುವುದು ನಮ್ಮ ಸರ್ಕಾರಕ್ಕೆ ಹೆಮ್ಮೆ ತರುವ ಕೆಲಸ. ಶ್ರೀಗಳು ಅದ್ದೂರಿತನ ಬೇಡ ಅಂತ ಹೇಳ್ತಾರೆ. ಇಂತಹವರಿಂದ ದಸರಾ ಉದ್ಘಾಟನೆ ನಡೆಯುತ್ತಿರುವುದು ವಿಶೇಷ ಪುಟ 2ಕ್ಕೆ

### ಶ್ರೀಗಳಿಗೆ ಜಿಲ್ಲಾಡಳಿತದಿಂದ ಅ.3ರಂದು ಅಧಿಕೃತ ಆಹ್ವಾನ

**ಮೈಸೂರು:** ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವವನ್ನು ಅ.11ರಂದು ಚಾಮುಂಡಿಬೆಟ್ಟದಲ್ಲಿ ಉದ್ಘಾಟನೆ ಮಾಡಲು ಆಗಮಿಸುವಂತೆ ಕೊಪ್ಪಳ ಗವಿಮಠದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಅವರಿಗೆ ಅ.3ರಂದು ಮೈಸೂರು ಜಿಲ್ಲಾಡಳಿತದಿಂದ ಆಹ್ವಾನ ನೀಡಲಾಗುತ್ತದೆ.

ಜಿಲ್ಲಾಡಳಿತದ ಪರವಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ, ದಸರಾ ಮಹೋತ್ಸವದ ವಿಶೇಷಾಧಿಕಾರಿಯಾದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಹಾಗೂ ಸ್ವಾಗತ ಸಮಿತಿ ಸದಸ್ಯರು ಗವಿಮಠಕ್ಕೆ ತೆರಳಿ ಶ್ರೀಗಳನ್ನು ಗೌರವಿಸಿ, ಆಹ್ವಾನ ಪತ್ರಿಕೆ ನೀಡಲಿದ್ದಾರೆ.

## ತ.ನಾಡಿನಲ್ಲಿ ಶಿಶುವಿಗೆ ಸಿಎಂ ಚಿನ್ನದುಂಗುರ



**ಚೆನ್ನೈ:** ಮಧುರೈನ ಸರ್ಕಾರಿ ರಾಜಾಜಿ ಆಸ್ಪತ್ರೆಯಲ್ಲಿ 'ತಾಯ್ ಮಾಮನ್ ತಂಗ ಮೋದಿರಂ' (ತಾಯಿಯ ಸಹೋದರನ ಚಿನ್ನದುಂಗುರ ಯೋಜನೆ) ಯೋಜನೆಗೆ ತಮಿಳುನಾಡು ಸಿಎಂ ಜೋಸೆಫ್ ವಿಜಯ್ ಚಾಲನೆ ನೀಡಿದರು. ನವಜಾತ ಶಿಶುವಿಗೆ 1 ಗ್ರಾಂ ಚಿನ್ನದ ಉಂಗುರ ತೊಡಿಸಿದರು.

ಸರ್ಕಾರಿ ಆಸ್ಪತ್ರೆಯ ಹೆರಿಗೆ ವಾರ್ಡ್ಗೆ ಭೇಟಿ ನೀಡಿದ ಸಿಎಂ ವಿಜಯ್, ಶಿಶುಗಳ ಪೋಷಕರಿಗೆ ಉಂಗುರಗಳನ್ನು ವಿತರಿಸಿದರು.

ಟಿವಿಕೆ ಪಕ್ಷ ಚುನಾವಣೆಗೂ ಮುನ್ನ ಅಧಿಕಾರಕ್ಕೆ ಬಂದರೆ ಈ ಯೋಜನೆ ಜಾರಿಗೊಳಿಸುವ ಬಗ್ಗೆ ಘೋಷಿಸಿತ್ತು. ಸರ್ಕಾರಿ ಆಸ್ಪತ್ರೆಗಳಲ್ಲಿ ಜನಿಸಿದ ಶಿಶುಗಳಿಗೆ ಸರ್ಕಾರ 22 ಕ್ಯಾರೆಟ್‌ನ ಒಂದು ಗ್ರಾಂ ಚಿನ್ನದ ಉಂಗುರವನ್ನು ನೀಡುತ್ತದೆ. ಈ ಯೋಜನೆಗೆ ಅರ್ಹತೆ ಪಡೆಯಲು, ನವಜಾತ ಶಿಶುಗಳ ತಾಯಂದಿರು ತಮಿಳುನಾಡಿನ ಖಾಯಂ ನಿವಾಸಿಗಳಾಗಿರಬೇಕು. ಈ ಯೋಜನೆಗಾಗಿ ತಮಿಳುನಾಡು ಸರ್ಕಾರ ವಾರ್ಷಿಕ 755.83 ಕೋಟಿ ರೂ.ಗಳನ್ನು ಮೀಸಲಿಟ್ಟಿದೆ.

## 22 ಸಚಿವರಿಗೆ ಉಸ್ತುವಾರಿ: ಇದು ಹಿನ್ನಡೆಯಲ್ಲ

**ಮೈಸೂರು:** ದಸರಾ ಮಹೋತ್ಸವಕ್ಕೆ 22 ಸಚಿವರಿಗೆ ಉಸ್ತುವಾರಿ ನೀಡಲಾಗಿದೆ. ದಸರಾವನ್ನು ಅಚ್ಚುಕಟ್ಟಾಗಿ ನಡೆಸಲು ಮುಖ್ಯಮಂತ್ರಿ ಪ್ಲಾನ್ ಮಾಡಿದ್ದಾರೆ. ದಸರಾದ ಎಲ್ಲಾ ಸಮಿತಿಗಳಿಗೆ ನಾನೇ ಉಸ್ತುವಾರಿಯಾಗಿದ್ದೇನೆ. ಹೀಗಾಗಿ ಇದು ನನಗೆ ಹಿನ್ನಡೆಯಿಲ್ಲ ಎಂದು ಸಚಿವ ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಮಾವುತರು ಹಾಗೂ ಕಾವಾಡಿಗಳ ಕುಟುಂಬದವರಿಗೆ ಕಿಟ್ ಹಾಗೂ ಆರೋಗ್ಯ ತಪಾಸಣೆ ಶಿಬಿರ ಉದ್ಘಾಟನೆ ಮಾಡಿ ಮಾತನಾಡಿ, ಇದು ಹೊಸ ಸಂಪ್ರದಾಯಕ್ಕೆ ನಾಂದಿಯಾಗಿದೆ. ದಸರಾದ 10 ದಿನದ ನವರಾತ್ರಿ ಉತ್ಸವಕ್ಕೆ ಒಂದೊಂದು ದಿನಕ್ಕೆ ಇಬ್ಬರು ಸಚಿವರಿಗೆ ಉಸ್ತುವಾರಿ ಕೊಟ್ಟಿರುವುದು ಸಿಎಂ ಪರಿಕಲ್ಪನೆ. ಇದರಿಂದ ದಸರಾ ಅಚ್ಚುಕಟ್ಟಾಗಿ ನಡೆಸಲು ಸಾಧ್ಯವಾಗುತ್ತದೆ. ಆದರೆ ಇಲ್ಲಿ ಯಾರ ಕೈಮೇಲೂ ಅಲ್ಲ, ಯಾರ ಕೈ ಕೆಳಗೂ ಅಲ್ಲ. ನನಗೆ ಇದು ಹಿನ್ನಡೆಯಲ್ಲ ಎಂದು ಸ್ಪಷ್ಟಪಡಿಸಿದರು.

**ಸಚಿವರ ಸ್ಪಷ್ಟನೆ:** ಮಾವುತರ ಉಪಹಾರ ಕೂಟಕ್ಕೆ ತಡವಾಗಿ ಬಂದ ಯತೀಂದ್ರ ಸಿದ್ದರಾಮಯ್ಯ ಅವರು ನಾವು ಹೊಸ ಮನೆಯಲ್ಲಿ ಈಗ ಎಲ್ಲಾವನ್ನು ವ್ಯವಸ್ಥೆ ಮಾಡಿಕೊಳ್ಳಬೇಕಾಗಿದೆ. ಹೀಗಾಗಿ ಸಮಯ ಆಗಿದೆ. ಉದ್ದೇಶಪೂರ್ವಕವಾಗಿ ತಡವಾಗಿ ಬಂದಿಲ್ಲ. ಈ ಬಗ್ಗೆ ತನ್ವೀರ್ ಸೇಠ್ ಜೊತೆ ಮಾತನಾಡಿದ್ದೇನೆ ಎಂದು ಉಪಹಾರ ಕೂಟಕ್ಕೆ ತಡವಾಗಿ ಬಂದಿದ್ದಕ್ಕೆ ಯತೀಂದ್ರ ಸಿದ್ದರಾಮಯ್ಯ ಸ್ಪಷ್ಟನೆ ನೀಡಿದರು.



### ಅಕ್ರಮ ಸೈಟ್: ಪಟ್ಟಿ ಬಿಡುಗಡೆ

ಮುಡಾದ 50:50 ಅಕ್ರಮ ಸೈಟುಗಳ ಪಟ್ಟಿಯನ್ನು ಶೀಘ್ರವೇ ಬಿಡುಗಡೆ ಮಾಡುತ್ತೇವೆ. ಈ ಬಗ್ಗೆ ಬಿಜೆಪಿ ಶಾಸಕ ಶ್ರೀವತ್ಸ ಮನವಿ ಮಾಡಿದ್ದಾರೆ. ನ್ಯಾ. ದೇಸಾಯಿ ಆಯೋಗದ ವರದಿಯಂತೆ ಎಲ್ಲ ಸೈಟುಗಳನ್ನು ನ್ಯಾಯಮೂರ್ತಿ ದೇಸಾಯಿ ವರದಿಯಂತೆ ಎಲ್ಲಾ ಸೈಟ್ ರದ್ದು ಮಾಡಿದ್ದೇವೆ ಎಂದು ಸಚಿವ ಯತೀಂದ್ರ ಹೇಳಿದರು.

ನಿಜವಾಗಿ ಕಾನೂನಾತ್ಮಕವಾಗಿ ಸೈಟು ಪಡೆದವರನ್ನು ಪಟ್ಟಿಯಿಂದ ಹೊರ ಇಡಲಾಗಿದೆ. ಪ್ರತಿ ಸೈಟ್ ಬಗ್ಗೆ ತನಿಖೆ ಮಾಡಿ ವರದಿ ಮಾಡಿದ್ದಾರೆ. ಈಗ ಮತ್ತೆ ಅದನ್ನು ನಾವು ಪರೀಶೀಲನೆ ಮಾಡುವ ಅಗತ್ಯವಿಲ್ಲ. ಕೊಟ್ಟಿರುವ ಅಕ್ರಮ ಪಟ್ಟಿಯನ್ನು ನಾವು ಪುಟ 2ಕ್ಕೆ

## ಮಹಿಷಾ ದಸರಾಗೆ ಅವಕಾಶ: ಯದುವೀರ್

**ಮೈಸೂರು:** ಮಹಿಷಾ ದಸರಾ ಆಚರಣೆಗೆ ಸಂವಿಧಾನದಲ್ಲಿ ಅವಕಾಶವಿದೆ. ಆದರೆ, ಯಾವುದೇ ಧಾರ್ಮಿಕ ಭಾವನೆಗೆ ಧಕ್ಕೆಯಾಗದ ರೀತಿಯಲ್ಲಿ ಆಚರಣೆ ಮಾಡಲಿ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಾರ್ವಜನಿಕರು ಧಾರ್ಮಿಕ ಆಚರಣೆಗಳನ್ನು ನಡೆಸಲು ಸಂವಿಧಾನದಲ್ಲಿ ಅವಕಾಶ ನೀಡಲಾಗಿದೆ. ಜನರ ಧಾರ್ಮಿಕ ಆಚರಣೆಯನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಮಹಿಷಾ ದಸರಾವನ್ನು ಆಚರಿಸುವಾಗ ಯಾರಿಗೂ ಯಾವುದೇ ಹಾನಿ ಅಥವಾ ತೊಂದರೆಯಾಗದ ರೀತಿಯಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಬಹುದು ಎಂದರು.

ಚಾಮುಂಡಿ ಬೆಟ್ಟದಲ್ಲಿರುವ ಮಹಿಷಾನ ಪ್ರತಿಮೆಗೆ ಪುಷ್ಪಾರ್ಚನೆಗೆ ಅವಕಾಶ ಮಾಡಿಕೊಡಬೇಕು ಎಂಬ ಬೇಡಿಕೆ ವಿಚಾರವಾಗಿ ಪ್ರತಿಕ್ರಿಯೆ ನೀಡಿದ ಸಂಸದರು, ಅದು ತಾಯಿ ಚಾಮುಂಡೇಶ್ವರಿ ಇರುವ ಕ್ಷೇತ್ರ, ಅಲ್ಲಿ ಯಾಕೆ ಎಂದು ಪ್ರಶ್ನಿಸಿದರು.

ಮಹಿಷಾ ದಸರಾ ಆಚರಣೆ ಬಗ್ಗೆ ಜಿಲ್ಲಾಡಳಿತ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಳ್ಳಲಿದ್ದಾರೆ. ಆದರೆ ಧರ್ಮದಲ್ಲಿ ಪದ್ಧತಿ ಏನಿದೆ, ನಂಬಿಕೆ ಏನಿದೆ ಎಂಬುದನ್ನು ನಾವು ಅನುಸರಿಸುತ್ತೇವೆ. ಅದಕ್ಕೆ ಧಕ್ಕೆ ಬರಬಾರದು. ಪ್ರಜೆಗಳ ಪ್ರತಿನಿಧಿಗಳಾದ ನಾವು ಜವಾಬ್ದಾರಿಯುತವಾಗಿ ಚಾಮುಂಡಿ ಬೆಟ್ಟದಲ್ಲಿ ಏನು ಪರಂಪರೆ ಹಾಗೂ ನಂಬಿಕೆ ಏನು ಇದೆ ಎಂಬುದನ್ನು ಅಧಿಕಾರಿಗಳಿಗೆ ವ್ಯಕ್ತಪಡಿಸಿದ್ದೇನೆ ಎಂದು ಹೇಳಿದರು.





## ನಾಳೆಯಿಂದ ಭಾರತ ಜೋಡೊ ಯಾತ್ರೆ 2.0: ಬಿ.ಕೆ.ಹರಿಪ್ರಸಾದ್

**ಬೆಂಗಳೂರು:** ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹಮ್ಮಿಕೊಂಡಿದ್ದ ಭಾರತ ಜೋಡೊ ಯಾತ್ರೆ ನೆನಪಿನಲ್ಲಿ ರಾಜ್ಯದಲ್ಲಿ ಸೆ.30ರಿಂದ ಭಾರತ ಜೋಡೊ ಯಾತ್ರೆ 2.0ನ್ನು ಕಾಂಗ್ರೆಸ್ ಆಯೋಜಿಸಿದೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ತಿಳಿಸಿದರು.

ರಾಜ್ಯದಲ್ಲಿ ರಾಹುಲ್ ಗಾಂಧಿ ಯಾತ್ರೆ ಮಾಡಿದ್ದ 11 ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ 19 ಜಿಲ್ಲೆಗಳಲ್ಲಿ ಯಾತ್ರೆ ಮಾಡುತ್ತೇವೆ. ಕಾಂಗ್ರೆಸ್ ಪಕ್ಷ ಸೋತಿರುವ 84 ಕ್ಷೇತ್ರಗಳಲ್ಲಿ ನಾವು ಈ ಯಾತ್ರೆ ಮಾಡಲು ತೀರ್ಮಾನಿಸಿದ್ದೇವೆ. 84 ಕ್ಷೇತ್ರಗಳಲ್ಲಿ 84 ದಿನಗಳು ಪಾದಯಾತ್ರೆ ಮಾಡಲಾಗುವುದು ಎಂದು ಹೇಳಿದರು.



ಶಿವಮೊಗ್ಗದ ಶಿಕಾರಿಪುರ ತಾಲ್ಲೂಕಿನಿಂದ ಯಾತ್ರೆ ಆರಂಭಿಸುತ್ತಿದ್ದೇವೆ. ಸಚಿವರಾದ ಮಧು ಬಂಗಾರಪ್ಪ, ರುದ್ರಪ್ಪ ಲಮಾಣಿ, ಜಮೀರ್ ಅಹ್ಮದ್ ಭಾಗವಹಿಸಲಿದ್ದಾರೆ. ನಂತರ ಅ.4–5ರಿಂದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರು.

ಶಿಕಾರಿಪುರದಿಂದಲೇ ಪಾದಯಾತ್ರೆ ಹಮ್ಮಿಕೊಂಡಿರುವುದೇಕೆ ಎಂಬ ಪ್ರಶ್ನೆಗೆ, ಬಿಜೆಪಿ ರಾಜ್ಯಾಧ್ಯಕ್ಷರ ಕ್ಷೇತ್ರದಿಂದ ಬಿಜೆಪಿಯ ನ್ಯೂನ್ಯತೆ ತಿಳಿಸಲು ಹಾಗೂ ಜ್ಞಾನೇಶ್ ಕುಮಾರ್ ಅವರು ಸಂವಿಧಾನಿಕ ಸಂಸ್ಥೆಯಾಗಿರುವ ಚುನಾವಣಾ ಆಯೋಗಕ್ಕೆ ಮಾಡುತ್ತಿರುವ ಧಕ್ಕೆ ಬಗ್ಗೆ ಜನಜಾಗೃತಿ ಮೂಡಿಸಲಾಗುವುದು ಎಂದು ತಿಳಿಸಿದರು.

ರಾಹುಲ್ ಗಾಂಧಿ ಅವರು 2022, ಸೆ.7ರಂದು ಕನ್ಯಾಕುಮಾರಿಯಲ್ಲಿ ಭಾರತ ಜೋಡೋ ಪಾದಯಾತ್ರೆ ಆರಂಭಿಸಿದ್ದರು. ನಂತರ ಕರ್ನಾಟಕದಲ್ಲಿ ಸೆ. 30ರಂದು ಗುಂಡ್ಲುಪೇಟೆಯಲ್ಲಿ ಯಾತ್ರೆ ಆರಂಭಿಸಿದ್ದರು. ಅಕ್ಟೋಬರ್ 21ರವರೆಗೆ 11 ಜಿಲ್ಲೆಗಳಲ್ಲಿ 600 ಕಿ.ಮೀ ಪಾದಯಾತ್ರೆ ಮಾಡಿದ್ದರು.

## ಯುಪಿಐ ವಹಿವಾಟಿಗೆ ಶುಲ್ಕ: ತಡೆ ನೀಡಲು ಸುಪ್ರೀಂ ಕೋರ್ಟ್ ನಕಾರ

**ನವದೆಹಲಿ:** 2,000 ರೂ.ಗಿಂತ ಹೆಚ್ಚಿನ ಯುಪಿಐ ವಹಿವಾಟುಗಳಿಗೆ ಅನ್ವಯವಾಗುವ ಹೊಸ ಮರ್ಚೆಂಟ್ ಡಿಸ್ಕೌಂಟ್ ರೇಟ್ ಚೌಕಟ್ಟಿಗೆ ತಡೆ ನೀಡಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ಈ ಹೊಸ ನಿಯಮಾವಳಿಯನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ, ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಭಾರತೀಯ ರಾಷ್ಟ್ರೀಯ ಪಾವತಿ ನಿಗಮಕ್ಕೆ ನೋಟಿಸ್ ಜಾರಿ ಮಾಡಿ ಪ್ರತಿಕ್ರಿಯೆ ಕೇಳಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಮತ್ತು ವಿ.ಮೋಹನಾ ಅವರನ್ನೊಳಗೊಂಡ ತ್ರಿಸದಸ್ಯ ಪೀಠವು ವಕೀಲ ಅಂಜನ್ ದತ್ತಾ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿತು.



ಭಾರತದ ಅತಿ ದೊಡ್ಡ ಡಿಜಿಟಲ್ ಪಾವತಿ ವ್ಯವಸ್ಥೆಯ ಕಾರ್ಯವೈಖರಿ ಮೇಲೆ ಮಹತ್ವದ ಪರಿಣಾಮ ಬೀರುವ ಸಾಧ್ಯತೆಯಿರುವ ಈ ಪ್ರಕರಣದಲ್ಲಿ, ಸರ್ಕಾರ ಪುಟ 2ಕ್ಕೆ

# ಕೇಂದ್ರದಿಂದ ಬರ ಅಧ್ಯಯನಕ್ಕೆ 3 ತಂಡ

## ರಾಜ್ಯದಲ್ಲಿ ಅ.3ರಂದು ಪ್ರತ್ಯೇಕ ಅಧ್ಯಯನ: ಡಿಸಿಎಂ ಪರಮೇಶ್ವರ್

**ಬೆಂಗಳೂರು:** ಕರ್ನಾಟಕಕ್ಕೆ ಕೇಂದ್ರ ಸರ್ಕಾರದ ಮೂರು ತಂಡಗಳು ಅ.3ರಂದು ಆಗಮಿಸಿ ರಾಜ್ಯದ ಬರ ಪರಿಸ್ಥಿತಿ ಕುರಿತು ಅಧ್ಯಯನ ನಡೆಸಲಿವೆ.

ತುಮಕೂರು, ಚಿತ್ರದುರ್ಗ, ದಾವಣಗೆರೆ ಭಾಗದಲ್ಲಿ ಒಂದು ತಂಡ, ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಮತ್ತೊಂದು ತಂಡ ಹಾಗೂ ಮಂಡ್ಯ, ಮೈಸೂರು, ಚಾಮರಾಜನಗರ ಸೇರಿದಂತೆ ಮೈಸೂರು ಭಾಗದಲ್ಲಿ ಮೂರನೇ ತಂಡ ಅಧ್ಯಯನ ನಡೆಸಲಿದೆ ಎಂದು ಉಪಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರಾದ ಡಾ.ಜಿ.ಪರಮೇಶ್ವರ್ ತಿಳಿಸಿದರು.

ಮಾಧ್ಯಮಗಳೊಂದಿಗೆ ಸೋಮವಾರ ಮಾತನಾಡಿದ ಅವರು, ಕೇಂದ್ರದ ತಂಡಗಳು ಬರಪೀಡಿತ ಪ್ರದೇಶಗಳಲ್ಲಿ ಅಧ್ಯಯನ ನಡೆಸಿ ವರದಿಯನ್ನು ಸಲ್ಲಿಸಲಿವೆ. ರಾಜ್ಯ ಸರ್ಕಾರ ಈಗಾಗಲೇ ಕೇಂದ್ರಕ್ಕೆ ಮೆಮೊರಾಂಡಂ ಸಲ್ಲಿಸಿದೆ. ಅದರ ಆಧಾರದ ಮೇಲೆಯೇ ಕೇಂದ್ರದ ತಂಡಗಳು ಪರಿಶೀಲನೆ ನಡೆಸಲಿವೆ. ಇದರ ಜೊತೆಗೆ ರಾಜ್ಯ ಸರ್ಕಾರದಿಂದ ಮತ್ತೊಂದು ಮೆಮೊರಾಂಡಂ ಕೂಡ ಸಲ್ಲಿಸಲಾಗುವುದು ಎಂದು ಹೇಳಿದರು.



ರಾಜ್ಯದಲ್ಲಿ ಬರ ಎಂದು ಘೋಷಿಸಲಾಗಿರುವ ಎಲ್ಲ ತಾಲೂಕುಗಳ ಬಗ್ಗೆಯೂ ಕೇಂದ್ರದ ತಂಡಗಳು ಮಾಹಿತಿಯನ್ನು ಸಂಗ್ರಹಿಸುವ ಸಾಧ್ಯತೆಯಿದೆ. ಆಯಾ ಜಿಲ್ಲಾಧಿಕಾರಿ ಹಾಗೂ ಸ್ಥಳೀಯ ಪುಟ 2ಕ್ಕೆ

### ನಿಗಮ ಮಂಡಳಿಗೆ ನೇಮಕಾತಿ

ನಿಗಮ–ಮಂಡಳಿಗಳ ನೇಮಕಾತಿ ಕುರಿತು ಪ್ರತಿಕ್ರಿಯಿಸಿದ ಪರಮೇಶ್ವರ್ ಅವರು, ಪಕ್ಷದ ಕಾರ್ಯಾಧ್ಯಕ್ಷರು ಹಾಗೂ ಪದಾಧಿಕಾರಿಗಳ ನೇಮಕಾತಿ ಪ್ರಕ್ರಿಯೆ ಮತ್ತು ನಿಗಮ ಮಂಡಳಿ ಅಧ್ಯಕ್ಷರು ಹಾಗೂ ನಿರ್ದೇಶಕರ ನೇಮಕಾತಿ ಪ್ರಕ್ರಿಯೆ ಬೇರೆಬೇರೆ. ಈ ಸಂಬಂಧ ಈಗಾಗಲೇ ಪಕ್ಷದ ಪ್ರಧಾನ ಕಾರ್ಯದರ್ಶಿ, ಉಸ್ತುವಾರಿ ಪ್ರಧಾನ ಕಾರ್ಯದರ್ಶಿ, ಮುಖ್ಯಮಂತ್ರಿ ಹಾಗೂ ಮಾಜಿ ಮುಖ್ಯಮಂತ್ರಿ ಸೇರಿದಂತೆ ಪ್ರಮುಖರು ಸಭೆ ನಡೆಸಿ ಅಂತಿಮಗೊಳಿಸಿದ್ದಾರೆ ಎಂಬ ಮಾಹಿತಿ ಇದೆ. ಆದಷ್ಟು ಶೀಘ್ರ ನೇಮಕಾತಿ ನಡೆಯಬಹುದು ಎಂದು ತಿಳಿಸಿದರು.

### ಕುಮಾರಸ್ವಾಮಿಗೆ ಅಡ್ಡಿಪಡಿಸಲ್ಲ!

ಮೈಸೂರು ಭಾಗದಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಜಮೀನು ಕಳೆದುಕೊಂಡವರ ಪರವಾಗಿ ಹೋರಾಟ ನಡೆಸುವುದಾಗಿ ಹೇಳಿರುವ ಕುರಿತು ಪ್ರತಿಕ್ರಿಯಿಸಿ, ಅವರು ಹೋರಾಟ ನಡೆಸುವುದಕ್ಕೆ ಯಾರೂ ಅಡ್ಡಿಪಡಿಸುವ ಪ್ರಶ್ನೆಯೇ ಇಲ್ಲ. ಅವರು ತಮ್ಮ ಹೋರಾಟವನ್ನು ಮಾಡಲಿ ಎಂದು ಲೇವಡಿ ಮಾಡಿದರು.

### ಪಿಂಚಣಿಗೆ ಮರು ಸೇರ್ಪಡೆ

ಪಿಂಚಣಿ ವಿಚಾರವಾಗಿ ಮಾತನಾಡಿದ ಪರಮೇಶ್ವರ್, ಈ ಹಿಂದೆ 32 ಸಾವಿರ ರೂ. ಇದ್ದ ಆದಾಯದ ಮೇಲಿನ ಮಿತಿಯನ್ನು ಈಗ 1.20 ಲಕ್ಷ ರೂ.ಗೆ ಹೆಚ್ಚಿಸಲಾಗಿದೆ. ಇದರಿಂದ ಪಿಂಚಣಿಯಿಂದ ಹೊರಗುಳಿದಿದ್ದ ಹಲವು ಅರ್ಹರು ಮತ್ತೆ ಯೋಜನೆ ವ್ಯಾಪ್ತಿಗೆ ಬರಲಿದ್ದಾರೆ ಎಂದು ತಿಳಿಸಿದರು. ಪುಟ 2ಕ್ಕೆ

## ರಾಜ್ಯ ಸ್ವಂತ ಹಣದಲ್ಲಿ ಬರ ಪರಿಸ್ಥಿತಿ ನಿರ್ವಹಿಸಲಿ: ಎಚ್‌ಡಿಕೆ

**ಮೈಸೂರು:** ರಾಜ್ಯ ಸರ್ಕಾರ ಬರ ಪರಿಸ್ಥಿತಿ ನಿರ್ವಹಣೆಗೆ ಕೇಂದ್ರದತ್ತ ಬೊಟ್ಟು ಮಾಡುವುದನ್ನು ಬಿಟ್ಟು, ಸ್ವಂತ ಸಂಪನ್ಮೂಲದಿಂದ ರೈತರಿಗೆ ಪರಿಹಾರ ನೀಡಬೇಕು ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಒತ್ತಾಯಿಸಿದರು.



ನಗರದ ಕೆ.ಜೆ.ಕೊಪ್ಪಲಿನಲ್ಲಿ ಪ್ರತಿಷ್ಠಾಪಿಸಿರುವ ಗಣೇಶ ಮೂರ್ತಿಗೆ ಸೋಮವಾರ ಪೂಜೆ ಸಲ್ಲಿಸಿ, ಅನ್ನದಾನಕ್ಕೆ ಚಾಲನೆ ನೀಡಿದ ನಂತರ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ರಾಜ್ಯ ಸರ್ಕಾರ ಬರ ನಿರ್ವಹಣೆಯಲ್ಲಿ ಸೋತಿದೆ. ರೈತರು ಈಗ ಸಂಕಷ್ಟದಲ್ಲಿದ್ದಾರೆ. ನಾನು ಎರಡು ಬಾರಿ ಮುಖ್ಯಮಂತ್ರಿ ಆಗಿದ್ದಾಗಲೂ ರಾಜ್ಯದ ಸಂಪನ್ಮೂಲದಿಂದಲೇ ನೆರವು ನೀಡಿದ್ದೆ ಎಂದರು.

ನಮ್ಮದು ಯಾವಾಗಲೂ ರೈತ ಪರವಾದ ನಿಲುವು. ಅವರ ಹಿತಕ್ಕಾಗಿ ನಮ್ಮ ಹೋರಾಟ ಇದ್ದೇ ಇರುತ್ತದೆ. ಇದಕ್ಕಾಗಿ ರಾಜ್ಯದಾದ್ಯಂತ ಪಕ್ಷದಿಂದ ರೈತ ಯಾತ್ರೆ ಹಮ್ಮಿಕೊಳ್ಳಲಾಗಿದೆ. ನೈಸ್ ಅಕ್ರಮ, ಬಿಡದಿ ಟೌನ್‌ಶಿಪ್, ರಾಜ್ಯ ಸರ್ಕಾರದ ದುರಾಡಳಿತದ ವಿರುದ್ಧ ನಮ್ಮ ಹೋರಾಟ ಮುಂದುವರಿಯಲಿದೆ ಎಂದು ತಿಳಿಸಿದರು.

ಮಾಜಿ ಸಚಿವ ಸಾ.ರಾ. ಮಹೇಶ್, ಬಿಜೆಪಿ ನಗರ ಜಿಲ್ಲಾ ಘಟಕದ ಅಧ್ಯಕ್ಷ ಎಲ್. ನಾಗೇಂದ್ರ ಪಾಲ್ಗೊಂಡಿದ್ದರು.

# ನಾಗಮ್ಮ, ಸಿದ್ದಮ್ಮರಿಗೆ 'ವಾತ್ಸಲ್ಯ ಮನೆ' ಹಸ್ತಾಂತರ

ಗುಂಡ್ಲುಪೇಟೆ: ತಾಲೂಕಿನ ಕಗ್ಗಳ ಹಾಗೂ ಬಸವಪುರ ಕಾರ್ಯಕ್ಷೇತ್ರದ ನಾಗಮ್ಮ ಮತ್ತು ಸಿದ್ದಮ್ಮ ಅವರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ನಿರ್ಮಿಸಲಾಗಿರುವ 'ವಾತ್ಸಲ್ಯ ಮನೆ'ಗಳನ್ನು ಮೈಸೂರು ಪ್ರಾದೇಶಿಕ ನಿರ್ದೇಶಕ ಯೋಗೀಶ್ ಅವರು ಹಸ್ತಾಂತರಿಸಿದರು.

ನಂತರ ಮಾತನಾಡಿದ ಯೋಗೀಶ್, 'ವಾತ್ಸಲ್ಯ ಮನೆ' ಪರಿಕಲ್ಪನೆಯು ಹೇಮಾವತಿ ಅಮ್ಮನವರ ಆಶಯವಾಗಿದ್ದು, ರಾಜ್ಯಾದ್ಯಂತ ಈಗಾಗಲೇ 947 ವಾತ್ಸಲ್ಯ ಮನೆಗಳನ್ನು ನಿರ್ಮಿಸಿ ಹಸ್ತಾಂತರಿಸಲಾಗಿದೆ ಎಂದು ತಿಳಿಸಿದರು. 'ನಾನು, ನನ್ನದು' ಎಂಬ ಸ್ವಾರ್ಥದ ಮನೋಭಾವದ ನಡುವೆ 'ನಾವು, ನಮ್ಮವರು' ಎಂಬ ಮಾನವೀಯ ಆಶಯದೊಂದಿಗೆ ನಿರ್ಗತಿಕರು, ಅಸಹಾಯಕರು ಹಾಗೂ ದುರ್ಬಲರಿಗೆ 'ನಿಮ್ಮೊಂದಿಗೆ ನಾವಿದ್ದೇವೆ' ಎಂಬ ಧೈರ್ಯ ತುಂಬುವ ನಿಟ್ಟಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಲವು ಸಮಾಜಮುಖಿ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುತ್ತಿದೆ ಎಂದರು.

ಗುಂಡ್ಲುಪೇಟೆ ತಾಲೂಕಿನಲ್ಲಿ 62 ನಿರ್ಗತಿಕರಿಗೆ ಮಾಸಿಕ ತಲಾ ?1,000 ಸಹಾಯಧನ ನೀಡುವುದರ ಜೊತೆಗೆ ಪ್ರತಿತಿಂಗಳು ವಾತ್ಸಲ್ಯ ಫುಡ್ ಹಾಗೂ ವಾತ್ಸಲ್ಯ ಕಿಟ್‌ಗಳನ್ನು ವಿತರಿಸಲಾಗುತ್ತಿದೆ. ಇದರಿಂದ ನಿರ್ಗತಿಕರು ಉತ್ತಮ ಜೀವನ ನಡೆಸಲು ನೆರವಾಗುತ್ತಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದರು.

ಊರಿನ ಮುಖಂಡ ಸಿದ್ದಶೆಟ್ಟಿ ಮಾತನಾಡಿ, ಸರ್ಕಾರದಿಂದಲೂ ಸಾಧ್ಯವಾಗದ ಹಲವು ಸಮಾಜಮುಖಿ ಕಾರ್ಯಗಳನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೈಗೊಳ್ಳುತ್ತಿರುವುದು ಶ್ಲಾಘನೀಯ.

ನಿರ್ಗತಿಕರಿಗೆ ಮಾಸಾಶನ, ವಾತ್ಸಲ್ಯ ಮನೆ ನಿರ್ಮಾಣ, ದೇವಸ್ಥಾನಗಳಿಗೆ ಅನುದಾನ, ಕೆರೆ ಕಾಮಗಾರಿ, ವಿದ್ಯಾರ್ಥಿ ನಿಧಿ, ಪ್ರಗತಿ ನಿಧಿ, ಆರೋಗ್ಯ ರಕ್ಷಾ,



ಸಾಮೂಹಿಕ ಪೂಜೆ, ಶಾಲೆಗಳಿಗೆ ಡೆಸ್ಕ್?ಬೆಂಚ್ ವಿತರಣೆ, ಜ್ಞಾನ ದೀಪ ಶಿಕ್ಷಕರು ಹಾಗೂ ಸುಜ್ಞಾನ ನಿಧಿ ಸೇರಿದಂತೆ ಹಲವು ಕಾರ್ಯಕ್ರಮಗಳ ಮೂಲಕ ಸಮಾಜಕ್ಕೆ ಮಹತ್ವದ ಕೊಡುಗೆ ನೀಡಲಾಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸೇವಾ ಕಾರ್ಯಗಳಿಗೆ ಪೂಜ್ಯ ಧರ್ಮಾಧಿಕಾರಿಗಳು ಹಾಗೂ ಹೇಮಾವತಿ ಅಮ್ಮನವರಿಗೆ ಗ್ರಾಮಸ್ಥರ ಪರವಾಗಿ ಅಭಿನಂದನೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ನಿರ್ದೇಶಕ ದಿನೇಶ್, ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ನಾಗೇಶ್, ಯೋಜನಾಧಿಕಾರಿ ಚಂದ್ರಶೇಖರ್, ತಾಲೂಕು ಸಮನ್ವಯಾಧಿಕಾರಿ ಚೈತ್ರ, ಮೇಲ್ವಿಚಾರಕಿ ರಾಜೇಶ್ವರಿ, ಸೇವಾ ಪ್ರತಿನಿಧಿಗಳಾದ ಮಾದೇವಮ್ಮ ಹಾಗೂ ಸುನಿತಾ ಸೇರಿದಂತೆ ಕಗ್ಗಳ ಮತ್ತು ಬಸವಪುರ ಗ್ರಾಮದ ಮುಖಂಡರು, ಗಣ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಸರ್ವಸದಸ್ಯರ ಸಭೆ ಇಂದು



ಎಚ್.ಡಿ.ಕೋಟೆ: ಪ್ರಜಾಪ್ರಭುತ್ವದ ಭಾರತದಲ್ಲಿ ಸಾಂವಿಧಾನಿಕ ಮೌಲ್ಯಗಳು, ಯುವಜನತೆ ಹಾಗೂ ಸಂಘಟನೆಗಳ ಪಾತ್ರ ಕುರಿತು ವಿಚಾರ ಸಂಕಿರಣ ಹಾಗೂ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ಎಚ್.ಡಿ.ಕೋಟೆ ತಾಲ್ಲೂಕು ಸಮಿತಿಯ ಸರ್ವ ಸದಸ್ಯರ ಸಭೆ ಇಂದು ಬೆಳಿಗ್ಗೆ 11 ಗಂಟೆಗೆ ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನಡೆಯಲಿದೆ.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಅನಿಲ್ ಚಿಕ್ಕಮಾದು ಅವರು ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಿದ್ದಾರೆ. ಪ್ರೊ. ಇಂದಿರಾ ಪುಷ್ಪಾರ್ಚನೆ ನೆರವೇರಿಸಲಿದ್ದು, ಪ್ರಾಧ್ಯಾಪಕ ಕೆ.ಎನ್. ಮಹದೇವಸ್ವಾಮಿ ಮುಖ್ಯ ಭಾಷಣಕಾರರಾಗಿ ಭಾಗವಹಿಸಲಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಸಂಚಾಲಕ ಮಲ್ಲಹಳ್ಳಿ ನಾರಾಯಣ ವಹಿಸಲಿದ್ದು, ಹಾದನೂರು ದೊಡ್ಡಸಿದ್ದು ಅವರು ಸಂವಿಧಾನದ ಪೀಠಿಕೆ ಬೋಧಿಸಲಿದ್ದಾರೆ. ವಿವಿಧ ಸಂಘಟನೆಗಳ ಮುಖಂಡರು, ಪದಾಧಿಕಾರಿಗಳು ಹಾಗೂ ಯುವಜನರು ಭಾಗವಹಿಸಲಿದ್ದಾರೆ.

ಕಾರ್ಯಕರ್ತರು, ಯುವಜನರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಆಯೋಜಕರು ಮನವಿ ಮಾಡಿದ್ದಾರೆ.

# ಸಿಎಂ ಸ್ವಕ್ಷೇತ್ರದಲ್ಲಿ ರೈತ ಸ್ವಾಭಿಮಾನ ಯಾತ್ರೆ

## ಬಂಡೆಗೆ, ಕಲ್ಲಿಗೆ ಭಾವನೆ ಇರುತ್ತಾ? ಸಿಎಂ ವಿರುದ್ಧ ನಿಖಿಲ್ ಕುಮಾರಸ್ವಾಮಿ ವಾಗ್ದಾಳಿ

ರಾಮನಗರ/ಕನಕಪುರ: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸ್ವಕ್ಷೇತ್ರ ಕನಕಪುರದಲ್ಲಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ರಾಜ್ಯ ಸರ್ಕಾರದ ವಿರುದ್ಧ ಘರ್ಜಿಸಿದ್ದಾರೆ. ರಾಜ್ಯದಲ್ಲಿ ಬರ ಪರಿಸ್ಥಿತಿ ನಿರ್ವಹಣೆಯಲ್ಲಿ ವೈಫಲ್ಯ, ಬೈರಮಂಗಲದಲ್ಲಿ ರೈತರ ಹೋರಾಟಕ್ಕೆ ನೀಡದ ಸ್ಪಂದನೆ ಸೇರಿದಂತೆ ವಿವಿಧ ವಿಚಾರಗಳಲ್ಲಿ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ರೈತ ಸ್ವಾಭಿಮಾನಿ ಪಾದಯಾತ್ರೆಗೆ ಚಾಲನೆ ನೀಡಿದ ವೇಳೆ ಮಾತನಾಡಿದ ನಿಖಿಲ್ ಕುಮಾರಸ್ವಾಮಿ ಬಂಡೆಗೆ ಭಾವನೆ ಇದೆಯೇ ಎಂದು ನೇರವಾಗಿ ಡಿ.ಕೆ.ಶಿವಕುಮರ್ ಅವರನ್ನು ಉದ್ದೇಶಿಸಿ ವಾಗ್ದಾಳಿ ನಡೆಸಿದರು. ಸಚಿವ ಎಚ್.ಸಿ.ಬಾಲಕೃಷ್ಣ ವಿರುದ್ಧವೂ ನಿಖಿಲ್ ಹರಿಹಾಯ್ದರು.

ಕನಕಪುರ ಪಟ್ಟಣದ ರೈಸ್ ಮಿಲ್ ಶಿವಾನಂದ ಸರ್ಕಲ್ ನಿಂದ ಆರಂಭವಾದ ಜೆಡಿಎಸ್ ರೈತ ಸ್ವಾಭಿಮಾನ ಪಾದಯಾತ್ರೆಯಲ್ಲಿ ಸಹಸ್ರಾರು ಜನರು ಭಾಗಿಯಾಗಿ ಬೆಂಬಲ ನೀಡಿದರು. ಚೆನ್ನಬಸಪ್ಪ ವೃತ್ತದಲ್ಲಿ ರೈತ ಗೀತೆಯೊಂದಿಗ ಬಹಿರಂಗ ಸಮಾವೇಶಕ್ಕೆ ಚಾಲನೆ ನೀಡಲಾಯಿತು. ನಿಖಿಲ್ ಕುಮಾರಸ್ವಾಮಿ ಸಹಿತ ಹಲವು ಜೆಡಿಎಸ್ ನಾಯಕರು ರಾಜ್ಯ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ಹೊರಹಾಕಿದರು.

### ರಿಯಲ್ ಎಸ್ಟೇಟ್‌ಗೆ ಸಮಯ ಇದೆ, ರೈತರಿಗಾಗಿ ಇಲ್ಲ

ರಾಜ್ಯದಲ್ಲಿ ತೀವ್ರ ಬರ ಪರಿಸ್ಥಿತಿ ಆವರಿಸಿದ್ದು, ಅಂತರ್ಜಲ ಮಟ್ಟ ಸಂಪೂರ್ಣ ಕುಸಿದಿದೆ. ಜಾನುವಾರುಗಳಿಗೆ ಮೇವು ಸಿಗುತ್ತಿಲ್ಲ, ಕುಡಿಯಲು ಕೆರೆ-ಕಟ್ಟೆಗಳಲ್ಲೂ ನೀರಿಲ್ಲದಂತಾಗಿದೆ. ಆದರೂ ರಾಜ್ಯ ಸರ್ಕಾರ ಬರ ಪರಿಹಾರ ಘೋಷಣೆ ಮಾಡಲು ಮೀನಾಮೇಷ ಎಣಿಸುತ್ತಾ, ಕೇಂದ್ರದ ಕಡೆ ಕೈ ತೋರಿಸಿ ಸುಮ್ಮನೆ ಕುಳಿತಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ರಾಜ್ಯ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಆಡಳಿತಕ್ಕೆ ಬಂದ ಬಳಿಕ ಮೂರುವರೆ



ಸಾವಿರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅನ್ನ ಹಾಕುವ ರೈತನ ಬದುಕು ಬೀದಿಗೆ ಬಂದಿದೆ. ಸರ್ಕಾರದಲ್ಲಿ ಕುಳಿತಿರುವ ಜನಪ್ರತಿನಿಧಿಗಳು ಜಿಲ್ಲೆಯ ಹೆಸರನ್ನು ಮಾತ್ರ ಬದಲಿಸಿದ್ದಾರೆ ಹೊರತು, ರೈತರ ಸಮಸ್ಯೆ ಆಲಿಸಿಲ್ಲ. ಅವರು ರಿಯಲ್ ಎಸ್ಟೇಟ್ ಮಾಡುವುದರಲ್ಲಿ ಬ್ಯುಸಿ ಇದ್ದಾರೆ, ರೈತರ ಬಗ್ಗೆ ಚಿಂತೆ ಇಲ್ಲ ಎಂದು ಕಿಡಿಕಾರಿದರು.

ಮಾತ್ರ ಹೃದಯ ಇದ್ದರೆ ಭಾವನೆ ಅರ್ಥವಾಗುತ್ತೆ!

ಜನರ ಬದುಕಿಗಾಗಿ ರಾಜಕಾರಣ ಮಾಡ್ತಾರಂತೆ ಕಾಂಗ್ರೆಸ್‌ನವರು. ಬೇರೆಯವರು ಭಾವನೆಗಳ ಮೇಲೆ ರಾಜಕರಣ ಮಡ್ತಾರಂತೆ. ಬಡವರ ಭಾವನೆಯನ್ನು ಅರ್ಥ ಮಾಡಿಕೊಳ್ಳಲು ಮಾತ್ರ ಹೃದಯ ಬೇಕು. ಆ ಹೃದಯ ಇರುವುದು ಕುಮಾರಣ್ಣನಿಗೆ ಮಾತ್ರ. ಅತ್ಯಲ್ಪ ಅವಧಿಯ ಆಡಳಿತ ಮಾಡಿದರೂ ಕುಮಾರಣ್ಣ ನಾಡಿನ ಜನರ, ರೈತರ, ಹೆಣ್ಣು ಮಕ್ಕಳ, ಶೋಷಿತರ ನೋವಿಗೆ ಸ್ಪಂದಿಸಿದ್ದಾರೆ ಎಂದರು.

### ನಮಗೇನು ಹೊಟ್ಟೆ ಕಿಚ್ಚು ಇಲ್ಲ

ನಿಮ್ಮ ಜಿಲ್ಲೆಯವರು ಸಿಎಂ ಆಗಿದ್ದಾರೆ. ದೇವೇಗೌಡರು, ಕುಮಾರಸ್ವಾಮಿ, ನಿಖಿಲ್ ನಾವೆಲ್ಲರೂ ನೀವು ಸಿಎಂ ಆಗಿರುವುದಕ್ಕೆ ಹೊಟ್ಟೆಕಿಚ್ಚು ಪಡುವುದಿಲ್ಲ. ಇಲ್ಲಿ ನಿಮಗೆ ಮತ ಹಾಕಿರುವ ಜನತೆ ಇದ್ದಾರೆ, ಅವರ ಪರವಾಗಿ ಕೆಲಸ ಮಾಡಿ, ನಿಮಗೆ ನಾವೇ ಶಾಲು, ಹಾರ ಹಾಕಿ ಸನ್ಮಾನ ಮಾಡುತ್ತೇವೆ. ಆದರೆ ಕಳೆದ ಹಲವು ದಿನಗಳಿಂದ ಬೈರಮಂಗಲ ಮಹಿಳೆಯರಿಗೆ ಕಣ್ಣೀರು ಹಾಕಿಸಿದ್ದೀರಿ, ಬಹಳ ದಿನ ನೀವು ರಾಜಕಾರಣ ಮಾಡಲು ಸಾಧ್ಯವಿಲ್ಲ ಎಂದು ಗುಡುಗಿದರು.

### ದಿವಾಳಿ ಸರ್ಕಾರ

ಕೆ.ಎಸ್.ಎನ್.ಡಿ.ಎಂ.ಸಿ ವರದಿ ಬಂದು ಮೂರು ತಿಂಗಳಾದರೂ ಬರ ಎಂದು ಘೋಷಿಸಲು ಮೀನಾಮೇಷ ಎಣಿಸುತ್ತಿದ್ದೀರಿ. ಉಳುಮೆ, ಬೀಜ, ಗೊಬ್ಬರ, ಕೂಲಿ ಎಂದು ಎಕರೆಗೆ 50 ಸಾವಿರ ಖರ್ಚಾಗುತ್ತಿದೆ. ನೀವು ಕೊಡುತ್ತಿರುವುದು ಕೇವಲ 2500 ರೂಪಾಯಿ ಬರ ಪರಿಹಾರ. ಇದು ಬರೀ ಘೋಷಣೆ ಮಾತ್ರ. ಸಿದ್ದರಾಮಣ್ಣ ಬಜೆಟ್ ಮಾಡಿ ಹೋದ ಬಳಿಕ ಖಜಾನೆಯಲ್ಲಿ ಹಣವೇ ಇಲ್ಲ. ಹೊಸ ಘೋಷಣೆ ಮಾಡಬೇಡಿ ಎಂದು ಆರ್ಥಿಕ ಇಲಾಖೆಯೇ ಹೇಳಿದೆ. ಇದು ದಿವಾಳಿಯಾದ ಸರ್ಕಾರ. ಗ್ಯಾರಂಟಿ ಹೆಸರಲ್ಲಿ ಹಣವನ್ನು ಗುಳುಂ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

### ಕನಕಪುರವನ್ನು ಆಯ್ಕೆ ಮಾಡಿಕೊಂಡಿದ್ದೇಕೆ?

ಸಿಎಂ ಅವರ ಸ್ವಕ್ಷೇತ್ರದಲ್ಲೇ ತೀವ್ರ ಬರ ಪರಿಸ್ಥಿತಿ ಇದ್ದು, ಇದುವರೆಗೂ ಬಂದು ರೈತರ ಸಮಸ್ಯೆ ಆಲಿಸಿಲ್ಲ. ಹಾಗಾಗಿ ಸಿಎಂ ಕ್ಷೇತ್ರದಿಂದಲೇ ರೈತ ಸ್ವಾಭಿಮಾನ ಯಾತ್ರೆಯನ್ನು ಆರಂಭಿಸಿದ್ದೇನೆ ಎಂದು ನಿಖಿಲ್ ಕುಮಾರಸ್ವಾಮಿ ಸ್ಪಷ್ಟಪಡಿಸಿದರು. ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಪಾದಯಾತ್ರೆ ಮಾಡಿ ರೈತರ ಸಮಸ್ಯೆ ಆಲಿಸುತ್ತೇನೆ. ಮುಂದಿನ ದಿನಗಳಲ್ಲಿ ನಮ್ಮ ಕುಮಾರಣ್ಣನಿಗೆ ಒಂದು ಅವಕಾಶ ಕೊಡಿ ಎಂದು ಕನಕಪುರದ ಜನತೆಯಲ್ಲಿ ಮನವಿ ಮಾಡುತ್ತೇನೆ ಎಂದರು.

ರೈತ ಸ್ವಾಭಿಮಾನ ಯಾತ್ರೆಯಲ್ಲಿ ಶಾಸಕ ಹೆಚ್.ಟಿ.ಮಂಜು, ವಿಧಾನ ಪರಿಷತ್ ಸದಸ್ಯ ಶರವಣ, ಮಾಜಿ ಶಾಸಕರಾದ ಕೃಷ್ಣಾರೆಡ್ಡಿ, ಮಾಜಿ ಶಾಸಕ ಎ. ಮಂಜುನಾಥ್, ಮಾಜಿ ವಿಧಾನ ಪರಿಷತ್ ಸದಸ್ಯ ರಮೇಶ್ ಗೌಡ, ಜಿಲ್ಲಾಧ್ಯಕ್ಷ ಎಚ್.ಸಿ.ಜಯಮುತ್ತು, ತಾಲ್ಲೂಕು ಅಧ್ಯಕ್ಷರುಗಳಾದ ಸಬ್ಬಕೆರೆ ಶಿವಲಿಂಗಯ್ಯ, ನಾಗರಾಜು (ಚಿಕ್ಕಪ್ಪ), ಗೋವಿಂದಳ್ಳಿ ನಾಗರಾಜು, ಹಾರೋಹಳ್ಳಿ ರಾಮು, ಮುಖಂಡರಾದ ಚಿನ್ನಸ್ವಾಮಿ, ಗೇರಹಳ್ಳಿ ರಾಜೇಶ್, ಪವಿತ್ರಾ, ಸಿದ್ದಮರೀಗೌಡ, ಕಬ್ಬಾಳೇಗೌಡ, ಜಿ.ಟಿ.ಕೃಷ್ಣೇಗೌಡ, ವಕೀಲ ರಾಜಶೇಖರ್, ಜಯಕುಮಾರ್, ಕೆಂಪರಾಜು, ದೊರೆಸ್ವಾಮಿ, ಆಡಿಟರ್ ಕುಮಾರ್, ಕಾಂತರಾಜು, ಬಾಲಗೇರಿ ರವಿ, ಸ್ಟುಡಿಯೋ ಚಂದ್ರು, ಸುರೇಶ್, ಸ್ಟುಡಿಯೋ ಸಿದ್ದು ಸೇರಿದಂತೆ ಜಿಲ್ಲೆಯ ಐದು ತಾಲ್ಲೂಕುಗಳಿಂದ ಆಗಮಿಸಿದ್ದ ಸಾವಿರಾರು ರೈತರು, ಸ್ಥಳೀಯ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

### ನಾಚಿಕೆ ಆಗೊಲ್ಲವೇ?

**ಬರ ಪರಿಹಾರಕ್ಕೆ ಹಣ ಕೊಡಿ ಅಂತ ಕೇಂದ್ರ ಬಳಿ ಮನವಿ ಮಾಡೋಕೆ ಸರ್ವ ಪಕ್ಷ ನಿಯೋಗ ಕರೆದುಕೊಂಡು ಹೋಗ್ತಾರಂತೆ ಮುಖ್ಯಮಂತ್ರಿಗಳು. 37 ಕ್ಷೇತ್ರದಲ್ಲಿ ಗೆದಿದ್ದ ಕುಮಾರಸ್ವಾಮಿ ಅವರು ಮೈತ್ರಿ ಸರ್ಕಾರದಲ್ಲಿ ಅಧಿಕಾರದಲ್ಲಿ ಇದ್ದಾಗ, ರೈತರ ಸಾಲ ಮನ್ನಾ ಮಾಡಿದ್ದರು. ಇಂದು 136 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿರುವ ಕಾಂಗ್ರೆಸ್ ಬರ ಪರಿಹಾರದ ವಿಚಾರದಲ್ಲಿ ಕೇಂದ್ರದತ್ತ ಬೊಟ್ಟು ಮಾಡುತ್ತಿದ್ದಾರೆ. ನಾಚಿಕೆ ಆಗುವುದಿಲ್ಲವೇ ಎಂದು ನಿಖಿಲ್ ಪ್ರಶ್ನಿಸಿದರು. ಹಿಂದೆ ಬರಗಾಲದ ಸಮಯದಲ್ಲಿ ಕುಮಾರಸ್ವಾಮಿ ಅವರು ಕೇಂದ್ರದತ್ತ ನೋಡದೇ ರೈತರ ಸಾಲಮನ್ನಾ ಮಾಡಿದಂತೆ, ಈಗಲೂ ರೈತರ ಸಂಪೂರ್ಣ ಸಾಲಮನ್ನಾ ಮಾಡಬೇಕು ಎಂದರು. ಬರ ಪರಿಹಾರವಾಗಿ ರಾಜ್ಯ ಸರ್ಕಾರ ಘೋಷಿಸಿರುವ 2500 ರೂ ಸಾಲೋದಿಲ್ಲ. ಕನಿಷ್ಠ 25 ಸಾವಿರ ಪರಿಹಾರ ಕೊಡಬೇಕು. ರೈತರಿಗೆ ಕನಿಷ್ಠ 8 ಗಂಟೆ 3 ಫೇಸ್ ವಿದ್ಯುತ್ ಪೂರೈಕೆ ಮಾಡಬೇಕು. ಈಗ ದಿನಕ್ಕೆ 2 ಗಂಟೆ ಮಾತ್ರ ನೀಡಲಾಗುತ್ತಿದೆ. ಮೇವು ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು ಎಂದು ಆಗ್ರಹಿಸಿದರು.**



ಮೊದಲ ಪುಟದಿಂದ

### ಬರ ಅಧ್ಯಯನಕ್ಕೆ 3 ತಂಡ

ಅಧಿಕಾರಿಗಳೊಂದಿಗೆ ಚರ್ಚಿಸಿ ಮಾಹಿತಿ ಪಡೆದುಕೊಳ್ಳಲಿವೆ ಎಂದು ವಿವರಿಸಿದರು. ಸದ್ಯ ಇನ್ನಷ್ಟು ಗ್ರೌಂಡ್ ಟ್ರೂಥಿಂಗ್ ನಡೆಯುತ್ತಿದೆ. ಅದು ಪೂರ್ಣಗೊಂಡ ಬಳಿಕ ಅಂತಿಮ ಮೆಮೊರಾಂಡಂ ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

### ಗವಿಶ್ರೀಗಳಿಗೆ ಆಹ್ವಾನ

ಎಂದು ತಿಳಿಸಿದರು. ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ, ಶಾಸಕ ರಾಘವೇಂದ್ರ ಹಿಟ್ನಾಳ, ಸಂಸದ ರಾಜಶೇಖರ ಹಿಟ್ನಾಳ, ಜಿಲ್ಲಾಧಿಕಾರಿ ಡಾ.ಸುರೇಶ ಇಟ್ನಾಳ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಾಹಿಲ್ ಇತರರು ಭಾಗವಹಿಸಿದ್ದರು.

### ಪಿಂಚಣಿಗೆ ಮರು ಸೇರ್ಪಡೆ

ಸುಮಾರು 23 ಲಕ್ಷ ಜನರ ಪಿಂಚಣಿ ರದ್ದಾಗಿತ್ತು. ಈಗ ಆದಾಯದ ಮಿತಿಯನ್ನು ಹೆಚ್ಚಿಸಿರುವುದರಿಂದ ಅರ್ಹ ಫಲಾನುಭವಿಗಳಿಗೆ ಮತ್ತೆ ಪಿಂಚಣಿ ದೊರೆಯಲಿದೆ ಎಂದು ಹೇಳಿದರು.

### ತಡೆ ನೀಡಲು ಸುಪ್ರೀಂ ನಕಾರ

ಈ ಹಣವನ್ನು ಸಂಗ್ರಹಿಸದೆ ಇದ್ದರೆ, ಈ ಶುಲ್ಕ ವಿಧಿಸಲು ಇರುವ ಕಾನೂನಾತ್ಮಕ ಆಧಾರವೇನು? ಎಂದು ನ್ಯಾಯಾಲಯ ಪ್ರಶ್ನಿಸಿದೆ.

### ಅಕ್ರಮ ಸೈಟ್: ಪಟ್ಟಿ ಬಿಡುಗಡೆ

ಪ್ರಕಟಿಸುತ್ತೇವೆ. ಅಕ್ರಮದಿಂದ ಪಡೆದ ಸೈಟ್ ಅನ್ನು ಬೇರೆಯವರಿಗೆ ಮಾರಿದರೆ ಖರೀದಿದಾರರಿಗೆ ಸಮಸ್ಯೆ ಆಗಬಹುದೆಂಬ ಅಂಶವನ್ನು ಪರಿಶೀಲನೆ ನಡೆಸುತ್ತಿದ್ದೇವೆ ಎಂದು ಹೇಳಿದರು.

# ಸಂಘಟನೆ ಬಲಪಡಿಸಲು ಸಮಾಲೋಚನಾ ಸಭೆ

ಮೈಸೂರು: ಕನ್ನಡಕ್ಕೆ, ಕರುನಾಡಿಗೆ ಹಾಗೂ ಕನ್ನಡಿಗರಿಗೆ ತನ್ನಿಂದಾದ ರಕ್ಷಣೆ, ಸೇವೆ ಮತ್ತು ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವ ನಿಟ್ಟಿನಲ್ಲಿ ನಿರ್ವಂಚನೆಯಿಂದ ಸತತ ಆರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಕನ್ನಡಾಂಬೆ ರಕ್ಷಣಾ ವೇದಿಕೆಯೊಂದು ಮಾದರಿ ಸಂಘಟನೆ ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ನಗರ ಘಟಕದ ಅಧ್ಯಕ್ಷ ಹಾಗೂ ಕವಿ ಡಾ.ಜಯಪ್ಪ ಹೊನ್ನಾಳಿ ಹೇಳಿದರು.

ನಗರದ ಜಲದರ್ಶಿನಿಯಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಆಯೋಜಿಸಿದ್ದ ಆತ್ಮಾವಲೋಕನ, ಸಮಾಲೋಚನೆ ಹಾಗೂ ಕಾರ್ಯಕರ್ತರ ಮಾರ್ಗದರ್ಶನ ಕಾರ್ಯಾಗಾರದಲ್ಲಿ ಪ್ರಧಾನ ಭಾಷಣಕಾರರಾಗಿ ಮಾತನಾಡಿದ ಅವರು, ಸಂಘಟನೆ ತನ್ನ ಶಕ್ತಿಯನ್ನು ವೈಯಕ್ತಿಕ ಲಾಭಕ್ಕಾಗಿ ಬಳಸದೆ, ಸಮಾಜದ ಒಳಿತಿಗಾಗಿ, ಕರ್ತವ್ಯ, ತ್ಯಾಗ ಮತ್ತು ಸೇವಾ ಮನೋಭಾವದಿಂದ ಬಳಸಬೇಕು. ಸೇವೆ



ಎನ್ನುವುದು ಲಾಭ-ನಷ್ಟದ ಲೆಕ್ಕಾಚಾರವಲ್ಲ; ಅದು ಸಮರ್ಪಣೆಯ ಸತ್ಸಂಕಲ್ಪನೆಯಾಗಿದೆ ಎಂಬುದನ್ನು ಕನ್ನಡಾಂಬೆ ರಕ್ಷಣಾ ವೇದಿಕೆ ತನ್ನ ಆರು ವರ್ಷಗಳ ಕಾರ್ಯಚಟುವಟಿಕೆಗಳ ಮೂಲಕ ತೋರಿಸಿಕೊಟ್ಟಿದೆ ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಕನ್ನಡಾಂಬೆ ರಕ್ಷಣಾ ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಬಿ.ಬಿ. ರಾಜಶೇಖರ ಮಾತನಾಡಿ, ಕನ್ನಡಾಂಬೆ ರಕ್ಷಣಾ ವೇದಿಕೆ ಕಳೆದ ಆರು ವರ್ಷಗಳಲ್ಲಿ ನಡೆದು ಬಂದ ಹಾದಿಯನ್ನು ಆತ್ಮಾವಲೋಕನ ಮಾಡಿಕೊಂಡು, ಮುಂದಿನ ದಿನಗಳಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ಉದ್ದೇಶ ಹೊಂದಿದೆ. ಕನ್ನಡದ ವಿಚಾರ, ನಾಡು-ನುಡಿ, ನೆಲ-ಜಲ, ಸಾಮಾಜಿಕ ನ್ಯಾಯ ಹಾಗೂ ಜನಪರ ಸಮಸ್ಯೆಗಳ ಕುರಿತು ವೇದಿಕೆ ನಿರಂತರವಾಗಿ ಧ್ವನಿ ಎತ್ತುತ್ತಾ ಬಂದಿದೆ. ಮುಂದಿನ ದಿನಗಳಲ್ಲಿ ಸಂಘಟನೆಯನ್ನು ತಳಮಟ್ಟದಿಂದ ಬಲಪಡಿಸಿ, ಪ್ರತಿ ಜಿಲ್ಲೆ, ತಾಲೂಕು ಹಾಗೂ ಗ್ರಾಮ ಮಟ್ಟದಲ್ಲಿ ಜವಾಬ್ದಾರಿಯುತ ಕಾರ್ಯಕರ್ತರ ತಂಡವನ್ನು ರೂಪಿಸುವುದು ಪ್ರಮುಖ ಗುರಿಯಾಗಿದೆ ಎಂದು ಹೇಳಿದರು.

ನಿರೂಪಕ ಹಾಗೂ ಲೇಖಕ ಯಡಿಯೂರು ಸಮಿಯುಲ್ಲಾ ಪ್ರಾಸ್ತಾವಿಕವಾಗಿ ಮಾತನಾಡಿದರು. ನಂಜುಂಡ, ಶಿವಕುಮಾರ್, ತಾರಾ, ಕರಿಗೌಡ, ಸಿಂಗ್ರಿ ಗೌಡ, ನಾಗರಾಜ್, ಪರ್ವೀನ್ ತಾಜ್, ಹೊನ್ನೇಗೌಡ, ಲಿಂಗರಾಜಪ್ಪ, ಶೇಖರ, ದೊರೆಸ್ವಾಮಿ, ಗುರು,ಗಾಯಿತ್ರಿ, ರಾಮಮ್ಮ, ಲಕ್ಷ್ಮಮ್ಮ, ಕುಮಾರ್, ಶಿವರುದ್ರ, ಪುಟ್ಟಣ್ಣ, ಅಜಯ್ ಶೆಟ್ಟಿ, ನಂದನ್, ಮಹೇಂದ್ರ ಇನ್ನಿತರರು ಉಪಸ್ಥಿತರಿದ್ದರು.

# ಯತೀಂದ್ರರಿಂದ ಮಾವುತರು, ಕುಟುಂಬಸ್ಥರಿಗೆ ಅತಿಥ್ಯ

**ಮೈಸೂರು:** ವಿಶ್ವ ವಿಖ್ಯಾತ ಮೈಸೂರು ದಸರಾ ಜಂಬೂ ಸವಾರಿ ಆನೆಗಳೊಂದಿಗೆ ಆಗಮಿಸಿರುವ ಮಾವುತರು ಹಾಗೂ ಕುಟುಂಬಸ್ಥರಿಗೆ ಅರಮನೆ ಆವರಣದಲ್ಲಿ ಸೋಮವಾರ ನಗರಾಭಿವೃದ್ಧಿ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಡಾ.ಯತೀಂದ್ರ ಸಿದ್ದರಾಮಯ್ಯ ಉಪಹಾರ ಬಡಿಸಿ ಅವರೊಂದಿಗೆ ಉಪಹಾರ ಸೇವಿಸಿ, ಮೂಲಭೂತ ವಸ್ತುಗಳ ಕಿಟ್ ವಿತರಣೆ ಮಾಡಿದರು.

ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಈ ಬಾರಿಯ ದಸರಾ ಆಚರಣೆಗೆ ಅಗತ್ಯವಿರುವ ಎಲ್ಲಾ ಸಿದ್ಧತೆಗಳು ಬಿರುಸಿನಿಂದ ಸಾಗಿವೆ. ಈಗಾಗಲೇ ದಸರಾ ಉನ್ನತ ಮಟ್ಟದ ಸಮಿತಿಗಳ ಸಭೆ ಹಾಗೂ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಹೈಪವರ್ ಕನೆಕ್ಟಿವಿಟಿ ಸಭೆಗಳನ್ನು ನಡೆಸಿ ಸಿದ್ಧತೆಗಳ ಪರಿಶೀಲನೆ ನಡೆಸಲಾಗಿದೆ. ದಸರಾ ಮಹೋತ್ಸವದ ಪ್ರತಿಯೊಂದು ದಿನವೂ ಒಂದೊಂದು ಕಾರ್ಯಕ್ರಮಕ್ಕೆ ಸಚಿವರುಗಳನ್ನು ಉಸ್ತುವಾರಿಯಾಗಿ ಹಂಚಿಕೆ ಮಾಡಲಾಗಿದೆ. ದಸರಾ ಉಪ ಸಮಿತಿಗಳ ಸಭೆಗಳನ್ನು ನಡೆಸಿ, ದಸರಾ ಆರಂಭದ ದಿನದಿಂದ ವಿಜಯದಶಮಿವರೆಗೆ ಎಲ್ಲಾ ಕಾರ್ಯಕ್ರಮಗಳು ಸುಸೂತ್ರವಾಗಿ ನಡೆಯುವಂತೆ



ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು. ಉದ್ಘಾಟಕರ ಕುರಿತಾದ ವದಂತಿಗಳಿಗೆ ಸ್ಪಷ್ಟನೆ ನೀಡಿ, ಕನ್ನಡ ಹಾಗೂ ಸಂಸ್ಕೃತಿ ಇಲಾಖೆಯ ಸಚಿವರು ಮೊದಲೇ ಅವರ ಬಳಿ ಚರ್ಚಿಸಿ, ಒಪ್ಪಿಗೆ ಪಡೆದ ನಂತರವೇ ಆಹ್ವಾನ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದರು.

ದಸರಾ ಹಬ್ಬದ ವೇಳೆ ಪ್ರವಾಸಿಗರಿಗೆ ತೊಂದರೆಯಾಗದಂತೆ ಮೈಸೂರು ನಗರದ ಮುಖ್ಯ ರಸ್ತೆ ಕಾಮಗಾರಿಗಳನ್ನು ಹಬ್ಬ ಮುಗಿಯುವವರೆಗೆ ತಾತ್ಕಾಲಿಕವಾಗಿ ತಡೆಹಿಡಿಯಲು ಸೂಚಿಸಲಾಗಿದೆ ಹಾಗೂ ಪರ್ಯಾಯ ಸಂಚಾರ ವ್ಯವಸ್ಥೆ ಮಾಡಲು ನೇಮಿಸಲಾಗಿದೆ. ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳಿಗೆ ವಾರ್ಷಿಕ ಸುಮಾರು 52,000 ಕೋಟಿ ರೂಪಾಯಿ ವೆಚ್ಚವಾಗುತ್ತಿದ್ದು, ಜನರಿಗೆ ನೀಡಿದ ಭರವಸೆಯಂತೆ ಯಾವುದೇ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವುದಿಲ್ಲ. ಪ್ರತಿ ವರ್ಷದಂತೆ ಮಾವುತರು ಮತ್ತು ಕಾವಾಡಿಗರಿಗೆ ಅಗತ್ಯ ವ್ಯವಸ್ಥೆಗಳನ್ನು ಮಾಡಲಾಗುತ್ತಿದ್ದು, ಈ ಬಾರಿಯೂ ಉಸ್ತುವಾರಿ ಹೊಣೆಗಾರಿಕೆಯನ್ನು ಹಂಚಿಕೆ ಮಾಡಲಾಗಿದೆ. ಇದೇ ಸಂದರ್ಭದಲ್ಲಿ ಮಾವುತರ ಮಕ್ಕಳಿಗೆ ತೆರೆದಿರುವ ತಾತ್ಕಾಲಿಕ ಶಾಲೆಗೆ ತೆರಳಿ ಮಕ್ಕಳೊಂದಿಗೆ ಸಂವಾದ ನಡೆಸಿ ಮಕ್ಕಳ ನೃತ್ಯ ವೀಕ್ಷಿಸಿದರು. ನಂತರ ಯುವ ದಸರಾ, ರೈತ ದಸರಾ, ಯೋಗ ದಸರಾ, ಕಂಬಳ, ಶ್ವಾನ ಸೇರಿದಂತೆ ಪ್ರಾಣಿಗಳ ಪ್ರದರ್ಶನಗಳ ಪೋಸ್ಟರ್ ಬಿಡುಗಡೆ ಮಾಡಿದರು.

ಶಾಸಕ ಜಿ.ಟಿ.ದೇವೇಗೌಡ, ವಿಧಾನ ಪರಿಷತ್ತಿನ ಸದಸ್ಯ ಡಾ.ಡಿ.ತಿಮ್ಮಯ್ಯ, ಶಾಸಕ ಹಾಗೂ ಅರಣ್ಯ ವಸತಿ ನಿಗಮದ ಅಧ್ಯಕ್ಷ ಅನಿಲ್ ಚಿಕ್ಕಮಾದು, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಅಯೂಬ್ ಖಾನ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಜಿಲ್ಲಾ ಗ್ಯಾರಂಟಿ ಯೋಜನೆಯ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಮತ್ತಿತರರು ಉಪಸ್ಥಿತರಿದ್ದರು.

# ಟ್ಯಾಂಕರ್ ಹರಿದು ಬೈಕ್ ಸವಾರ ಸಾವು

ಗುಂಡ್ಲುಪೇಟೆ, ಸೆ.28:ಬೈಕ್ ಸವಾರನ ಮೇಲೆ ಟ್ಯಾಂಕರ್ ಹರಿದು ಮೃತಪಟ್ಟಿರುವ ಘಟನೆ ತಾಲೂಕಿನ ಅರೇಪುರ ಗೇಟ್ ಸಮೀಪ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ.



ಓಡಿಶಾ ಮೂಲದ ವ್ಯಕ್ತಿ ಕಮಲಕಾಂತ್ ನಾಯಕ್ ಸ್ಥಳದಲ್ಲೇ ಮೃತಪಟ್ಟ ವ್ಯಕ್ತಿ. ಈತ ಬೈಕ್ ನಲ್ಲಿ ತೆರಳುತ್ತಿದ್ದ ಸಂದರ್ಭದಲ್ಲಿ ರಸ್ತೆಗೆ ನೀರು ಹಾಕುತ್ತಿದ್ದ ಟ್ಯಾಂಕರ್ ಬೈಕ್ ಸವಾರನ ಮೇಲೆ ಹರಿದಿದೆ. ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಈತ ಗ್ರೀನ್ ಪ್ರೋ ನಲ್ಲಿ ಕಾರ್ಮಿಕನಾಗಿ ಕೆಲಸ ನಿರ್ವಹಿಸುತ್ತಿದ್ದ ಎಂದು ತಿಳಿದುಬಂದಿದೆ.

ಈ ಸಂಬಂಧ ಬೇಗೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

## ಕುಲಪತಿ ಲೋಕನಾಥ್ ಗೆ ಜಿಲ್ಲಾ ಒಕ್ಕಲಿಗರ ಸಂಘದಿಂದ ಸನ್ಮಾನ



ಮೈಸೂರು: ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದವತಿಯಿಂದ ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಆವರಣದಲ್ಲಿರುವ ಓಪನ್ ಏರ್ ಥಿಯೇಟರ್‌ಗೆ 'ಕುವೆಂಪು ಬಯಲು ರಂಗ ಮಂದಿರ' ಎಂದು ನಾಮಕರಣ ಮಾಡಿರುವುದಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರೊ.ಎನ್.ಕೆ.ಲೋಕನಾಥ್, ಮಾನಸಗಂಗೋತ್ರಿ ಪರಿಕಲ್ಪನೆಯೊಂದಿಗೆ ಕುವೆಂಪು ಅವರಿಗೆ ಅತ್ಯಂತ ನಿಕಟವಾದ ಸಂಬಂಧವಿದೆ. ಕುವೆಂಪು ಅವರು ಮಾನಸಗಂಗೋತ್ರಿ ಕ್ಯಾಂಪಸ್‌ನ ಹೃದಯಭಾಗದಲ್ಲಿರಬೇಕು ಎಂಬ ಆಶಯದಿಂದ, ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರ ಸಮ್ಮತಿಯೊಂದಿಗೆ ಬಯಲು ರಂಗ ಮಂದಿರಕ್ಕೆ 'ಕುವೆಂಪು ಬಯಲು ರಂಗ ಮಂದಿರ' ಎಂದು ನಾಮಕರಣ ಮಾಡಲಾಗಿದೆ ಎಂದು ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ಹಾಗೂ ಪರಂಪರೆಯನ್ನು ಸ್ಮರಿಸುವ ನಿಟ್ಟಿನಲ್ಲಿ ಮಾನಸಗಂಗೋತ್ರಿಯ ವಿವಿಧ ವಿಭಾಗಗಳಲ್ಲಿ ಕುವೆಂಪು ಹಾಗೂ ಮೈಸೂರು ಅರಸರ ಛಾಯಾಚಿತ್ರಗಳನ್ನು ಅನಾವರಣಗೊಳಿಸಲಾಗಿದೆ. ಇತ್ತೀಚೆಗೆ ನಿಧನರಾದ ಶ್ರೀಮತಿ ಜಾನಕಿ ಅವರ ಹೆಸರನ್ನು ಲಲಿತ ಕಲಾ ಕಾಲೇಜಿನ ಆಡಿಟೋರಿಯಂಗೆ ಇಡಲಾಗಿದೆ. ಯುವ ಸಂಭ್ರಮ ಹಾಗೂ ದಸರಾ ಸಂಭ್ರಮದ ಸಂದರ್ಭದಲ್ಲಿ **'ಕುವೆಂಪು ಬಯಲು ರಂಗ ಮಂದಿರ'**ದ ನಾಮಕರಣವು ಮತ್ತೊಂದು ಹೊಸ ಸೇರ್ಪಡೆಯಾಗಿದೆ ಎಂದು ಹೇಳಿದರು.

ಇದೇ ವೇಳೆ ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಸಿ ಮರಿಸ್ವಾಮಿ ಹಾಗೂ ಪ್ರಧಾನ ಕಾರ್ಯದರ್ಶಿ ಎಂ.ಈ.ಚೇತನ್ ಮಾತನಾಡಿ, ಹಲವು ವರ್ಷಗಳಿಂದ ಯಾವುದೇ ನಿರ್ದಿಷ್ಟ ಹೆಸರು ಇಲ್ಲದೆ ಇದ್ದ ಬಯಲು ರಂಗ ಮಂದಿರಕ್ಕೆ ಕುವೆಂಪು ಅವರ ಹೆಸರನ್ನು ಇಟ್ಟು 'ಕುವೆಂಪು ಬಯಲು ರಂಗ ಮಂದಿರ' ಎಂದು ನಾಮಕರಣ ಮಾಡಿರುವುದು ಶ್ಲಾಘನೀಯ ಕಾರ್ಯವಾಗಿದೆ. ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಹಾಗೂ ಎಲ್ಲಾ ಸಿಂಡಿಕೇಟ್ ಸದಸ್ಯರು ಕೈಗೊಂಡಿರುವ ಈ ನಿರ್ಧಾರಕ್ಕೆ ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಪರವಾಗಿ ಅಭಿನಂದನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಅಲತ್ತೂರು ಜಯರಾಮ್, ನಿರ್ದೇಶಕರಾದ ಜಿ ಕುಮಾರ್ ಗೌಡ, ಬಿಪಿ ಬೋರೇಗೌಡ, ಎ ರವಿ, ಒಂಟಿಕೊಪ್ಪಲ್ ಗುರುರಾಜ್, ಗಿರೀಶ್ ಗೌಡ, ಪತ್ರಕರ್ತರಾದ ಎಸ್.ಟಿ.ರವಿಕುಮಾರ್, ಸಿಂಡಿಕೇಟ್ ಸದಸ್ಯರಾದ ಮಹದೇಶ್, ಗೋಕುಲ್ ಗೋವರ್ಧನ್,ನಟರಾಜು, ಮುಖಂಡರಾದ ಬೀಡನಹಳ್ಳಿ ಸತೀಶ್ ಗೌಡ, ಡಾ.ಲೋಕೇಶ್, ಸಾರಾ ಅರುಣ್, ಪಡುವಾರಳ್ಳಿ ಕುಮಾರ್,ಮಾಯಣ್ಣ, ಜೆ.ಸ್ವಾಮಿ ಗೌಡ, ಕೆಎಸ್ ಆರ್ ಟಿಸಿ ವಿಶ್ವನಾಥ್, ಉದ್ಯಮಿ ಚೇತನ್ ಗೌಡ, ಯರಗನಹಳ್ಳಿ ಸಿದ್ದು ಇತರರು ಉಪಸ್ಥಿತರಿದ್ದರು.

## ತುಂಬಸೋಗೆ ಗ್ರಾಮದಲ್ಲಿ ಬೋನಿಗೆ ಬಿದ್ದ ಚಿರತೆ

ಎಚ್.ಡಿ.ಕೋಟೆ: ತಾಲೂಕಿನ ತುಂಬಸೋಗೆ ಗ್ರಾಮದಲ್ಲಿ ಕಳೆದ ಕೆಲ ದಿನಗಳಿಂದ ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದ್ದ ಚಿರತೆಯೊಂದು ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಸೆರೆಯಾಗಿದೆ.

ಗ್ರಾಮದ ಅಂಕನಾಯಕ ಎಂಬುವವರ ಜಮೀನಿನಲ್ಲಿ ಅರಣ್ಯ ಇಲಾಖೆ ಬೋನು ಅಳವಡಿಸಿತ್ತು. ಸುಮಾರು ಮೂರು ವರ್ಷದ ಗಂಡು ಚಿರತೆ ಶುಕ್ರವಾರ ಬೆಳಗಿನ ಜಾವ ಬೋನಿಗೆ ಬಿದ್ದಿದೆ.

ಕಳೆದ ಕೆಲ ದಿನಗಳಿಂದ ಗ್ರಾಮದ ಸುತ್ತಮುತ್ತ ಚಿರತೆ ಕಾಣಿಸಿಕೊಳ್ಳುತ್ತಿತ್ತು. ಗುರುವಾರ ಚಿರತೆ ಕಾಡುಹಂದಿಯನ್ನು ಬೇಟೆಯಾಡಿ ಮರದ ಮೇಲೆ ಕೊಂಡೊಯ್ದು ತಿನ್ನುತ್ತಿದ್ದ ದೃಶ್ಯವನ್ನು ಗ್ರಾಮಸ್ಥರು ಗಮನಿಸಿದ್ದರು. ಇದರಿಂದ ಆತಂಕಗೊಂಡ ಗ್ರಾಮಸ್ಥರು ಕೃಷಿ ಚಟುವಟಿಕೆಗಳಿಗಾಗಿ ಜಮೀನುಗಳಿಗೆ ತೆರಳಲು ಕೂಡ ಭಯಪಡುವಂತಾಗಿತ್ತು. ಮಾಹಿತಿ ತಿಳಿದು ಸ್ಥಳಕ್ಕೆ ಭೇಟಿ ನೀಡಿದ ಅರಣ್ಯ ಇಲಾಖೆ ಸಿಬ್ಬಂದಿ ಪರಿಶೀಲನೆ ನಡೆಸಿದಾಗ ಮರದ ಮೇಲೆ ಕಾಡುಹಂದಿಯ ಕಳೆಬರ ಪತ್ತೆಯಾಗಿತ್ತು. ಚಿರತೆಯನ್ನು ಸೆರೆಹಿಡಿಯಲು ಅದೇ ಕಳೆಬರವನ್ನು ಬೋನಿನಲ್ಲಿ ಇರಿಸಿ ಗುರುವಾರ ಸಂಜೆ ಬೋನು ಅಳವಡಿಸುವ ಜೊತೆಗೆ ಸಿಸಿ ಕ್ಯಾಮರಾವನ್ನು ಕೂಡ ಅಳವಡಿಸಲಾಗಿತ್ತು.

ಬೋನು ಅಳವಡಿಸಿದ ಸುಮಾರು 12 ಗಂಟೆಗಳಲ್ಲೇ ಹಂದಿಯ ಮಾಂಸ ತಿನ್ನಲು ಬಂದ ಚಿರತೆ ಬೋನಿಗೆ ಸೆರೆಯಾಗಿದೆ. ಶುಕ್ರವಾರ ಬೆಳಗಿನ ಜಾವ ಚಿರತೆ ಬೋನಿಗೆ ಬಿದ್ದಿರುವ ದೃಶ್ಯ ಅರಣ್ಯ ಇಲಾಖೆ ಅಳವಡಿಸಿದ್ದ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಬೋನಿಗೆ ಬಿದ್ದ ಚಿರತೆಯನ್ನು ಅರಣ್ಯ ಸಿಬ್ಬಂದಿ ವಶಕ್ಕೆ ಪಡೆದು ಆರೋಗ್ಯ ತಪಾಸಣೆ ನಡೆಸಿದ ಬಳಿಕ ಸುರಕ್ಷಿತವಾಗಿ ಕಾಡಿಗೆ ಬಿಡಲಾಗಿದೆ. ಚಿರತೆ ಸೆರೆಯಾಗಿರುವುದರಿಂದ ಕಳೆದ ಕೆಲ ದಿನಗಳಿಂದ ಆತಂಕದಲ್ಲಿದ್ದ ತುಂಬಸೋಗೆ ಗ್ರಾಮದ ಜನರು ಇದೀಗ ನಿಟ್ಟುಸಿರು ಬಿಡುವಂತಾಗಿದೆ.



# ಹೇರಂಬ ಪಂಚಮುಖಿ ಗಣಪತಿ ಮೂರ್ತಿ ವಿಸರ್ಜನೆ

ರಾಮನಗರ: ಜಿಲ್ಲಾದ್ಯಂತ ಗಮನ ಸೆಳೆದಿದ್ದ ಇಲ್ಲಿನ ಛತ್ರದ ಬೀದಿಯಲ್ಲಿ ಪ್ರತಿಷ್ಠಾಪಿಸಿದ್ದ ಮುದ್ಗಲ್ ಪುರಾಣದ ಪ್ರಸಿದ್ಧ ಹೇರಂಬ ಪಂಚಮುಖಿ ಗಣಪತಿ ಮೂರ್ತಿಯನ್ನು ಭಾನುವಾರ ಸಂಜೆ ವಿಸರ್ಜಿಸಲಾಯಿತು.

ಅರ್ಕಾವತಿ ವಿದ್ಯಾಗಣಪತಿ ಯುವ ಸೇವಾ ಸಂಘ ಮತ್ತು ಅರಳೀಕಟ್ಟೆ ಗೆಳೆಯರ ಬಳಗ ಕಳೆದ ನಾಲ್ಕು ದಶಕಗಳಿಂದ ವೈವಿಧ್ಯಮಯ ಗಣಪತಿ ಮೂರ್ತಿಗಳನ್ನು ಪ್ರತಿಷ್ಠಾಪಿಸುತ್ತಿದ್ದು, ಜನರ ಗಮನ ಸೆಳೆಯುತ್ತಿದೆ. ಪ್ರತಿ ಬಾರಿಯೂ ಪುರಾಣಗಳಲ್ಲಿ ಉಲ್ಲೇಖಿಸಿರುವಂತೆ ಗಣಪತಿ ಮೂರ್ತಿಗಳನ್ನು ಸೃಜಿಸಿ ಧಾರ್ಮಿಕ ಭಾವನೆಯನ್ನು ಹೆಚ್ಚಿಸುತ್ತಾ ಬಂದಿದ್ದಾರೆ. ಈ ಬಾರಿ ಪಂಚಮುಖಿ ಗಣಪತಿಯನ್ನು ಮುದ್ಗಲ್ ಪುರಾಣದಲ್ಲಿ ಉಲ್ಲೇಖಿಸಿದಂತೆ ಗಣಪತಿ ಮೂರ್ತಿಯನ್ನು ಸೃಜಿಸಲಾಗಿತ್ತು.

**ಗಣೇಶೋತ್ಸವಗಳು ಜನರಲ್ಲಿನ ಬಾಂಧವ್ಯವನ್ನು ಬೆಸೆಯುತ್ತಿದೆ – ಕೆ.ಶೇಷಾದ್ರಿ**

ಮುದ್ಗಲ್ ಪುರಾಣದ ಪ್ರಸಿದ್ಧ ಹೇರಂಬ ಪಂಚಮುಖಿ ಗಣಪತಿ ಮೂರ್ತಿಯ ವಿಸರ್ಜನಾ



ಮೆರವಣಿಗೆಗೆ ಚಾಲನೆ ನೀಡಿದ ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಮಾತನಾಡಿ, ಸಾರ್ವಜನಿಕ ಗಣೇಶೋತ್ಸವಗಳು ಯುವಕರಲ್ಲಿ ಒಗ್ಗಟ್ಟು ಗೌರವ, ವಿಶ್ವಾಸ, ಪರಸ್ಪರರಲ್ಲಿ ಆತ್ಮೀಯತೆ ಮೂಡಿಸುತ್ತಿವೆ, ಸಾಮರಸ್ಯವನ್ನು ಸಾರುತ್ತಿದೆ ಎಂದರು. ಸ್ವಾತಂತ್ರ್ಯ ಪೂರ್ವದಲ್ಲಿ ಮನೆ ಮನೆಗೆ ಸೀಮಿತವಾಗಿದ್ದ ಗಣೇಶಮೂರ್ತಿ ಪ್ರತಿಷ್ಠಾಪನೆಯನ್ನು ಬಾಲಗಂಗಾಧರ ತಿಲಕರು ಜನರನ್ನು ಒಗ್ಗೂಡಿಸುವ ಸಲುವಾಗಿ ಸಾರ್ವಜನಿಕ ಗಣೇಶೋತ್ಸವ ಆಚರಣೆಗೆ ತಂದರು. ಅಂದಿನಿಂದಲೂ ಸಾರ್ವಜನಿಕ ಗಣೇಶೋತ್ಸವಗಳು ವಿಜೃಂಭಣೆಯಿಂದ ನಡೆಯುತ್ತಿವೆ ಎಂದರು.

ಬಿಜೆಪಿ ರಾಮನಗರ ತಾಲ್ಲೂಕು ಅಧ್ಯಕ್ಷ ಗೌತಮ್‌ಗೌಡ ಮಾತನಾಡಿ ಭವಿಷ್ಯದಲ್ಲಿ ಮತ್ತಷ್ಟು ವೈಶಿಷ್ಟ್ಯ ಗಣೇಶ ಆಚರಣೆ ಸಮಿಯವರಿಂದ ಆಗಲಿ ಎಲ್ಲರಿಗೂ ಗಣೇಶ ಒಳಿತು ಮಾಡಲಿ ಎಂದರು..

ಹೇರಂಬ ಗಣಪತಿ ಮೂರ್ತಿಯ ಮೆರವಣಿಗೆ ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ ಭಕ್ತರಿಂದ ಪೂಜೆ ಸ್ವೀಕರಿಸಿದ ನಂತರ ಭಾನುವಾರ ಸಂಜೆ ರಂಗರಾಯರದೊಡ್ಡಿ ಕೆರೆ ಬಳಿಯ ಸಿರಿಗೌರಿ ಕಲ್ಯಾಣಿಯಲ್ಲಿ ವಿಸರ್ಜನೆ ಮಾಡಲಾಯಿತು. ಮೆರವಣಿಗೆಯಲ್ಲಿ ಡೊಳ್ಳುಕುಣಿತ, ಮೈಸೂರು ಚಂಡೆ, ಪೂಜಾ ಕುಣಿತ, ವೀರಗಾಸೆ ಅಘೋರಿ, ಗಾರುಡಿ, ಚಿಲಿಪಿಲಿ ಗೊಂಬೆ, ತಮಟೆ ಕಲಾವಿದರ ಜನಪದ ಕಲಾ ಮೇಳಗಳು ಮೆರವಣಿಗೆಗೆ ಮತ್ತಷ್ಟು ಮೆರಗು ಹೆಚ್ಚಿಸಿತ್ತು. ನಗರ ಠಾಣೆ ಸರ್ಕಲ್ ಇನ್‌ಸ್ಪೆಕ್ಟರ್ ರಮೇಶ್, ಸಬ್‌ಇನ್‌ಸ್ಪೆಕ್ಟರ್ ದೇವು, ಗಣೇಶ್ ಜುವೆಲ್ಲರ್ಸ್ ಮಾಲೀಕ ಲಕ್ಷ್ಮಣ್, ವಿಪ್ರ ಯುವ ಸೇವಾ ಸಮಿತಿ ಟ್ರಸ್ಟ್ ಅಧ್ಯಕ್ಷ ಕೇಶವ ವೈದ್ಯ, ಅರ್ಕಾವತಿ ವಿದ್ಯಾಗಣಪತಿ ಸೇವಾ ಸಮಿತಿ ಅಧ್ಯಕ್ಷ ರವೀಂದ್ರ ಹೇರ್ಳೆ, ಕಾರ್ಯದರ್ಶಿ ಉಮಾ ಮಹದೇವಪ್ಪ, ಖಜಾಂಚಿ ಗಿರೀಶ್‌ಕುಮಾರ್, ಸಂಚಾಲಕರಾದ ಆಟೋರಾಜು, ಆರ್. ಲೋಹಿತ್ ಸದಸ್ಯರಾದ ಶಾಂತಕುಮಾರ್, ಮಾದೇಶ್, ಪ್ರಶಾಂತ್, ಮಹೇಶ್, ಶಿವಕುಮಾರ್, ಸುಹಾಸ್, ಆಕಾಶ್, ವೈದಾತ್ರ, ಕಿರಣ್, ರವಿ, ಪ್ರತಾಪ್, ಸೂರಜ್, ರಮೇಶ್ ಮುಂತಾದವರಿದ್ದರು.

# ಮಕ್ಕಳು ಶಿಕ್ಷಣದಿಂದ ವಂಚಿತವಾಗಬಾರದು

## ಶಾಸಕ ಇಕ್ಬಾಲ್ ಹುಸೇನ್ ಸೂಚನೆ | ಶಿಕ್ಷಣ ಸಂಸ್ಥೆಗಳ ಒಕ್ಕೂಟಕ್ಕೆ ಶಾಸಕರ ಕರೆ

ರಾಮನಗರ: ಮುಸಲ್ಮಾನ ಕುಟುಂಬಗಳ ಪೈಕಿ ಶೈಕ್ಷಣಿಕ ಮಟ್ಟ ನಿರೀಕ್ಷೆಯಂತೆ ಇಲ್ಲ. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಈ ವಿಚಾರದಲ್ಲಿ ನೂತನವಾಗಿ ಆರಂಭವಾಗಿರುವ ಅಲ್ಪಸಂಖ್ಯಾತ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಸವಾಲಾಗಿ ಸ್ವೀಕರಿಸಿ ಮುಸಲ್ಮಾನರಲ್ಲಿ ಶೈಕ್ಷಣಿಕ ಸುಧಾರಣೆಗೆ ಮುಂದಾಗಬೇಕು ಎಂದು ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ಕರೆ ನೀಡಿದರು.

ಇಲ್ಲಿನ ಜೇನುಕಲ್ಲು ರೆಸಾರ್ಟ್‌ನಲ್ಲಿ ಅಲ್ಪಸಂಖ್ಯಾತ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಮುಸ್ಲೀಮರ ಪೈಕಿ ಮಕ್ಕಳಲ್ಲಿನ ಶಿಕ್ಷಣದ ಗುಣಮಟ್ಟ ಕಡಿಮೆ ಇದ್ದು ಕಳವಳಕಾರಿ ಸಂಗತಿ ಎಂದರು.

ಶಿಕ್ಷಣ ಸಂಸ್ಥೆಗಳು ಯಾವುದೇ ಒಂದು ಸಮುದಾಯಕ್ಕೆ ಸೀಮಿತವಾಗಬಾರದು. ಯಾವುದೇ ವರ್ಗದ ಮಗುವೂ ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು. ಈಗಿನ ಸ್ಪರ್ಧಾತ್ಮಕ ಯುಗಕ್ಕೆ ತಕ್ಕಂತೆ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಿ ಅಣಿಗೊಳಿಸಬೇಕಿದೆ ಎಂದರು.

ಮುಸಲ್ಮಾನ ಸಮುದಾಯದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡುವ ಜವಾಬ್ದಾರಿಯನ್ನು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ತೆಗೆದುಕೊಳ್ಳಿ ಎಂದು ಕಿವಿಮಾತು ಹೇಳಿದರು.

ಕ್ಯಾಮ್ಸ್ ನ ಪ್ರಧಾನ ಕಾರ್ಯದರ್ಶಿ ಡಿ.ಶಶಿಕುಮಾರ್ ರವರು ಶಿಕ್ಷಣ ಸಂಸ್ಥೆಗಳ ಗೌರವ ಕಾಪಾಡುವಲ್ಲಿ ಶಿಕ್ಷಕರ ಪಾತ್ರ ಕುರಿತು ಮಾತನಾಡಿದರು.

ಇದೇ ವೇಳೆ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಿಗೂ ಸಹ ರಾಜ್ಯ ಮಟ್ಟದ ಅವಾರ್ಡ್ ಕೊಡುವ ವ್ಯವಸ್ಥೆ ಆಗಬೇಕೆಂಬ ಮನವಿಯನ್ನು ಒಕ್ಕೂಟದ ಪದಾಧಿಕಾರಿಗಳು ಶಾಸಕರಿಗೆ ಸಲ್ಲಿಸಿದರು.

ವೇದಿಕೆಯಲ್ಲಿ ಪ್ರಾಧ್ಯಾಪಕ ಡಾ. ಕೆ. ಫಕ್ರುದ್ದೀನ್, ಒಕ್ಕೂಟದ ಕಾರ್ಯದರ್ಶಿ ಅಲ್ತಾಫ್ ಅಹ್ಮದ್ , ಖಜಾಂಚಿ ಗುಲಾಂ ಖ್ವಾಜಾ, ಬಾಲು ಪಬ್ಲಿಕ್ ಶಾಲೆಯ ವೆಂಕಟಸುಬ್ಬಯ್ಯ ಚೆಟ್ಟಿ, ರಹತುಲ್ಲಾ ಷರೀಫ್, ಸೈಯದ್ ತಲ್ಹಾ ಪಾಷಾ, ಅಲ್ಲಾಬಾಸ್ ಘೋರಿ, ಸೈಯದ್ ಶಾಜಿಯಾ ಮತ್ತಿತರರು ಉಪಸ್ಥಿತರಿದ್ದರು.





### ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ನಿಸ್ವಾರ್ಥಶ್ರಮ

ಸರ್ಕಾರದಿಂದ ನಯಾ ಪೈಸೆ ಅನುದಾನ ಇಲ್ಲದಿದ್ದರೂ ಗುಣಮಟ್ಟದ ಶಿಕ್ಷಣ ನೀಡುವಲ್ಲಿ, ಸಾವಿರಾರು ಶಿಕ್ಷಕರು ಮತ್ತು ಬೋಧಕೇತರ ಸಿಬ್ಬಂದಿಗೆ ಉದ್ಯೋಗ ಕಲ್ಪಿಸುವಲ್ಲಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ನಿಸ್ವಾರ್ಥ ಶ್ರಮ ಶ್ಲಾಘನೀಯ. ಸಬಲೀಕರಣದ ಅಂತಿಮ ಅಸ್ತ್ರ ಶಿಕ್ಷಣವೇ ಆಗಿದೆ. ಈ ದಿನ ಕೇವಲ ಒಂದು ಒಕ್ಕೂಟದ ಆರಂಭ ದಿನವಷ್ಟೇ ಆಗಬಾರದು. ಈ ಒಕ್ಕೂಟವು ಶಿಕ್ಷಣ ಕ್ಷೇತ್ರದ ಬೆಳವಣಿಗೆ ಮತ್ತು ಶಿಕ್ಷಣದ ರಕ್ಷಣಾ ಕವಚವಾಗಲಿ ಎಂದು ಶುಭ ಹಾರೈಸಿದರು. ಅಲ್ಪಸಂಖ್ಯಾತರ ಶಿಕ್ಷಣದಲ್ಲಿ ಸುಧಾರಣೆಗಳನ್ನು ತರುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕರ್ನಾಟಕ ಅಲ್ಪಸಂಖ್ಯಾತ ಶಿಕ್ಷಣ ದೃಷ್ಟಿಕೋನ ಸಮಿತಿ (ಕರ್ನಾಟಕ ಮೈನಾರಿಟಿ ಎಜುಕೇಶನ್ ವಿಷನ್ ಗ್ರೂಪ್) ರಚನೆ ಮಾಡಿದೆ ಎಂದು ಇಕ್ಬಾಲ್ ಹುಸೇನ್ ತಿಳಿಸಿದರು.

### ಸಮಸ್ಯೆಗಳ ಪರಿಹಾರಕ್ಕೆ ಒಕ್ಕೂಟ ವೇದಿಕೆಯಾಗಲಿ: ಪುಟ್ಟಣ್ಣ

ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಮಾತನಾಡಿ, ಶಿಕ್ಷಣ ಕ್ಷೇತ್ರದ ಅಭಿವೃದ್ಧಿಯಲ್ಲಿ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳ ಕೊಡುಗೆ ಮಹತ್ವದ್ದಾಗಿದೆ. ಇಂತಹ ಸಂಸ್ಥೆಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಒಗ್ಗಟ್ಟಿನಿಂದ ಪರಿಹರಿಸಿಕೊಳ್ಳಲು ಅಲ್ಪಸಂಖ್ಯಾತರ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಉತ್ತಮ ವೇದಿಕೆಯಾಗಲಿ ಎಂದು ಶುಭ ಕೋರಿದರು. ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿ, ಶಿಕ್ಷಕರ ಹಿತಾಸಕ್ತಿ ಮತ್ತು ವಿದ್ಯಾರ್ಥಿಗಳ ಭವಿಷ್ಯಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಒಕ್ಕೂಟ ಯಶಸ್ವಿಯಾಗಿ ಕಾರ್ಯನಿರ್ವಹಿಸಲಿ. ಸಂಸ್ಥೆಗಳ ನ್ಯಾಯಯುತ ಬೇಡಿಕೆಗಳಿಗೆ ಅಗತ್ಯವಿರುವ ಬೆಂಬಲ ನೀಡಲು ನಾನಾ ಸದಾ ಸಿದ್ಧನಿದ್ದೇನೆ. ಈ ಒಕ್ಕೂಟವು ಶಿಕ್ಷಣ ಕ್ಷೇತ್ರದಲ್ಲಿ ಇನ್ನಷ್ಟು ಬಲ ನೀಡಲಿ ಎಂದು ಹೇಳಿದರು.

### ಪರ್ಯಾಯ ಸಂಘಟನೆ ಅಲ್ಲ – ಅಜ್ಗರುಲ್ಲಾ

ಒಕ್ಕೂಟದ ಅಧ್ಯಕ್ಷ ಅಜ್ಗರುಲ್ಲಾ ಮಾತನಾಡಿ, ಜಿಲ್ಲೆಯಲ್ಲಿ ಅಲ್ಪಸಂಖ್ಯಾತರು ನಡೆಸುತ್ತಿರುವ 40 ಅನುದಾನ ರಹಿತ ಶಿಕ್ಷಣ ಸಂಸ್ಥೆಗಳು ಸೇರಿ ಒಕ್ಕೂಟ ರಚನೆ ಮಾಡಿದೆ. ನೂತನವಾಗಿ ಆರಂಭವಾಗಿರುವ ಸಂಘಟನೆ ಈಗಾಗಲೆ ಅಸ್ತಿತ್ವದಲ್ಲಿರುವ ಯಾವ ಸಂಘಟನೆಗೂ ಪರ್ಯಾಯವಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಸಿಗುವ ನಮ್ಮ ಹಕ್ಕುಗಳನ್ನು ಪಡೆಯಲು ಒಗ್ಗಟ್ಟಿನ ಸಂಕೇತವಾಗಿದೆ. ನಮ್ಮ ಸಮುದಾಯದ ಶಿಕ್ಷಣ ಸಂಸ್ಥೆಗಳು ಸಹ ಇತರರಿಗೆ ಮಾದರಿಯಾಗಿ ಮಕ್ಕಳಿಗೆ ಶಿಕ್ಷಣ ಕೊಡುವ ಸಂಸ್ಥೆಗಳಾಗಿ ಹೊರಹೊಮ್ಮುವ ಕೆಲಸ ಮಾಡಲಿದೆ ಎಂದು ತಿಳಿಸಿದರು.

## 'ನಮ್ಮೂರು ನಮ್ಮ ಕೆರೆ' ಕಾರ್ಯಕ್ರಮ



ಗುಂಡ್ಲುಪೇಟೆ: ತಾಲೂಕಿನ ಮೂಕಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಡಹಳ್ಳಿ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ 'ನಮ್ಮೂರು ನಮ್ಮ ಕೆರೆ' ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪ್ರಾದೇಶಿಕ ನಿರ್ದೇಶಕ ಡಾ. ಎ. ಯೋಗೇಶ್ ಹಾಗೂ ತಾಲೂಕು ದಂಡಾಧಿಕಾರಿ ಎಂ.ಎಸ್. ತನ್ಮಯ್ ಅವರು ನಾಮಫಲಕ ಅನಾವರಣಗೊಳಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಕೆರೆಯ ಏರಿಯ ಮೇಲೆ ಹಣ್ಣಿನ ಗಿಡಗಳನ್ನು ನೆಡಲಾಯಿತು. ತಹಶೀಲ್ದಾರ್ ಎಂ.ಎಸ್. ತನ್ಮಯ್ ಮಾತನಾಡಿ, ನಮ್ಮೂರು ನಮ್ಮ ಕೆರೆ ಉತ್ತಮ ಕಾರ್ಯಕ್ರಮವಾಗಿದ್ದು, ಇದರ ಸದುಪಯೋಗ ಪಡೆದುಕೊಂಡು ಕೆರೆಗಳನ್ನು ಸ್ವಚ್ಛವಾಗಿ ಹಾಗೂ ಸಮರ್ಪಕವಾಗಿ ನಿರ್ವಹಿಸಬೇಕು ಎಂದು ತಿಳಿಸಿದರು.

ಕೆರೆ ಸಮಿತಿ ಅಧ್ಯಕ್ಷ ಮಹೇಶ್ ಮಾತನಾಡಿ, ಕೆರೆಗಳ ನಿರ್ವಹಣೆ ಹಾಗೂ ಕೆರೆಗಳಿಂದ ಗ್ರಾಮಸ್ಥರಿಗೆ ದೊರೆಯುವ ಪ್ರಯೋಜನಗಳ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ವೇದಿಕೆ ಸದಸ್ಯರಾದ ನಾಗೇಶ್, ಮಹೇಂದ್ರ, ಪಿನ್ನಮ್ಮ, ಕುಮಾರಸ್ವಾಮಿ, ತಾಲೂಕಿನ ಯೋಜನಾಧಿಕಾರಿ ಚಂದ್ರಶೇಖರ್, ಜಿಲ್ಲಾ ನಿರ್ದೇಶಕ ದಿನೇಶ್, ಕೃಷಿ ಮೇಲ್ವಿಚಾರಕ ಮಹದೇಪ್ರಸಾದ್, ವಲಯ ಮೇಲ್ವಿಚಾರಕ ಕೃಷ್ಣ, ಸೇವಾ ಪ್ರತಿನಿಧಿ ಸುಮಾ, ಗ್ರಾಮದ ಯಜಮಾನರು, ಮುಖಂಡರು, ಸಂಘದ ಸದಸ್ಯರು ಹಾಗೂ ಒಕ್ಕೂಟದ ಅಧ್ಯಕ್ಷರು ಉಪಸ್ಥಿತರಿದ್ದರು.

## ಜೀವನೋಪಾಯ ಚಟುವಟಿಕೆಗೆ ಒತ್ತು



ಗುಂಡ್ಲುಪೇಟೆ: ಗ್ರಾಮೀಣ ಪ್ರದೇಶದ ಮಹಿಳೆಯರು ಸ್ವಸಹಾಯ ಸಂಘಗಳ ಮೂಲಕ ವಿವಿಧ ಜೀವನೋಪಾಯ ಚಟುವಟಿಕೆಗಳನ್ನು ಕೈಗೊಳ್ಳಲು ಎನ್‌ಆರ್‌ಎಲ್‌ಎಂ ಹಾಗೂ ಸಂಜೀವಿನಿ ಯೋಜನೆಗಳು ಸಹಕಾರಿಯಾಗಲಿವೆ ಎಂದು ಎನ್‌ಆರ್‌ಎಲ್‌ಎಂ ಜಿಲ್ಲಾ ಸಂಪನ್ಮೂಲ ವ್ಯಕ್ತಿ ಆರ್. ನಾಗವೇಣಿ ಹೇಳಿದರು.

ತಾಲೂಕಿನ ತೆರಕಣಾಂಬಿ ಗ್ರಾಮ ಪಂಚಾಯಿತಿಯಲ್ಲಿ ಜಿಲ್ಲಾ ಪಂಚಾಯಿತಿ ಚಾಮರಾಜನಗರ, ತಾಲೂಕು ಅಭಿಯಾನ ನಿರ್ವಹಣಾ ಘಟಕ ಹಾಗೂ ಶ್ರೀ ಲಕ್ಷ್ಮೀದೇವಿ ಸಂಜೀವಿನಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟದ ವತಿಯಿಂದ ಆಯೋಜಿಸಿದ್ದ 'ಮಾದರಿ ಒಕ್ಕೂಟ ದೂರದೃಷ್ಟಿ ಹಂತ–3' ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದರು. ಮಹಿಳೆಯರು ಸಂಜೀವಿನಿ ಯೋಜನೆಯಡಿ ದೊರೆಯುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕು. ಒಕ್ಕೂಟದ ಮೂಲಕ ಐದು ವರ್ಷದ ಯೋಜನೆ ರೂಪಿಸಿ, ಸ್ವಸಹಾಯ ಸಂಘಗಳು, ವಾರ್ಡ್ ಮಟ್ಟದ ಒಕ್ಕೂಟ ಹಾಗೂ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳನ್ನು ಬಲಪಡಿಸುವ ಜತೆಗೆ ಜೀವನೋಪಾಯ ಚಟುವಟಿಕೆ ಮತ್ತು ಸಮಗ್ರ ಕೃಷಿಗೆ ಆದ್ಯತೆ ನೀಡಬೇಕು ಎಂದರು. ಮಹಿಳೆಯರು ಹಾಗೂ ಕುಟುಂಬಗಳ ಜೀವನೋಪಾಯ ಸುಧಾರಣೆ ಮತ್ತು ಗ್ರಾಮಕ್ಕೆ ಅಗತ್ಯವಿರುವ ಮೂಲಸೌಲಭ್ಯಗಳನ್ನು ವಿವಿಧ ಇಲಾಖೆಗಳ ಮೂಲಕ ಪಡೆಯಲು ದೂರದೃಷ್ಟಿ ಯೋಜನೆ ಸಹಕಾರಿಯಾಗಲಿದೆ ಎಂದರು. ಕಾರ್ಯಾಗಾರದಲ್ಲಿ ಒಕ್ಕೂಟದ ಅಧ್ಯಕ್ಷೆ ಗೀತಾ, ರಾಜಮ್ಮ, ಮಂಗಳ, ಸೌಮ್ಯ, ಮಹದೇವಮ್ಮ, ನಾಗಮ್ಮ, ಎಂಬಿಕೆ ಕಾವ್ಯ, ಸಿಬ್ಬಂದಿ ನಂದಿನಿ, ರೂಪಾ, ಸುಮತಿ ಸೇರಿದಂತೆ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸ್ವಸಹಾಯ ಸಂಘಗಳ ಮಹಿಳೆಯರು ಭಾಗವಹಿಸಿದ್ದರು.

### ಮುಣಚನಹಳ್ಳಿಯಲ್ಲಿ ತೆಂಗು ಸಂಸ್ಕರಣ ಘಟಕದ 25ನೇ ವಾರ್ಷಿಕ ಮಹಾಸಭೆ

# ತೆಂಗು ಬೆಳೆಗಾರರು ಸ್ಪರ್ಧಾತ್ಮಕ ಬೆಲೆಯಲ್ಲಿ ಸಂಘಕ್ಕೆ ಕಾಯಿ ನೀಡಲಿ: ಮಹೇಶ್‌ಪ್ರಭು

ಚಾಮರಾಜನಗರ: ನಗರದ ಹೊರವಲಯದಲ್ಲಿರುವ ಮುಣಚನಹಳ್ಳಿಯ ಸಂಘದ ತೆಂಗು ಸಂಸ್ಕರಣ ಘಟಕದ ಆವರಣದಲ್ಲಿ ನಡೆದ 'ಚಾಮರಾಜನಗರ ತಾಲೂಕು ತೆಂಗು ಬೆಳೆಗಾರರ ಸಂಸ್ಕರಣ ಮತ್ತು ಮಾರಾಟ ಸಹಕಾರ ಸಂಘ'ದ 2025–26ನೇ ಸಾಲಿನ ಸರ್ವ ಸದಸ್ಯರ 25ನೇ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ, ಅಧ್ಯಕ್ಷತೆ ವಹಿಸಿ ಸಂಘದ ಅಧ್ಯಕ್ಷ ಎ.ಎಂ.ಮಹೇಶ್‌ಪ್ರಭು ಅವರು ಮಾತನಾಡಿದರು. ರೈತರಿಂದ 403 ಟನ್ ತೆಂಗಿನಕಾಯಿ ಖರೀದಿಸಿ 78 ಟನ್ ಗುಣಮಟ್ಟದ ತೆಂಗಿನ ಪುಡಿ ಉತ್ಪಾದನೆ ಮಾಡಲಾಗಿದ್ದು, ರೈತರು ಸ್ಪರ್ಧಾತ್ಮಕ ಬೆಲೆಯಲ್ಲಿ ಸಂಘಕ್ಕೆ ತೆಂಗಿನಕಾಯಿಯನ್ನು ನೀಡಬೇಕು ಎಂದು ಅವರು ಮನವಿ ಮಾಡಿದರು.

**ರೈತರ ಆರ್ಥಿಕ ಭದ್ರತೆಗೆ ಒತ್ತು**

ತೆಂಗು ಬೆಳೆಗಾರರು ಹಾಗೂ ರೈತರ ಅಭಿವೃದ್ಧಿಗಾಗಿ ಸ್ಥಾಪನೆಯಾದ ನಮ್ಮ ಸಂಘವು, ರೈತರು ಬೆಳೆದ ತೆಂಗಿನಕಾಯಿಯನ್ನು ಸ್ಪರ್ಧಾತ್ಮಕ ಬೆಲೆಯಲ್ಲಿ ಖರೀದಿ ಮಾಡುವ ಮೂಲಕ ತೆಂಗಿನ ಪುಡಿಯನ್ನು ತಯಾರು ಮಾಡಿ ಮಾರಾಟ ಮಾಡುತ್ತಿದೆ. ಪ್ರಸಕ್ತ ವರ್ಷದಲ್ಲಿ 403 ಟನ್



ತೆಂಗಿನಕಾಯಿಯನ್ನು ಸದಸ್ಯರಿಂದ ಖರೀದಿಸಿ, 78 ಟನ್ ಉತ್ತಮ ಗುಣಮಟ್ಟದ ತೆಂಗಿನ ಪುಡಿಯನ್ನು ಉತ್ಪಾದಿಸಲಾಗಿದೆ. ಜೊತೆಗೆ 110 ಟನ್ ತೆಂಗಿನ ಕರಟ, 20 ಟನ್ ತೆಂಗಿನ ಚಿಪ್ಸ್ ಅನ್ನು ಮಾರಾಟ ಮಾಡಲಾಗಿದೆ. ಮಾರುಕಟ್ಟೆ ಜಾಲ ವಿಸ್ತರಣೆ ಆಗಬೇಕಾಗಿರುವುದರಿಂದ ಹಂತ ಹಂತವಾಗಿ ಉತ್ಪಾದನೆಯನ್ನು ಹೆಚ್ಚಿಸಲಾಗುತ್ತಿದೆ ಎಂದು ತಿಳಿಸಿದರು. ಸುಸ್ಥಿರ ಪದ್ಧತಿಗಳು ಮತ್ತು ಮೌಲ್ಯವರ್ಧನೆಗಳಿಂದ ಕೃಷಿ ಬೆಳವಣಿಗೆ, ಗ್ರಾಮೀಣ ಅಭಿವೃದ್ಧಿ ಹಾಗೂ ರೈತರ ಜೀವನೋಪಾಯವನ್ನು ಉತ್ತಮಪಡಿಸುವುದು ಸಹಕಾರಿ ಸಂಘದ ಪ್ರಮುಖ ಆಶಯವಾಗಿದೆ. ತೆಂಗು ಸಂಗ್ರಹಣೆ, ಮಾರುಕಟ್ಟೆಯಲ್ಲಿನ ಬೆಲೆ ಏರಿಳಿತ ಹಾಗೂ ವ್ಯಾಪಾರದಲ್ಲಿನ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ, ಮಾರುಕಟ್ಟೆಯ ಅಸ್ಥಿರತೆಯೊಂದಿಗೆ ಸಂಗ್ರಹಣೆ ಮತ್ತು ಉತ್ಪಾದನಾ ವ್ಯವಸ್ಥೆಗಳನ್ನು ಸಂಯೋಜಿಸುವ ಮೂಲಕ ಬೆಳೆಗಾರ ಸದಸ್ಯರಿಗೆ ಸೂಕ್ತ ಮಾರುಕಟ್ಟೆ ಬೆಲೆಯನ್ನು ಖಾತ್ರಿಪಡಿಸುವಲ್ಲಿ ಸಂಘವು ಪ್ರಯತ್ನ ಮಾಡುತ್ತಿದೆ ಎಂದರು.

**ಕೃಷಿ ಪರಿಕರ ವಿತರಣೆ**

ತೆಂಗಿನ ತಾಕುಗಳಲ್ಲಿ ಸಮಗ್ರ ಸುಸ್ಥಿರ ಉತ್ಪಾದನಾ ಅಭಿವೃದ್ಧಿ ಕಾರ್ಯಕ್ರಮವನ್ನು ರೂಪಿಸಲಾಗಿದೆ. ತಾಲೂಕಿನಲ್ಲಿ ತೆಂಗಿನಕಾಯಿ ಇಳುವರಿ ಗಣನೀಯವಾಗಿ ಕುಂಠಿತವಾಗಿರುವ ಹಿನ್ನೆಲೆಯಲ್ಲಿ, ತೆಂಗು ಬೆಳೆಗಾರರಿಗೂ ಅನುಕೂಲವಾಗುತ್ತದೆ ಹಾಗೂ ಘಟಕಕ್ಕೂ ಮುಂದಿನ ದಿನಗಳಲ್ಲಿ ಹೆಚ್ಚು ತೆಂಗಿನಕಾಯಿ ಸರಬರಾಜು ಆಗುತ್ತದೆ ಎಂಬ ಉದ್ದೇಶದಿಂದ ತೆಂಗು ಅಭಿವೃದ್ಧಿ ಮಂಡಳಿಯ ಸಹಯೋಗದಲ್ಲಿ ಮರಿಯಾಲ, ಆಲೂರು ಮತ್ತು ವಿ.ಸಿ. ಹೊಸೂರು ಸೇರಿದಂತೆ ಒಟ್ಟು ಮೂರು ಕ್ಲಸ್ಟರ್‌ಗಳಿಗೆ ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ 8 ರೀತಿಯ ಪರಿಕರಗಳನ್ನು ವಿತರಿಸಲಾಗಿದೆ. ಅಗತ್ಯ ದಾಖಲೆಗಳನ್ನು ನೀಡಿ ಆಯ್ಕೆಯಾದ ಫಲಾನುಭವಿಗಳಿಗೆ 1ನೇ ಹಂತದಲ್ಲಿ ಇವುಗಳನ್ನು ವಿತರಿಸಲಾಗಿದ್ದು, 2ನೇ ಹಂತದ ಕೃಷಿ ಪರಿಕರಗಳು ಬರಬೇಕಾಗಿದ್ದು ಶೀಘ್ರದಲ್ಲೇ ವಿತರಿಸಲಾಗುವುದು ಎಂದರು.

**ಬಡ್ಡಿರಹಿತ ಸಾಲ ಮರುಪಾವತಿ ವಿಸ್ತರಣೆ**

ಈ ಸಹಕಾರ ಸಂಘಕ್ಕೆ ಕರ್ನಾಟಕ ಸರ್ಕಾರವು ನೀಡಿರುವ ಬಡ್ಡಿರಹಿತ ಸಾಲವನ್ನು ಅನುದಾನವನ್ನಾಗಿ ಬದಲಾಯಿಸಲು ಆಡಳಿತ ಮಂಡಳಿಯು ಹಲವಾರು ಬಾರಿ ಸರ್ಕಾರಕ್ಕೆ ಮನವಿ ಮಾಡಿತ್ತು. ಅದು ಸಾಧ್ಯವಾಗದ ಕಾರಣ ಆಡಳಿತ ಮಂಡಳಿಯ ತೀರ್ಮಾನದಂತೆ ಮರುಪಾವತಿ ಅವಧಿಯನ್ನು 40 ವರ್ಷಗಳಿಗೆ ವಿಸ್ತರಿಸಲು ಕೋರಲಾಗಿತ್ತು. ಆಡಳಿತ ಮಂಡಳಿಯ ಅವಿರತ ಪ್ರಯತ್ನದಿಂದ ಅಂತಿಮವಾಗಿ ಕರ್ನಾಟಕ ಸರ್ಕಾರವು ಸಂಘಕ್ಕೆ ನೀಡಿರುವ ಬಡ್ಡಿರಹಿತ ಸಾಲವನ್ನು 1 ವರ್ಷಕ್ಕೆ ಮೊರಟೋರಿಯಂ ಅವಧಿ ಮತ್ತು ಮರುಪಾವತಿಯ ಅವಧಿಯನ್ನು 5 ವರ್ಷಗಳಿಗೆ ವಿಸ್ತರಿಸಿ ಆದೇಶ ಮಾಡಿದೆ. ಈ ಆದೇಶದಂತೆ ಸಾಲದ ಮರುಪಾವತಿ ಅವಧಿ ವಿಸ್ತರಿಸಿದ್ದು, ಈ ನಿರ್ಧಾರವನ್ನು ಅನಿವಾರ್ಯವಾಗಿ ಒಪ್ಪಬೇಕಾಗಿದೆ ಎಂದು ಸಭೆಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಘಕ್ಕೆ ಹೆಚ್ಚಿನ ತೆಂಗಿನಕಾಯಿಯನ್ನು ಸರಬರಾಜು ಮಾಡಿದ ರೈತರನ್ನು ವಿಶೇಷವಾಗಿ ಸನ್ಮಾನಿಸಲಾಯಿತು. ಬಳಿಕ ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಾಂತಮಲ್ಲಪ್ಪ ಅವರು ವಾರ್ಷಿಕ ವರದಿಯನ್ನು ಮಂಡಿಸಿ ಸರ್ವ ಸದಸ್ಯರಿಂದ ಅನುಮೋದನೆ ಪಡೆದುಕೊಂಡರು. ಈ ಮಹಾಸಭೆಯಲ್ಲಿ ಸಂಘದ ಉಪಾಧ್ಯಕ್ಷ ಬಿ. ಸೋಮಶೇಖರ್, ನಿರ್ದೇಶಕರಾದ ಸಿ. ಸಿದ್ದರಾಜು, ಹೆಚ್.ಎಂ. ಬಸವಣ್ಣ, ಎಸ್. ಬಸವರಾಜು, ಪಾರ್ವತಮ್ಮ, ಮಧುಮಾಲತಿ, ಆರ್. ಶಿವಾನಂದ, ರೇಚಣ್ಣ, ಎಂ. ರಾಚಪ್ಪ, ವರುಣ್ ಸಿ.ಬಿ., ಚೆನ್ನಸ್ವಾಮಿ ಗೌಂಡರು, ಪ್ಲಾಂಟ್ ಇಂಜಿನಿಯರ್ ಚಂದ್ರಶೇಖರರಾಜು ಹಾಗೂ ಸಂಘದ ಸರ್ವ ಸದಸ್ಯ ರೈತರು ಭಾಗವಹಿಸಿದ್ದರು.

## ಬೈಕ್‌ಗಳ ಮುಖಾಮುಖಿ ಡಿಕ್ಕಿ: ಇಬ್ಬರು ಸ್ಥಳದಲ್ಲೇ ಸಾವು

  

ಗುಂಡ್ಲುಪೇಟೆ: ರಾಷ್ಟ್ರೀಯ ಹೆದ್ದಾರಿಯಲ್ಲಿ ಎರಡು ಬೈಕ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಇಬ್ಬರು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲೂಕಿನ ಕೂತನೂರು ಹಾಗೂ ಭೀಮನಬೀಡು ನಡುವೆ ನಡೆದಿದೆ.

ಬೀಮನಬೀಡು ಗ್ರಾಮದ ಯುವಕ ಪ್ರವೀಣ್ (19) ಹಾಗೂ ಕಣ್ಣೇಗಾಲ ಗ್ರಾಮದ ಮಹದೇವಯ್ಯ (43) ಸಾವನ್ನಪ್ಪಿರುವ ದುರ್ದೈವಿಗಳು ಕಣ್ಣೇಗಾಲದಿಂದ ಗುಂಡ್ಲುಪೇಟೆ ಕಡೆ ಬರುತ್ತಿದ್ದ ಕೆಎ–10–ಇವೈ–6753 ಹಾಗೂ ಗುಂಡ್ಲುಪೇಟೆಯಿಂದ ಬೀಮನಬೀಡು ಕಡೆ ತೆರಳುತ್ತಿದ್ದ ಕೆಎ–10–ಇಜೆ–8784 ಬೈಕ್‌ಗಳ ನಡುವೆ ಅಪಘಾತ ಸಂಭವಿಸಿದೆ. ಡಿಕ್ಕಿಯ ರಭಸಕ್ಕೆ ಇಬ್ಬರೂ ರಸ್ತೆಗೆ ಬಿದ್ದು ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ, ಮೃತದೇಹಗಳನ್ನು ಗುಂಡ್ಲುಪೇಟೆ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಿದ್ದಾರೆ ಈ ಸಂಬಂಧ ಗುಂಡ್ಲುಪೇಟೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

## ಅಕ್ಕ ಕೆಫೆ ಉದ್ಘಾಟಿಸಿದ ಸಚಿವ



ಮೈಸೂರು: ನಗರದ ನಜರಾಬಾದ್‌ನಲ್ಲಿರುವ ತಾಲ್ಲೂಕು ಕಚೇರಿಯ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ "ಅಕ್ಕ ಕೆಫೆಯನ್ನು" ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಯತೀಂದ್ರ ಸಿದ್ದರಾಮಯ್ಯ ಸೋಮವಾರ ಉದ್ಘಾಟಿಸಿದರು.

"ಅಕ್ಕ ಕೆಫೆಯು" ರಾಜ್ಯ ಸರ್ಕಾರದ 2025–26ನೇ ಸಾಲಿನ ರಾಜ್ಯ ಬಜೆಟ್ನಲ್ಲಿ ನಿಕಟಪೂರ್ವ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಘೋಷಿಸಿದ್ದ ಕಾರ್ಯಕ್ರಮವಾಗಿದೆ. ಈ ಕಟ್ಟಡವನ್ನು ತಾಲ್ಲೂಕು ಪಂಚಾಯತ್ ಅಧಿಭಾರ ಶುಲ್ಕ ಹಾಗೂ ಸಂಜೀವಿನಿ ಯೋಜನೆಯಡಿ ಒಟ್ಟು 18.20 ಲಕ್ಷ ರೂ.ಗಳಲ್ಲಿ ನಿರ್ಮಿಲಾಗಿದೆ. ಮಹಿಳಾ ಸ್ವ–ಸಹಾಯ ಸಂಘದ ಸದಸ್ಯರು ಉದ್ಯಶೀಲತೆ ಕೈಗೊಂಡು ಆರ್ಥಿಕವಾಗಿ ಸದೃಢರಾಗಿ ಕುಟುಂಬದ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಜೊತೆಗೆ ಸಾರ್ವಜನಿಕರಿಗೆ ಗುಣಮಟ್ಟದ ಆರೋಗ್ಯಕರ ಹಾಗೂ ಕೈಗೆಟಕುವ ದರದಲ್ಲಿ ಆಹಾರ ಒದಗಿಸುವುದು ಉದ್ದೇಶವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಶಾಸಕರಾದ ಜಿ.ಟಿ. ದೇವೇಗೌಡ, ಅನಿಲ್ ಚಿಕ್ಕಮಾದು, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ. ತಿಮ್ಮಯ್ಯ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಆಯೂಬ್ ಖಾನ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪಂಚಾಯತ್ ಸಿಇಓ ಎಸ್.ಯುಕೇಶ್ ಕುಮಾರ್, ಉಪಕಾರ್ಯದರ್ಶಿ ಸವಿತಾ, ಭೀಮಪ್ಪ ಲಾಳಿ, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಸಿ.ಕೃಷ್ಣ, ಸಹಾಯಕ ನಿರ್ದೇಶಕ ಕೆ.ರುಕ್ಮಾಂಗದ ಸೇರಿ ಮುಂತಾದವರು ಉಪಸ್ಥಿತರಿದ್ದರು.

### ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ

## ಸಿ.ಪುಟ್ಟರಂಗಶೆಟ್ಟಿರಿಂದ ಪ್ರಶಸ್ತಿ ವಿತರಣೆ



ಚಾಮರಾಜನಗರ: ಜಿಲ್ಲಾ ಮಟ್ಟದ ದಸರಾ ಕ್ರೀಡಾಂಗಣದಲ್ಲಿ ಬ್ಯಾಡ್ಮಿಂಟನ್ ಡಬಲ್ಸ್ ವಿಭಾಗದಲ್ಲಿ ಸಿ.ಎಸ್.ಅಕ್ಷಯ್, ಎಸ್.ಮಹಾಂತೇಶ್ ಪ್ರಥಮ ಸ್ಥಾನ, ಉಲ್ಲಾಸ್, ದುಶ್ಯಂತ ದ್ವಿತೀಯ ಸ್ಥಾನ ಪಡೆದಿದ್ದಾರೆ.ಸಿಂಗಲ್ಸ್ ವಿಭಾಗದಲ್ಲಿ ಪ್ರಥಮ ಸ್ಥಾನ ಉಲ್ಲಾಸ್, ದ್ವಿತೀಯ ಸ್ಥಾನ ಜಾಯಿಸನ್ ಪಡೆದರು

ನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ

ಪಶು ಸಂಗೋಪನೆ ಮತ್ತು ರೇಷ್ಮೆ ಕೃಷಿ ಖಾತೆ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರಾದ ಸಿ.ಪುಟ್ಟರಂಗಶೆಟ್ಟಿ ವಿಜೇತರಿಗೆ ಬಹುಮಾನ, ಪ್ರಮಾಣ ಪತ್ರ ವಿತರಿಸಿ ಶುಭಕೋರಿದರು.

ಈ ಸಂದರ್ಭದಲ್ಲಿ ಕಾಡಾಧ್ಯಕ್ಷ ಪಿ.ಮರಿಸ್ವಾಮಿ, ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಹೆಚ್.ವಿ.ಚಂದ್ರು, ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಬಿ.ಆರ್. ಗಿರೀಶ್, ಜಿಲ್ಲಾ ಕ್ರೀಡಾಂಗಣ ಅಭಿವೃದ್ಧಿ ಸಮಿತಿ ಸದಸ್ಯರಾದ ಶ್ರೀನಿವಾಸಪ್ರಸಾದ್, ಕ್ರೀಡಾಪಟುಗಳು ಹಾಜರಿದ್ದರು.

## ಕೊಳ್ಳೇಗಾಲಕ್ಕೆ ಸಿಎಂ: ಪೂರ್ವಭಾವಿ ಸಭೆ



ಕೊಳ್ಳೇಗಾಲ, : ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ ಸೆಪ್ಟೆಂಬರ್ 30 ರಂದು ನಡೆಯಲಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ಕಾರ್ಯಕ್ರಮಕ್ಕೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಆಗಮಿಸಲಿದ್ದಾರೆ.

ಈ ಹಿನ್ನೆಲೆಯಲ್ಲಿ ಪಟ್ಟಣದ ಭ್ರಮರಾಂಬ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಸಿ. ಪುಟ್ಟರಂಗಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಯಿತು. ಸಭೆಯಲ್ಲಿ ಶಾಸಕ ಎ.ಆರ್. ಕೃಷ್ಣಮೂರ್ತಿ, ಮಾಜಿ ಶಾಸಕರಾದ ಆರ್. ನರೇಂದ್ರ, ಜಿ.ಎನ್. ನಂಜುಂಡಸ್ವಾಮಿ ಸೇರಿದಂತೆ ಕಾಂಗ್ರೆಸ್ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸೆ.30 ರಂದು ಹೆಲಿಕಾಪ್ಟರ್ ಮೂಲಕ ಕೊಳ್ಳೇಗಾಲದ ಮಹದೇಶ್ವರ ಕ್ರೀಡಾಂಗಣಕ್ಕೆ ಆಗಮಿಸಿ, ಅಲ್ಲಿಂದ ಎಂ.ಜಿ.ಎಸ್.ವಿ ಕಾಲೇಜು ಆವರಣದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ. ಸಭೆಯಲ್ಲಿ ಮಾತನಾಡಿದ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರು, ಮುಖ್ಯಮಂತ್ರಿಗಳ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಅಧಿಕಾರಿಗಳೊಂದಿಗೆ ಕ್ರೀಡಾಂಗಣ ಹಾಗೂ ಕಾಲೇಜು ಆವರಣಕ್ಕೆ ಭೇಟಿ ನೀಡಿ ವೇದಿಕೆ, ಆಸನ ವ್ಯವಸ್ಥೆ, ವಾಹನ ನಿಲುಗಡೆ, ಕುಡಿಯುವ ನೀರು, ಶೌಚಾಲಯ ಹಾಗೂ ತಾತ್ಕಾಲಿಕ ಆರೋಗ್ಯ ಘಟಕ ಸೇರಿದಂತೆ ಅಗತ್ಯ ಸಿದ್ಧತೆಗಳನ್ನು ಪರಿಶೀಲಿಸಲಾಗಿದೆ ಎಂದರು.

ಕ್ಷೇತ್ರಕ್ಕೆ ಸಂಬಂಧಿಸಿದಂತೆ 20ಕ್ಕೂ ಹೆಚ್ಚು ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು. ಯಳಂದೂರಿನಲ್ಲಿ ನಿರ್ಮಿಸುತ್ತಿರುವ ಆಸ್ಪತ್ರೆ ಹಾಗೂ ಹಾಸ್ಟೆಲ್, ಸಂತೆಮರಹಳ್ಳಿಯಲ್ಲಿ ಸುಮಾರು 5 ಕೋಟಿ ವೆಚ್ಚದ ಎಳನೀರು ಮಾರುಕಟ್ಟೆ, ಕೊಳ್ಳೇಗಾಲದಲ್ಲಿ 250 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯ ಮೊದಲ ಹಂತವಾಗಿ 100 ಹಾಸಿಗೆಗಳ ಆಸ್ಪತ್ರೆ ನಿರ್ಮಾಣಕ್ಕೆ ಭೂಮಿ ಪೂಜೆ, ಮುಡಿಗುಂಡ ಸೇತುವೆ ನಿರ್ಮಾಣಕ್ಕೆ ಶಂಕುಸ್ಥಾಪನೆ ಸೇರಿ ಹಿಂದಿನ ಸರ್ಕಾರದ ಅವಧಿಯಲ್ಲಿ ಮಂಜೂರಾಗಿದ್ದ ಜಿಲ್ಲಾಸ್ಪತ್ರೆ, ತೆಂಗಿನಕಾಯಿ ಮಾರುಕಟ್ಟೆ, ಒಳಾಂಗಣ ಕ್ರೀಡಾಂಗಣ, ಶಾದಿ ಮಹಲ್ ಸೇರಿದಂತೆ ಹಲವು ಕಾಮಗಾರಿಗಳು ಹಾಗೂ ಪ್ರಸ್ತುತ ಸರ್ಕಾರದಲ್ಲಿ ಹೊಂಗನೂರು ಹಿರಿಕೆರೆ ಅಭಿವೃದ್ಧಿಗೆ 18 ಕೋಟಿ, ಗುಂಡ್ಲ ಜಲಾಶಯ ಅಭಿವೃದ್ಧಿಗೆ 50 ಕೋಟಿ ಅನುದಾನ ಮಂಜೂರಾಗಿದೆ.

ಅಲ್ಲದೆ, ಕೊಳ್ಳೇಗಾಲ ಪಟ್ಟಣದಲ್ಲಿ ಸುಮಾರು 7.50 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಡಾ. ಬಿ.ಆರ್. ಅಂಬೇಡ್ಕರ್ ಸಮುದಾಯ ಭವನವನ್ನು ಡಿ.ಕೆ. ಶಿವಕುಮಾರ್ ಅವರು ಉದ್ಘಾಟಿಸಲಿದ್ದಾರೆ. ಕನಕ ಭವನ, ವಾಲ್ಮೀಕಿ ಭವನ, ಭಗೀರಥ ಭವನ, ಒಕ್ಕಲಿಗ ಭವನ, ಶಾದಿ ಮಹಲ್ ಸೇರಿದಂತೆ ವಿವಿಧ ಸಮುದಾಯ ಭವನಗಳ ಕಾಮಗಾರಿಗಳಿಗೆ ಅನುದಾನ ಒದಗಿಸಲಾಗಿದೆ ಎಂದು ತಿಳಿಸಿದರು. ಸಭೆಯಲ್ಲಿ ಕಾಡ ಅಧ್ಯಕ್ಷ ಪಿ. ಮರಿಸ್ವಾಮಿ, ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಯೋಗೇಶ್, ವಡಗೆರೆ ದಾಸಣ್ಣ, ಗೌಡಳ್ಳಿ ರಾಜೇಶ್, ಗ್ಯಾರಂಟಿ ಅಧ್ಯಕ್ಷ ರಾಜೇಂದ್ರ, ಮುಕುಂದ, ನಗರಸಭೆ ಸದಸ್ಯ ಶಾಂತರಾಜು ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

## ದಸರಾ ಕಂಬಳ ಕ್ರೀಡಾಕೂಟದ ಆನ್‌ಲೈನ್ ನೋಂದಣಿ ಆರಂಭ*

ಮೈಸೂರು:– ಮೈಸೂರು ದಸರಾ ಅಂಗವಾಗಿ ದಸರಾ ಕಂಬಳವನ್ನು ಅದ್ದೂರಿಯಾಗಿ ಆಯೋಜಿಸಲಾಗುತ್ತಿದೆ. ಕ್ರೀಡಾಕೂಟದ ನೋಂದಣಿ ಪ್ರಕ್ರಿಯೆಯನ್ನು ಸುಲಭಗೊಳಿಸಲು ಆನ್‌ಲೈನ್ ಪೋರ್ಟಲ್ ಅನ್ನು ಅಧಿಕೃತವಾಗಿ ತೆರೆಯಲಾಗಿದೆ.

ಮೈಸೂರಿನ ಸಾತಗಳ್ಳಿ ಹೊರವರ್ತುಲ ರಸ್ತೆಯಲ್ಲಿ ನಡೆಯಲಿದೆ. ಈ ಸ್ಪರ್ಧೆಯಲ್ಲಿ ಭಾಗವಹಿಸಲು ಬಯಸುವ ಕಂಬಳದ ಕೋಣಗಳ ಮಾಲೀಕರು ಮತ್ತು ಓಡಿಸುವ ಜಾನಪದ ವೀರರು ವಿವಿಧ ಸ್ಪರ್ಧಾ ವಿಭಾಗಗಳ ಅಡಿಯಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದು. ಆಸಕ್ತರು ಹೆಚ್ಚಿನ ವಿವರಗಳಿಗಾಗಿ ಮತ್ತು ತಕ್ಷಣದ ನೋಂದಣಿಗಾಗಿ https://kambala.milieumedia.in ಜಾಲತಾ ಣಕ್ಕೆ ಭೇಟಿ ನೀಡಬಹುದು. ಅರ್ಜಿ ಸಲ್ಲಿಸಲು ಸೆ.30 ಕೊನೆಯ ದಿನ

# ದಸರಾ ಆಯೋಜನೆ, ಅನುದಾನಕ್ಕೆ ಆಗ್ರಹ

## ಚಾಮರಾಜನಗರ ದಸರಾ ನಡೆಸುವಂತೆ ಆಗ್ರಹಿಸಿ ಕಲಾವಿದರ ಅನಿರ್ದಿಷ್ಟಾವಧಿ ಧರಣಿ: 'ಸಾಂಸ್ಕೃತಿಕ ಹಕ್ಕು ಮರಳಿ ನೀಡಿ'

ಚಾಮರಾಜನಗರ: ಈ ಬಾರಿ ಚಾಮರಾಜನಗರ ದಸರಾ ಮಹೋತ್ಸವವನ್ನು ಕಡ್ಡಾಯವಾಗಿ ಆಯೋಜಿಸಬೇಕು, ಜಾನಪದ ಹಾಗೂ ಸ್ಥಳೀಯ ಕಲಾವಿದರಿಗೆ ಸೂಕ್ತ ಅವಕಾಶ ಕಲ್ಪಿಸಬೇಕು ಮತ್ತು ದಸರಾ ಮಹೋತ್ಸವಕ್ಕೆ ಅಗತ್ಯ ಅನುದಾನ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ಚಾಮರಾಜನಗರ ಜಿಲ್ಲಾ ಕಲಾವಿದರ ಬಳಗ, ಜಿಲ್ಲಾ ಯುವ ಕಲಾವಿದರ ಬಳಗ ಹಾಗೂ ಜಿಲ್ಲಾ ಕಲಾತಂಡಗಳ ಒಕ್ಕೂಟದ ವತಿಯಿಂದ ಜಿಲ್ಲಾಡಳಿತ ಭವನದ ಎದುರು ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಆರಂಭಿಸಲಾಯಿತು.



ಕಳೆದ ವರ್ಷ ದಸರಾ ಮಹೋತ್ಸವ ನಡೆಯದ ಹಿನ್ನೆಲೆಯಲ್ಲಿ ಕಲಾವಿದರು ಹಾಗೂ ವಿವಿಧ ಕಲಾತಂಡಗಳಿಗೆ ತೀವ್ರ ನಷ್ಟವಾಗಿದೆ. ಈ ಬಾರಿ ಬರದ ನೆಪವೊಡ್ಡಿ ದಸರಾ ಮಹೋತ್ಸವವನ್ನು ಯಾವುದೇ ಕಾರಣಕ್ಕೂ ಕೈಬಿಡಬಾರದು. ಚಾಮರಾಜನಗರವು ಜಾನಪದ ಕಲೆಯ ತವರೂರಾಗಿದ್ದು, ಇಲ್ಲಿನ ಕಲಾವಿದರ ಬದುಕು ಹಾಗೂ ಕಲೆಯನ್ನು ಉಳಿಸಲು ದಸರಾ ಮಹೋತ್ಸವ ಆಯೋಜಿಸುವುದು ಅತ್ಯಂತ ಅಗತ್ಯವಾಗಿದೆ ಎಂದು ಪ್ರತಿಭಟನಾಕಾರರು ಜಿಲ್ಲಾಡಳಿತವನ್ನು ಒತ್ತಾಯಿಸಿದರು.

ಈ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹದಲ್ಲಿ ಮುಖಂಡರಾದ ಶಿವಶಂಕರ್, ಚೆಟ್ಟು ಶಿವಣ್ಣ, ಮಹೇಂದ್ರ, ಸಿದ್ದು ಮಡಿವಾಳ, ನಾಗೇಂದ್ರ, ಕೃಷ್ಣಮೂರ್ತಿ, ರಮೇಶ್, ಭಾಗಮ್ಮ, ಮಹದೇವಮ್ಮ, ಪ್ರಕಾಶ್, ಸರೋಜಮ್ಮ ಸೇರಿದಂತೆ ಹಲವು ಕಲಾವಿದರು ಹಾಗೂ ವಿವಿಧ ಕಲಾತಂಡಗಳ ಸದಸ್ಯರು ಭಾಗವಹಿಸಿದ್ದರು.

### ಮೂರು ದಿನಗಳ ಗಡುವು ಹಾಗೂ ಉಪವಾಸ ಸತ್ಯಾಗ್ರಹದ ಎಚ್ಚರಿಕೆ

ಇವತ್ತು, ನಾಳೆ ಹಾಗೂ ನಾಳಿದ್ದು ಮೂರು ದಿನಗಳ ಕಾಲ ತಾಳ್ಮೆಯಿಂದ ಧರಣಿ ನಡೆಸುತ್ತೇವೆ. ಈ ಅವಧಿಯೊಳಗೆ ದಸರಾ ನಡೆಸುವ ಕುರಿತು ಸ್ಪಷ್ಟ ನಿರ್ಧಾರ ಕೈಗೊಳ್ಳದಿದ್ದರೆ ಉಪವಾಸ ಸತ್ಯಾಗ್ರಹ ಆರಂಭಿಸಲಾಗುವುದು ಹಾಗೂ ಮುಂದಿನ ದಿನಗಳಲ್ಲಿ ಇನ್ನಷ್ಟು ತೀವ್ರವಾದ ಪ್ರತಿಭಟನೆ ನಡೆಸಲು ಕಲಾವಿದರು ಸಂಘಟಿತರಾಗಲಿದ್ದಾರೆ ಎಂದು ರಂಗಸ್ವಾಮಿ ಎಚ್ಚರಿಸಿದರು. ಜಿಲ್ಲೆಯಲ್ಲಿ ಸಾವಿರಾರು ಕಲಾವಿದರಿದ್ದು, ಯಾವುದೇ ಪಕ್ಷ ಅಥವಾ ಸಂಘಟನೆಯ ಪರ–ವಿರೋಧವಾಗಿ ಅಲ್ಲದೆ, ಕೇವಲ ಕಲಾವಿದರ ಹಕ್ಕು ಹಾಗೂ ಸಾಂಸ್ಕೃತಿಕ ವೇದಿಕೆಗಾಗಿ ಈ ಹೋರಾಟ ನಡೆಸುತ್ತಿದ್ದೇವೆ ಎಂದು ಅವರು ಸ್ಪಷ್ಟಪಡಿಸಿದರು. ಚಾಮರಾಜನಗರ ದಸರಾ ಕಾರ್ಯಕ್ರಮವನ್ನು ಯಾವುದೇ ನಿರ್ದಿಷ್ಟ ಸಂಘಟನೆಗೆ ಸೀಮಿತಗೊಳಿಸದೆ, ಜಿಲ್ಲೆಯ ವಿವಿಧ ಕಲಾತಂಡಗಳು ಹಾಗೂ ಎಲ್ಲ ಕಲಾವಿದರಿಗೆ ಸಮಾನ ಅವಕಾಶ ನೀಡಬೇಕು. ಕಲಾವಿದರನ್ನು ಕಡೆಗಣಿಸುವ ಬದಲು ಅವರನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಸರ್ಕಾರ ಹಾಗೂ ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

### ಕಲಾವಿದರ ಬದುಕು ಉಳಿಸಲು, ವೇದಿಕೆ ಕಲ್ಪಿಸಲು ಮನವಿ

ಧರಣಿಯಲ್ಲಿ ಮಾತನಾಡಿದ ಜಿಲ್ಲಾ ಕಲಾವಿದರ ಬಳಗದ ಒಕ್ಕೂಟದ ರಂಗಸ್ವಾಮಿ, ಕಲಾವಿದರ ಸಾಂಸ್ಕೃತಿಕ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನ ನಡೆಯಬಾರದು. ಜಿಲ್ಲಾಡಳಿತ ನಮ್ಮ ಮನವಿಯನ್ನು ಗಂಭೀರವಾಗಿ ಪರಿಗಣಿಸಿ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಹಾಗೂ ಜನಪ್ರತಿನಿಧಿಗಳ ಗಮನಕ್ಕೆ ತಂದು ಕೂಡಲೇ ದಸರಾ ಮಹೋತ್ಸವ ನಡೆಸುವ ಕುರಿತು ನಿರ್ಧಾರ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಕಲಾವಿದರು ಬಡತನದ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಕಳೆದ ಬಾರಿ ದಸರಾ ನಡೆಯದ ಕಾರಣ ಹಲವಾರು ಕಲಾವಿದರು, ಕಲಾತಂಡಗಳು ಹಾಗೂ ಸಂಘ–ಸಂಸ್ಥೆಗಳು ನಷ್ಟ ಅನುಭವಿಸಿವೆ. ವಿಶೇಷವಾಗಿ ಜಾನಪದ, ಸಾಂಸ್ಕೃತಿಕ ಹಾಗೂ ಮಹಿಳಾ ಕಲಾವಿದರಿಗೆ ದಸರಾ ಪ್ರಮುಖ ವೇದಿಕೆಯಾಗಿದೆ. ಈ ಬಾರಿಯೂ ದಸರಾ ನಡೆಸದೆ ಹೋದರೆ ಕಲಾವಿದರ ಬದುಕಿನ ಮೇಲೆ ಮತ್ತಷ್ಟು ಗಂಭೀರ ಪರಿಣಾಮ ಬೀರುತ್ತದೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.

## ಇಂದು ಮಹಾಗಣಪತಿ ದೇಗುಲದಲ್ಲಿ ಸಹಸ್ರ ಮೋದಕ ಹೋಮ

ಚಾಮರಾಜನಗರ: ಭಾದ್ರಪದ ಮಾಸದ ಸಂಕಷ್ಟಹರ ಚತುರ್ಥಿಯ ಪ್ರಯುಕ್ತ ಲೋಕ ಕಲ್ಯಾಣಾರ್ಥ ನಗರದ ಭ್ರಮರಾಂಬ ಬಡಾವಣೆಯ 4ನೇ ಕ್ರಾಸ್‌ನಲ್ಲಿರುವ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ಸೆ.29 ರಂದು ಸಹಸ್ರ ಮೋದಕ ಹೋಮ ನಡೆಯಲಿದೆ.



ಅಂದು ಮಂಗಳವಾರ ಶ್ರೀ ಮಹಾ ಗಣಪತಿ ಸನ್ನಿಧಿಯಲ್ಲಿ ಬೆಳಿಗ್ಗೆ 9.00 ಗಂಟೆಗೆ ಸಹಸ್ರ ಮೋದಕ ಹೋಮ (1108) ಆರಂಭವಾಗಿ 12.30 ಕ್ಕೆ ಮಹಾ ಪೂರ್ಣಾಹುತಿ, ಮಹಾ ಮಂಗಳಾರತಿ ನೆರವೇರಲಿದೆ. ಸದ್ಭಕ್ತರು ಸಕಾಲಕ್ಕೆ ಆಗಮಿಸಿ ಭಗವಂತನ ಕೃಪೆಗೆ ಪಾತ್ರರಾಗುವಂತೆ ದೇವಸ್ಥಾನದ ಆಡಳಿತ ಮಂಡಳಿ ಪತ್ರಿಕಾ ಪ್ರಕಟಣೆಯಲ್ಲಿ ಕೋರಿದೆ.

## 2 ಕ್ವಿಂಟಾಲ್ ಗಾಂಜಾ ಗಿಡಗಳು ವಶಕ್ಕೆ



**ಚಾಮರಾಜನಗರ:** ಗಾಂಜಾ ಗಿಡಗಳನ್ನು ಕದ್ದುಮುಚ್ಚಿ ಜಮೀನಿನಲ್ಲಿ ಬೆಳೆಯುತ್ತಿದ್ದ ಖತರ್ನಾಕ್?ಗಳು ಇದೀಗ ಅರಣ್ಯ ಪ್ರದೇಶದಲ್ಲೇ ಹುಲುಸಾಗಿ ಗಾಂಜಾ ಫಸಲನ್ನು ಬೆಳೆದಿದ್ದ ಘಟನೆ ಬೆಳಕಿಗೆ ಬಂದಿದೆ.

ಬಿಆರ್?ಟಿ ಹುಲಿ ಸಂರಕ್ಷಿತ ಪ್ರದೇಶದ ಹನೂರು ತಾಲೂಕಿನ ಕೂಳಿಹಟ್ಟಿ ಅರಣ್ಯ ಪ್ರದೇಶದಲ್ಲಿ ಗಾಂಜಾ ಗಿಡಗಳನ್ನು ಬೆಳೆಸಿದ್ದ ಖಚಿತ ಮಾಹಿತಿ ಮೇರೆಗೆ ಅಬಕಾರಿ ಮತ್ತು ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, 213 ಕೆ.ಜಿ. ತೂಕದಷ್ಟಿದ್ದ 293 ಗಾಂಜಾ ಗಿಡಗಳನ್ನು ವಶಕ್ಕೆ ಪಡೆದು ಆರೋಪಿಗಳ ಪತ್ತೆಗೆ ಕ್ರಮ ವಹಿಸಿದ್ದಾರೆ.

ಜಂಟಿ ಕಾರ್ಯಾಚರಣೆ ವೇಳೆ ದಟ್ಟಾರಣ್ಯದಲ್ಲಿ ಹೂವಿನ ಗಿಡಗಳಂತೆ ಗಾಂಜಾ ಗಿಡಗಳು ನಳನಳಿಸಿ ಬೆಳೆಸಿದ್ದನ್ನು ಕಂಡು ಸಿಬ್ಬಂದಿ ಶಾಕ್ ಆಗಿದ್ದಾರೆ. ಅಬಕಾರಿ ಇಲಾಖೆ ಉಪ ಅಧೀಕ್ಷಕ ವಿಜಯ್ ಕುಮಾರ್, ಅಬಕಾರಿ ನಿರೀಕ್ಷಕ ದಯಾನಂದ, ಬೈಲೂರು ವಲಯ ಅರಣ್ಯಾಧಿಕಾರಿ ದೇವರಾಜು ಹಾಗೂ ಸಿಬ್ಬಂದಿ ಈ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಲೋಕೋಪಯೋಗಿ ಇಲಾಖೆ ಹಾಸನ ವಿಭಾಗ, ಹಾಸನ.
ಸಂಖ್ಯೆ: 38:ಕಾಇಂ:ಲೋಇ:ಹಾವಿ:ಕಇಂ–5:2026–27,
ದಿನಾಂಕ: 28.09.2026

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1 & ಕೆ.ಡಬ್ಲ್ಯೂ–2 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ದರ್ಜೆ ಗುತ್ತಿಗೆದಾರರಿಂದ ಈ ವಿಭಾಗ ವ್ಯಾಪ್ತಿಯ ಒಟ್ಟು 03 ಸಂಖ್ಯೆ ಕಾಮಗಾರಿಗಳಿಗಾಗಿ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನಲ್ಲಿನ ಗರಿಷ್ಠ ಅಂದಾಜು ಮೊತ್ತ ರೂ.25.00 ಲಕ್ಷ ಹಾಗೂ ಕನಿಷ್ಠ ಅಂದಾಜು ಮೊತ್ತ ರೂ. 10.00 ಲಕ್ಷ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕಡೆಯ ದಿನಾಂಕ:16.10.2026 16.00 ಗಂಟೆ ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ನೋಡುವುದು ಅಥವಾ ಈ ಕಛೇರಿಯ ಸಹಾಯಕ ದೂರವಾಣಿ ಸಂಖ್ಯೆ: 08172–268437 ರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಇ ಹಾಸನ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/564/ಕೆಎಸ್‌ಎಂಸಿಎ/2026–27

### ರಾಮಸಮುದ್ರದಲ್ಲಿ ಧಮ್ಮಪಯಣ ಜಾಥಗೆ ಅದ್ದೂರಿ ಸ್ವಾಗತ

## ಐತಿಹಾಸಿಕ ಬೌದ್ಧ ಸಮ್ಮೇಳನ ಯಶಸ್ವಿಗೆ ಸಹಕಾರ

ಚಾಮರಾಜನಗರ: ಜಿಲ್ಲೆಯಲ್ಲಿ ಅ.24 ಮತ್ತು 25 ರಂದು ನಡೆಯಲಿ ರುವ ಅಂತಾರಾಷ್ಟ್ರೀಯ ಬೌದ್ಧ ಮಹಾಸಮ್ಮೇಳನದ ಅಂಗವಾಗಿ ನಡೆಯುತ್ತಿರುವ ಧಮ್ಮ ಪಯಣ ಜಾಗೃತಿ ಜಾಥಾವನ್ನು ರಾಮಸಮುದ್ರ ದಲ್ಲಿ ಅದ್ದೂರಿಯಾಗಿ ಸ್ವಾಗತಿಸಿ ಬರಮಾಡಿಕೊಳ್ಳಲಾಯಿತು.

ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಮುಂಭಾಗಕ್ಕೆ ಆಗಮಿಸಿದ ಧಮ್ಮಪಯಣ ಜಾಗೃತಿ ಜಾಥಾ ಸ್ಥಬ್ದಚಿತ್ರಕ್ಕೆ ಪಶು ಸಂಗೋಪನೆ ಮತ್ತು ರೇಷ್ಮೆ ಕೃಷಿ ಖಾತೆ ಸಚಿವರು,ಜಿಲ್ಲಾ ಉಸ್ತುವಾರಿ ಸಚಿವ ಸಿ.ಪುಟ್ಟರಂಗಶೆಟ್ಟಿ, ಅಂತರಾಷ್ಟ್ರೀಯ ಬೌದ್ಧಸಮ್ಮೇಳನ ಆಚರಣಾ ಸಮಿತಿ ಗೌರವಾಧ್ಯಕ್ಷ ಮನೋರಕ್ಕಿತ ಬಂತೇಜಿ ಅವರ ನೇತೃತ್ವದಲ್ಲಿ ಗ್ರಾಮಸ್ಥರು ಮೊಂಬತ್ತಿ ಬೆಳಗಿ ಪುಷ್ಪವೃಷ್ಠಿಯೊಂದಿಗೆ ಸ್ವಾಗತಿಸಿ ಬರಮಾಡಿಕೊಂಡರು. ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಾಗಿ ಮುಕ್ತಾಯಗೊಂಡಿತು.



ಜಿಲ್ಲಾ ಉಸ್ತುವಾರಿ ಸಚಿವ ಸಿ.ಪುಟ್ಟರಂಗಶೆಟ್ಟಿ, ಪುಷ್ಪಾರ್ಚನೆ ಮಾಡಿ ಮಾತನಾಡಿ, ಕಳೆದ ವರ್ಷ ಮೈಸೂರಿನಲ್ಲಿ ಎರಡು ದಿನಗಳ ಕಾಲ ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನ ಯಶಸ್ವಿಯಾಗಿದೆ' ನಡೆದಿದೆ. ಚಾಮರಾಜನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಅ.24, 25 ರಂದು ಎರಡು ದಿನಗಳ ಕಾಲ ಐತಿಹಾಸಿಕ ಬೌದ್ಧ ಸಮ್ಮೇಳನ ನಡೆಯುತ್ತಿರುವುದು ತುಂಬಾ ಸಂತಸವಾಗಿದೆ. ಸಮ್ಮೇಳನದ ಯಶಸ್ವಿಗೆ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು. ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು 1956 ಅಕ್ಟೋಬರ್ 14 ರಂದು ನಾಗಪುರದಲ್ಲಿ ತಮ್ಮ ಲಕ್ಷಾಂತರ ಮಂದಿ ಅನುಯಾಯಿಗಳೊಂದಿಗೆ ಬೌದ್ಧ ಧರ್ಮ ಸ್ವೀಕರಿಸಿದರು. ಅವರ ಆಶಯಗಳನ್ನು ಈಡೇರಿಸುವ ಕೆಲಸವನ್ನು ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಎಂದರು.

ಪ್ರಚಾರ ಸಮಿತಿ ಜಿಲ್ಲಾ ಸಂಚಾಲಕ ಸಿ.ಎಂ. ಕೃಷ್ಣಮೂರ್ತಿ ಮಾತನಾಡಿ ನಮ್ಮ ಜಿಲ್ಲೆಯಲ್ಲಿ ಅಂತಾರಾಷ್ಟ್ರೀಯ ಭೌದ್ಧ ಸಮ್ಮೇಳನ ಮಾಡುವ ಅವಕಾಶ ಸಿಕ್ಕಿರುವುದು ನಮ್ಮೆಲ್ಲರ ಸೌಭಾಗ್ಯವಾಗಿದೆ. ಅ.24 ಮತ್ತು 25 ರಂದು ಚಾಮರಾಜನಗರ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಬೌದ್ಧ ಮಹಾಸಮ್ಮೇಳನಕ್ಕೆ ರಾಮಸಮುದ್ರ ಗ್ರಾಮದಿಂದ ಸಮೇತರಾಗಿ ಭಾಗವಹಿಸಿ ಸಮ್ಮೇಳನವನ್ನು ಯಶಸ್ವಿ ಮಾಡಿ ಕೊಡಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ಯಜಮಾನರಾದ ನಾಗರಾಜು, ಪಾಪಯ್ಯ, ತಾ.ಪಂ.ಮಾಜಿ ಅಧ್ಯಕ್ಷ ಚಿಕ್ಕಮಹದೇವು, ಆರ್.ಮಹದೇವು, ಮುಖಂಡರಾದ ಕೆ.ನಾಗಣ್ಣ, ಅಂಬೇಡ್ಕರ್ ಯುವಕರ ಸಂಘದ ಅಧ್ಯಕ್ಷ ಸುಹಾಸ್, ಪ್ರಧಾನ

ಕಾರ್ಯದರ್ಶಿ ಮನೋಜ್ ಮಸ್ ಹಾಗೂ ಪದಾಧಿಕಾರಿಗಳು, ದಿವ್ಯಚೇತನ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪ್ರಕಾಶ್, ಹಾಗೂ ಪದಾಧಿಕಾರಿಗಳು, ಮುಖಂಡರಾದ ಪ್ರಸನ್ನ, ರಾಜಪ್ಪ, ಮೋಹನ್ ನಗು, ಅಕ್ಷಯ್, ಎನ್ ಎಸ್ ಯುಐ ಸ್ವಾಮಿ, ಬ್ಯಾಡಮೂಡ್ಲು ಬಸವಣ್ಣ, ಸುಶೀಲ, ಜ್ಯೋತಿ, ಕುಮಾರ್ , ಉಪಾಸಕರು, ಉಪಾಸಕಿಯರು, ಗ್ರಾಮಸ್ಥರು ಭಾಗವಹಿಸಿದ್ದರು.

**ಅ.1 ರಂದು ವೀರಯೋಧ ಲೋಕೇಶ್ ಪಟೇಲ್ ಸ್ಮರಣಾರ್ಥ ವಿದ್ಯಾರ್ಥಿ ಪುರಸ್ಕಾರ ಹಾಗೂ ಪ್ರಶಸ್ತಿ ಪ್ರದಾನ**

# ಚಕ್ಕೆರೆ ಶಿವಶಂಕರ್ ಜಾನಪದ, ಎಂ.ಬಿ.ಸೋಮೇಗೌಡ ಕೃಷಿ ಪ್ರಶಸ್ತಿಗೆ ಆಯ್ಕೆ

**ಮಂಡ್ಯ:** ಕರ್ನಾಟಕ ಸಂಘ ಮತ್ತು ಪಟೇಲ್ ಚಾರಿಟಬಲ್ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ವೀರಯೋಧ ಆರ್.ಲೋಕೇಶ್ ಪಟೇಲ್ ಜ್ಞಾಪಕಾರ್ಥ 6 ನೇ ವರ್ಷದ ವಿದ್ಯಾರ್ಥಿ ಪುರಸ್ಕಾರ ಹಾಗೂ ಶ್ರೀಮತಿ ಲಿಂಗಮ್ಮ ಪಟೇಲ್ ಸಿದ್ದೇಗೌಡ ಜಾನಪದ ಪ್ರಶಸ್ತಿ ಮತ್ತು ಶ್ರೀಮತಿ ನಿಂಗಮ್ಮ ಶ್ರೀ ಜೋಗಿಗೌಡ ಕೃಷಿ ಪ್ರಶಸ್ತಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಅ.1 ರಂದು ಆಯೋಜಿಸಲಾಗಿದೆ ಎಂದು ನಿವೃತ್ತ ಪ್ರಾಂಶುಪಾಲರು ಹಾಗೂ ಟ್ರಸ್ಟ್ ನ ಸಲಹೆಗಾರ ಎಸ್.ಬಿ.ಶಂಕರಗೌಡ ತಿಳಿಸಿದರು.



ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ವೀರಯೋಧ ಲೋಕೇಶ್ ಅವರು ಸೈನ್ಯದಲ್ಲಿ ಸೇವೆ ಸಲ್ಲಿಸಿ ಅಪಘಾತದಲ್ಲಿ ನಿಧನರಾದ ಹಿನ್ನೆಲೆಯಲ್ಲಿ ಅವರ ಕುಟುಂಬ ಕಳೆದ ಆರು ವರ್ಷಗಳಿಂದ ಈ ಸೇವಾ ಕಾರ್ಯವನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಅದೇ ರೀತಿ ವಿದ್ಯಾರ್ಥಿ ಪುರಸ್ಕಾರವನ್ನೂ ನೆರವೇರಿಸುತ್ತಿದ್ದಾರೆ ಎಂದು ಶ್ಲಾಘಿಸಿದರು.

ಸಮಾರಂಭವು ಕರ್ನಾಟಕ ಸಂಘದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಅ.1 ರ ಗುರುವಾರ ಸಂಜೆ 5 ಗಂಟೆಗೆ ನಡೆಯಲಿದೆ.ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅವರು ದಿವ್ಯಸಾನಿಧ್ಯ ವಹಿಸಲಿದ್ದು, ಕೊಮ್ಮೇರಹಳ್ಳಿ ಪುರುಷೋತ್ತಮಾನಂದನಾಥ ಸ್ವಾಮೀಜಿ ಅವರು ಸಾನಿಧ್ಯ ವಹಿಸಲಿದ್ದಾರೆ ಎಂದು ಅವರು ಹೇಳಿದರು.

ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶಗೌಡ ಅವರು ಅಧ್ಯಕ್ಷತೆ ವಹಿಸಲಿದ್ದು ಟಿ.ವೆಂಕಟೇಶ್ ಅವರು ಪ್ರಶಸ್ತಿ ಪ್ರದಾನವನ್ನು, ಸಿ.ಎನ್.ಶಿವಪ್ರಕಾಶ್ ಅವರು ವಿದ್ಯಾರ್ಥಿ ಪುರಸ್ಕಾರವನ್ನು ಮತ್ತು ಮಾಜಿ ಶಾಸಕ ಎಂ.ಶ್ರೀನಿವಾಸ್ ಹಾಗೂ ಮಾಜಿ ವಿಧಾನ ಪರಿಷತ್ ಸದಸ್ಯ ಬಿ.ರಾಮಕೃಷ್ಣ ಅವರು ಪ್ರಬಂಧ ಸ್ಪರ್ಧೆ ಬಹುಮಾನ ವಿತರಣೆಯನ್ನು ನೆರವೇರಿಸಲಿದ್ದಾರೆ ಎಂದು ಅವರು ವಿವರಿಸಿದರು.

**ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ**

ಈ ಬಾರಿ ಐದು ಮಂದಿ ಪ್ರತಿಭಾವಂತ ವಿದ್ಯಾರ್ಥಿಗಳಾದ ಮಂಡ್ಯದ ವೈದ್ಯಕೀಯ ವಿದ್ಯಾರ್ಥಿ ಮುತ್ತು ಪ್ರಕಾಶ್ ಬೆಂಡೆಕಾಯಿ, ಮಂಡ್ಯದ ಪಿಇಎಸ್ ಇಂಜಿನಿಯರಿಂಗ್ ವಿದ್ಯಾರ್ಥಿ ಪ್ರದೀಪ್ ಎಸ್, ಹಾಸನದ ಪಶುವೈದ್ಯಕೀಯ ವಿದ್ಯಾರ್ಥಿ ಮಹಮ್ಮದ್ ಷರೀಫ್, ರಾಮನಗರದ ಸರ್ಕಾರಿ ಇಂಜಿನಿಯರಿಂಗ್ ವಿದ್ಯಾರ್ಥಿನಿ ಡಿ.ಸಿ.ಸುಮಿತ್ರ ಮತ್ತು ವಿ.ಸಿ.ಫಾರಂ ಮಂಡ್ಯದ ಕೃಷಿ ವಿಜ್ಞಾನ ವಿದ್ಯಾರ್ಥಿ ಶರಣ ಬಸವ ಅವರಿಗೆ ತಲಾ 25 ಸಾವಿರ ರೂಪಾಯಿ ನಗದು ಪುರಸ್ಕಾರ ನೀಡಲಾಗುವುದು ಎಂದು ಅವರು ತಿಳಿಸಿದರು.

ಮೈಸೂರಿನ ಆರ್.ವಿ.ಇಂಜಿನಿಯರಿಂಗ್ ವಿದ್ಯಾರ್ಥಿ ಯತೀಂದ್ರ ಎನ್ ಮತ್ತು ಬೆಂಗಳೂರಿನ ಗ್ಲೋಬಲ್ ಅಕಾಡೆಮಿ ವಿದ್ಯಾರ್ಥಿ ಬಿ.ಎಸ್.ಧನುಷ್ ಕುಮಾರ್ ಅವರಿಗೆ ತಲಾ ಹದಿನೈದು ಸಾವಿರ ರೂಪಾಯಿ ನಗದು ಪುರಸ್ಕಾರ ನೀಡಲಾಗುವುದು ಎಂದು ಅವರು ಹೇಳಿದರು.

**ಜಾನಪದ ಮತ್ತು ಕೃಷಿ ಪ್ರಶಸ್ತಿ ಪ್ರದಾನ**

ಬೆಂಗಳೂರಿನ ಜಾನಪದ ವಿದ್ವಾಂಸ ಡಾ.ಚಕ್ಕೆರೆ ಶಿವಶಂಕರ್ ಅವರಿಗೆ ಶ್ರೀಮತಿ ಲಿಂಗಮ್ಮ ಪಟೇಲ್ ಸಿದ್ದೇಗೌಡ ಜಾನಪದ ಪ್ರಶಸ್ತಿಯನ್ನು ಹಾಗೂ ಪಾಂಡವಪುರ ತಾಲ್ಲೂಕಿನ ರಾಗಿಮುದ್ದನಹಳ್ಳಿಯ ಎಂ.ಟಿ.ಸೋಮೇಗೌಡ ಅವರಿಗೆ ಶ್ರೀಮತಿ ನಿಂಗಮ್ಮ ಶ್ರೀ ಜೋಗಿಗೌಡ ಕೃಷಿ ಪ್ರಶಸ್ತಿಯನ್ನು ಈ ವರ್ಷದಿಂದ ಹೊಸದಾಗಿ ನೀಡಲಾಗುತ್ತಿದೆ ಎಂದು ಅವರು ವಿವರಿಸಿದರು.

ಬಸರಾಳು ಹೋಬಳಿಯ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಹೆಚ್ಚು ಅಂಕ ಪಡೆದ ಎಂಟು ವಿದ್ಯಾರ್ಥಿಗಳಿಗೆ ತಲಾ ಐದು ಸಾವಿರ ರೂಪಾಯಿ ಪ್ರತಿಭಾ ಪುರಸ್ಕಾರ ಹಾಗೂ ಮಂಡ್ಯ ತಾಲ್ಲೂಕಿನ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ 13 ವಿಜೇತ ವಿದ್ಯಾರ್ಥಿಗಳಿಗೆ ತಲಾ ಎರಡು ಸಾವಿರ ರೂಪಾಯಿ ಪ್ರಬಂಧ ಸ್ಪರ್ಧೆ ಬಹುಮಾನ ನೀಡಲಾಗುವುದು ಎಂದು ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ಸಂಘದ ನಿರ್ದೇಶಕರಾದ ನಾಗಪ್ಪ ಹನಕೆರೆ, ಕೋಣನಹಳ್ಳಿ ಜಯರಾಂ, ತಗ್ಗಹಳ್ಳಿ ವೆಂಕಟೇಶ್, ಟ್ರಸ್ಟ್ ಅಧ್ಯಕ್ಷ ರಾಜಶೇಖರ್ ಹಾಗೂ ಉಪಾಧ್ಯಕ್ಷೆ ಕಲಾವತಿ ಇದ್ದರು.

# ಸುಸಜ್ಜಿತ ಫುಟಬಾಲ್ ಕೋರ್ಟ್ ಉದ್ಘಾಟನೆ




**ಮೈಸೂರು:** ಡಿ ಸಂಜೀವಯ್ಯ ಮೆಮೋರಿಯಲ್ ಎಜುಕೇಶನ್ ಸೊಸೈಟಿಯಲ್ಲಿ ಅತ್ಯುತ್ತಮ ಹಾಗೂ ಸುಸಜ್ಜಿತ ಫುಟ್‌ಬಾಲ್ ಟರ್ಫ್ ಮೈದಾನವನ್ನು ಮಾಜಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಉದ್ಘಾಟಿಸಿದರು.

ವಿದ್ಯಾರ್ಥಿಗಳಿಗೆ ಫುಟ್ ಬಾಲ್ ಆಡಲು ಉತ್ತೇಜನ ನೀಡುವ ದೃಷ್ಟಿಯಿಂದ ಸಿದ್ಧವಾಗಿದೆ ಫುಟ್‌ಬಾಲ್ ಟರ್ಫ್ ಮೈದಾನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಮತ್ತು ಕ್ರೀಡೆಯಲ್ಲಿ ಹೆಚ್ಚು ಆಶಕ್ತಿ ಇರುವವರಿಗೆ ಅತ್ಯತ್ತಮ ಕೋಚಿಂಗ್ ಕೊಡುವ ಉದ್ದೇಶದಿಂದ ಫುಟ್‌ಬಾಲ್ ಟರ್ಫ್ ಗ್ರೌಂಡ್ ನಿರ್ಮಿಸಲಾಗಿದೆ. ಫುಟ್‌ಬಾಲ್ ಟರ್ಫ್ ಗ್ರೌಂಡ್ ನಲ್ಲಿ ಬರಿ ವಿದ್ಯಾರ್ಥಿಗಳಿಗೆ ಮಾತ್ರವಲ್ಲ ಸಾರ್ವಜನಿಕರು ಕೂಡ ಉಪಯೋಗಿಸಬಹುದು. 1ನೇ ತರಗತಿ ಯಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಉತ್ತಮ ಟ್ರೈನರ್ ಜೊತೆ ಟ್ರೈನಿಂಗ್ ಕೊಡಿಸುತ್ತೇವೆ ಎಂದು ಹೇಳಿದರು.

## ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹಿಸಿ ಕಾಂಗ್ರೆಸ್ ಪ್ರತಿಭಟನೆ

# ಎಸ್ಐಆರ್ ಪ್ರಕ್ರಿಯೆ ಖಂಡನೆ, ಪ್ರತಿಕೃತಿ ದಹನಕ್ಕೆ ಯತ್ನ

**ಮಂಡ್ಯ:** ಚುನಾವಣಾ ಪ್ರಕ್ರಿಯೆಯ ನೀತಿ ನಿಯಮಗಳು ಕಾನೂನುಬಾಹಿರವಾಗಿದ್ದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ತಕ್ಷಣ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ಸೋಮವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ನಗರದ ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆ ಎದುರು ಜಮಾವಣೆಗೊಂಡ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸಿದರು. ಮತದಾರರ ಪಟ್ಟಿಯಿಂದ ಲಕ್ಷಾಂತರ ನಿಜವಾದ ಮತದಾರರ ಹೆಸರುಗಳನ್ನು ಅಕ್ರಮವಾಗಿ ಕೈಬಿಡಲಾಗಿದೆ ಎಂದು ಆರೋಪಿಸಿ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

**ಜ್ಞಾನೇಶ್ ಕುಮಾರ್ ವಜಾಗೊಳಿಸಿ,ಬಂಧಿಸಿ–ಕುಮಾರ್ ಕೊಪ್ಪ:** ಪ್ರತಿಭಟನೆಯಲ್ಲಿ ಮಾತನಾಡಿದ ಮಂಡ್ಯ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕುಮಾರ್ ಕೊಪ್ಪ ಅವರು ಚುನಾವಣಾ ಆಯೋಗವು ಸಂವಿಧಾನಬದ್ಧ ಸಂಸ್ಥೆಯಾಗಿ ಉಳಿದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮತ ಕಳ್ಳತನದ ಮೂಲಕ ಬಿಜೆಪಿ ಅಧಿಕಾರಕ್ಕೆ ಬರಲು ಹೊರಟಿದೆ. ಚುನಾವಣಾ ಆಯೋಗವು ಬಿಜೆಪಿಯ ಚುನಾವಣಾ ಕಚೇರಿಯಂತೆ ಕೆಲಸ ಮಾಡುತ್ತಿದೆ. ಎಸ್ಐಆರ್ ಹೆಸರಿನಲ್ಲಿ ಬಡವರು, ದಲಿತರು, ಅಲ್ಪಸಂಖ್ಯಾತರ ಮತಗಳನ್ನು ಕಸಿಯುವ ಹುನ್ನಾರ ನಡೆಯುತ್ತಿದೆ. ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ದೇಶಾದ್ಯಂತ ನಡೆಯುತ್ತಿರುವ ಈ ಹೋರಾಟಕ್ಕೆ ಮಂಡ್ಯ ಜಿಲ್ಲೆಯಿಂದ ಬಲವಾದ ಬೆಂಬಲ ನೀಡುತ್ತೇವೆ. ಜ್ಞಾನೇಶ್ ಕುಮಾರ್ ಅವರನ್ನು ಕೂಡಲೇ ವಜಾಗೊಳಿಸಿ ಬಂಧಿಸಬೇಕು ಎಂದು ಅವರು ಒತ್ತಾಯಿಸಿದರು.

**ಚುನಾವಣಾ ಆಯೋಗ ಬಿಜೆಪಿಯ ಕೈಗೊಂಬೆ–ಸಿ.ಎಂ.ದ್ಯಾವಪ್ಪ**

ಜಿಲ್ಲಾ ಕಾಂಗ್ರೆಸ್ ಮುಖಂಡ ಸಿ.ಎಂ.ದ್ಯಾವಪ್ಪ ಅವರು ಮಾತನಾಡಿ ಜ್ಞಾನೇಶ್ ಕುಮಾರ್ ಅವರು ಬಿಜೆಪಿಯ ಕೈಗೊಂಬೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಆರೋಪಿಸಿದರು. ಚುನಾವಣಾ ಆಯುಕ್ತರ ಕಚೇರಿಯು ಆರ್.ಎಸ್.ಎಸ್. ಮತ್ತು ಬಿಜೆಪಿಯ ಕಚೇರಿಯಾಗಿ ಪರಿವರ್ತನೆಗೊಂಡಿದೆ. ತಳ ಸಮುದಾಯ, ಶೋಷಿತರು, ಅಲ್ಪಸಂಖ್ಯಾತರು ಮತ್ತು ಒಬಿಸಿಗಳನ್ನು ಮತದಾನದ ಹಕ್ಕಿನಿಂದ ವಂಚಿಸಲಾಗುತ್ತಿದೆ. ಇದನ್ನು ನಾವು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಅವರು ತಕ್ಷಣ ರಾಜೀನಾಮೆ ನೀಡಬೇಕು ಎಂದು ಅವರು ಆಗ್ರಹಿಸಿದರು.

ಸುಪ್ರೀಂಕೋರ್ಟ್ ಸಂವಿಧಾನದ 142ನೇ ವಿಧಿಯನ್ನು ಬಳಸಿ ಜ್ಞಾನೇಶ್ ಕುಮಾರ್ ಅವರನ್ನು ದೇಶದ್ರೋಹದ ಮೊಕದ್ದಮೆಯ ಆಧಾರದ ಮೇಲೆ ಬಂಧಿಸಬೇಕು. ಅವರ ನೇತೃತ್ವದಲ್ಲಿ ನಡೆದ ಎಲ್ಲ ಚುನಾವಣೆಗಳನ್ನು ರದ್ದುಗೊಳಿಸಬೇಕು. ಚುನಾವಣಾ ಆಯುಕ್ತರ ನೇಮಕಾತಿ ನೀತಿಯನ್ನು ಒಳಗೊಂಡಿರುವ 2023ರ ತಿದ್ದುಪಡಿ ಕಾಯಿದೆಯನ್ನು ರದ್ದುಪಡಿಸಬೇಕು. ಚುನಾವಣಾ ಆಯೋಗ ಮತ್ತು ಚುನಾವಣಾ ಪ್ರಕ್ರಿಯೆಗಳು ಪ್ರಜಾತಾಂತ್ರಿಕವಾಗಿರಬೇಕು. ಇವಿಎಂ ಪದ್ಧತಿಯನ್ನು ರದ್ದುಪಡಿಸಿ ಬ್ಯಾಲೆಟ್ ಪೇಪರ್ ಮೂಲಕ ಚುನಾವಣೆ ನಡೆಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

**ಮಾತಿನ ಚಕಮಕಿ:** ಸರ್ ಎಂ.ವಿ. ಪ್ರತಿಮೆ ಬಳಿಯಿಂದ ಜಿಲ್ಲಾಧಿಕಾರಿ ಕಚೇರಿಗೆ ಮೆರವಣಿಗೆ ತೆರಳುವ ಸಂದರ್ಭದಲ್ಲಿ ಜ್ಞಾನೇಶ್ ಕುಮಾರ್ ಅವರ ಪ್ರತಿಕೃತಿಯನ್ನು ದಹಿಸಲು ಕಾಂಗ್ರೆಸ್ ಕಾರ್ಯಕರ್ತರು ಮುಂದಾದರು. ಆಗ ಮಧ್ಯಪ್ರವೇಶಿಸಿದ ಪೊಲೀಸರು ಅವಕಾಶ ನೀಡಲಿಲ್ಲ. ಪ್ರತಿಕೃತಿಯನ್ನು ಪೊಲೀಸರು ಕಿತ್ತುಕೊಂಡರು. ಈ ವೇಳೆ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಪೊಲೀಸರ ನಡುವೆ ನಡುವೆ ಮಾತಿನ ಚಕಮಕಿ ನಡೆಯಿತು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಶುಭದಾಯಿನಿ, ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಅಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್, ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರುದ್ರಪ್ಪ, ಗ್ರಾಮಾಂತರ ಬ್ಲಾಕ್ ಅಧ್ಯಕ್ಷ ಅಪ್ಪಾಜಿ, ಮುಖಂಡರಾದ ಶ್ರೀಧರ್, ವಿಜಯಕುಮಾರ್, ನಾಗೇಂದ್ರಕುಮಾರ್, ಸುರೇಶ್, ರಮೇಶ್ ಚಿನಕುರಳಿ, ನಾಗಮಣಿ, ಜ್ಯೋತಿ, ತಗ್ಗಹಳ್ಳಿ ಯಶೋದಾ ಸೇರಿದಂತೆ ಹಲವರು ಭಾಗವಹಿಸಿದ್ದರು.




# ಮಾಜಿ ಸಂಸದ ಪ್ರತಾಪ ಸಿಂಹ ಪ್ರಕರಣ ವಾಪಸ್ ಪಡೆಯದಿದ್ದರೆ ಹೋರಾಟ: ಪ್ರಶಾಂತ್ ಗೌಡ

**ಮೈಸೂರು:** ಮಾಜಿ ಸಂಸದ ಪ್ರತಾಪ್ ಸಿಂಹ ಅವರನ್ನು ವಿನಾಕಾರಣ ತೇಜೋವಧೆ ಮಾಡುವುದನ್ನು ಸಹಿಸುವುದಿಲ್ಲ. ಅವರ ವಿರುದ್ಧ ದಾಖಲಿಸಿರುವ ಅಟ್ರಾಸಿಟಿ ಪ್ರಕರಣ ಸೇರಿದಂತೆ ಎಲ್ಲ ಪ್ರಕರಣಗಳನ್ನು ರದ್ದುಪಡಿಸಬೇಕು. ಇಲ್ಲದಿದ್ದರೆ ಒಕ್ಕಲಿಗ ಸಮುದಾಯದ ವತಿಯಿಂದ ಕಾನೂನು ಹೋರಾಟದ ಜೊತೆಗೆ ಪ್ರತಿಭಟನೆ ನಡೆಸಲಾಗುವುದು ಎಂದು ನಾಡಪ್ರಭು ಕೆಂಪೇಗೌಡರ 517ನೇ ಜಯಂತ್ಯುತ್ಸವ ಸಮಿತಿಯ ಜಿಲ್ಲಾ ಅಧ್ಯಕ್ಷರೂ ಆದ, ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕ ಪಿ.ಪ್ರಶಾಂತ್ ಗೌಡ ಎಚ್ಚರಿಸಿದ್ದಾರೆ.



ತಿ.ನರಸೀಪುರದಲ್ಲಿ ಗಣೇಶೋತ್ಸವದ ಪೂರ್ವಭಾವಿ ಸಭೆಯ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಯೊಬ್ಬರು ಬಳಸಿದ ಹೇಳಿಕೆಗಳಿಂದ ವಿವಾದ ಆರಂಭವಾಯಿತು. ಈ ಕುರಿತು ಪ್ರತಿಭಟನೆ ನಡೆದ ಸಂದರ್ಭದಲ್ಲಿ ಪೊಲೀಸ್ ವರಿಷ್ಠಾಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದ್ದರು. ಆದರೆ ಬಳಿಕ ಪ್ರತಾಪ್ ಸಿಂಹ ಅವರ ವಿರುದ್ಧ ಅಟ್ರಾಸಿಟಿ ಪ್ರಕರಣ ದಾಖಲಿಸಿರುವುದು ಏಕೆ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು. ಪ್ರತಾಪ್ ಸಿಂಹ ಯಾವ ಹೇಳಿಕೆ ನೀಡಿದ್ದಾರೆ, ಅದು ಕಾನೂನು ಬಾಹಿರವಾಗಿದ್ದರೆ ಅದರ ಆಧಾರದ ಮೇಲೆ ಕ್ರಮ ಕೈಗೊಳ್ಳಲಿ. ಆದರೆ ಪೊಲೀಸ್ ಅಧಿಕಾರಿಯ ಹೇಳಿಕೆಯ ಕುರಿತು ಪ್ರತಿಭಟನೆಗಳು ನಡೆದಿದ್ದರೂ ಅವರ ವಿರುದ್ಧ ಕ್ರಮ ಕೈಗೊಳ್ಳದೆ, ಪ್ರತಾಪ್ ಸಿಂಹ ಅವರ ವಿರುದ್ಧ ಪ್ರಕರಣ ದಾಖಲಿಸಿರುವುದು ಸರಿಯಲ್ಲ ಎಂದು ಅವರು ಆಕ್ಷೇಪಿಸಿದರು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಕುರಿತು ಪ್ರತಾಪ್ ಸಿಂಹ ಅವರು ಲೇಖನಗಳನ್ನು ಬರೆದಿದ್ದು, ಅಂಬೇಡ್ಕರ್ ಅವರ ಸಿದ್ಧಾಂತಗಳನ್ನು ಸಮಾಜಕ್ಕೆ ತಿಳಿಸುವ ಕೆಲಸ ಮಾಡಿದ್ದಾರೆ. ಅಂಬೇಡ್ಕರ್ ಅವರನ್ನು ಅಪಮಾನಿಸುವಂತಹ ಯಾವುದೇ ಹೇಳಿಕೆಯನ್ನು ಅವರು ನೀಡಿಲ್ಲ. ಆದರೂ ಅವರ ವಿರುದ್ಧ ಅಪಪ್ರಚಾರ ನಡೆಸಲಾಗುತ್ತಿದೆ ಎಂದು ಆರೋಪಿಸಿದರು. ಡಾ.ಬಿ.ಆರ್.ಅಂಬೇಡ್ಕರ್ ಅವರು ಎಲ್ಲರಿಗೂ ಸಮಾನತೆ ಮತ್ತು ಸಾಮಾಜಿಕ ನ್ಯಾಯ ದೊರೆಯಬೇಕು ಎಂಬ ಉದ್ದೇಶದಿಂದ ಸಂವಿಧಾನ ರಚಿಸಿದ್ದಾರೆ. ಸಂವಿಧಾನದ ಹೆಸರಿನಲ್ಲಿ ಯಾವುದೇ ವ್ಯಕ್ತಿಯನ್ನು ತೇಜೋವಧೆ ಮಾಡುವ ಅಥವಾ ಕುಟುಂಬವನ್ನು ಅವಹೇಳನ ಮಾಡುವ ರೀತಿಯ ನಡೆ ಸರಿಯಲ್ಲ. ಪ್ರತಾಪ್ ಸಿಂಹ ಅವರಿಂದ ಯಾವ ತಪ್ಪಾಗಿದೆ ಎಂಬುದನ್ನು ಸ್ಪಷ್ಟಪಡಿಸಲಿ. ಈ ಕುರಿತು ಚರ್ಚೆಗೆ ಕರೆದರೆ ಭಾಗವಹಿಸಲು ಸಿದ್ಧವಿದ್ದೇವೆ. ಆದರೆ ರಾಜಕೀಯ ಕಾರಣಗಳಿಗಾಗಿ ಮೈಸೂರು ಭಾಗದ ಶಾಂತಿ ಮತ್ತು ಸೌಹಾರ್ದ ವಾತಾವರಣಕ್ಕೆ ಧಕ್ಕೆ ತರುವಂತಹ ಬೆಳವಣಿಗೆಗಳನ್ನು ಸಹಿಸುವುದಿಲ್ಲ ಎಂದರು.

ಶಾಸಕ ಪ್ರದೀಪ್ ಈಶ್ವರ್ ತಮ್ಮ ಸ್ಥಾನಮಾನದ ಜವಾಬ್ದಾರಿಯನ್ನು ಮರೆತು ಹೇಳಿಕೆಗಳನ್ನು ನೀಡುತ್ತಿದ್ದಾರೆ. ನ್ಯಾಯಾಲಯದ ಆದೇಶವನ್ನು ಧಿಕ್ಕರಿಸುವ ರೀತಿಯಲ್ಲಿ ಅವರು ಹೇಳಿಕೆಗಳನ್ನು ನೀಡಿದ್ದಾರೆ. ಆ ಮೂಲಕ ಅಂಬೇಡ್ಕರ್ ಅವರಿಗೂ ಅಪಮಾನ ಮಾಡಿದ್ದಾರೆ. ಮೈಸೂರು ಭಾಗದಲ್ಲಿ ವಿವಿಧ ಸಮುದಾಯಗಳ ನಡುವೆ ಇರುವ ಸೌಹಾರ್ದತೆ ಹಾಗೂ ಸಹೋದರತ್ವಕ್ಕೆ ಧಕ್ಕೆ ಉಂಟಾಗುವಂತಹ ಹೇಳಿಕೆಗಳನ್ನು ನೀಡಬಾರದು ಎಂದು ಆಗ್ರಹಿಸಿದರು. ಅವರಿಗೆ ಪ್ರತಾಪ್ ಸಿಂಹ ಅವರ ವಿಚಾರದಲ್ಲಿ ಯಾವುದೇ ಆರೋಪಗಳಿದ್ದರೆ ಬಹಿರಂಗವಾಗಿ ಚರ್ಚೆಗೆ ಬರಲಿ. ಸ್ಥಳ ಮತ್ತು ದಿನಾಂಕ ನಿಗದಿಪಡಿಸಿದರೆ ಚರ್ಚೆಗೆ ತಾವು ಸಿದ್ಧ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ವಸಂತ ಮುನೀಶ್, ರಾಜಕುಮಾರ್, ವಕೀಲ ಹೇಮಂತ್ ಇದ್ದರು.

# ರೈತರ ಸಾಲ ಮನ್ನಾ, ತಮಿಳುನಾಡಿಗೆ ನೀರು ನಿಲ್ಲಿಸಲು ಕನ್ನಡ ಸೇನೆ ಆಗ್ರಹ

## ಕೃಷಿಗೆ ನೀರಿಲ್ಲದಂತೆ ಮಾಡಿ ಸರ್ಕಾರ ಒಣ ಹುಲ್ಲಿನ ಗ್ಯಾರಂಟಿ ನೀಡಿದೆ-ಹೆಚ್.ಎಸ್.ಮಂಜುನಾಥ್




**ಮಂಡ್ಯ:** ರೈತರ ಸಾಲ ಮನ್ನಾ ಮಾಡಬೇಕು, ತಮಿಳುನಾಡಿಗೆ ನೀರು ಹರಿಸಬಾರದು, ಬೆಳೆಗೆ ಮತ್ತು ವ್ಯವಸಾಯಕ್ಕೆ ನೀರು ಹರಿಸಬೇಕು ಎಂದು ಆಗ್ರಹಿಸಿ ಕನ್ನಡ ಸೇನೆ ಸಂಘಟನೆಯ ಕಾರ್ಯಕರ್ತರು ಒಣಗುತ್ತಿರುವ ಮತ್ತು ಕಾಳು ಕಟ್ಟಿರುವ ಭತ್ತದ ಫಸಲನ್ನು ಹಿಡಿದು ನಗರದ ಸಂಜಯ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಸಂಜಯ ವೃತ್ತದ ಬಳಿ ಕೈಯಲ್ಲಿ ಒಣಗುತ್ತಿರುವ ಭತ್ತದ ಫಸಲು ಮತ್ತು ಕಾಳು ಕಟ್ಟಿದ ಭತ್ತದ ಫಸಲನ್ನು ಹಿಡಿದು ಜಮಾವಣೆಗೊಂಡ ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕಾವೇರಿ ನೀರು ನಿಯಂತ್ರಣ ಸಮಿತಿಯ ಶಿಫಾರಸನ್ನು ಸರ್ಕಾರ ಯಾವುದೇ ಕಾರಣಕ್ಕೂ ಪಾಲಿಸಬಾರದು ಎಂದು ಒತ್ತಾಯಿಸಿದರು. ತಮಿಳುನಾಡಿಗೆ ನೀರು ಹರಿಸುವುದನ್ನು ತಕ್ಷಣ ನಿಲ್ಲಿಸಬೇಕು. ಒಣಗುತ್ತಿರುವ ರೈತರ ಬೆಳೆಗಳನ್ನು ರಕ್ಷಿಸಲು ಮತ್ತು ವ್ಯವಸಾಯಕ್ಕೆ ನೀರು ಹರಿಸಲು ಕ್ರಮ ತೆಗೆದುಕೊಳ್ಳಬೇಕು. ಸಂಕಷ್ಟದಲ್ಲಿರುವ ರೈತರ ಸಂಪೂರ್ಣ ಸಾಲವನ್ನು ರಾಜ್ಯ ಸರ್ಕಾರ ಮನ್ನಾ ಮಾಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಕನ್ನಡ ಸೇನೆ ಸಂಘಟನೆಯ ಜಿಲ್ಲಾ ಘಟಕದ ಅಧ್ಯಕ್ಷ ಮಂಜುನಾಥ್ ಮಾತನಾಡಿ ನೀರಿಲ್ಲದೆ ಹಸಿ ಹುಲ್ಲಿನ ರೀತಿ ಭತ್ತದ ಫಸಲು ಒಣಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮಂಡ್ಯ ಭಾಗದ ರೈತರ ಬೆಳೆಗಳಿಗೆ ಕುಡಿಯಲು ಮತ್ತು ಕೃಷಿಗೆ ನೀರಿಲ್ಲದಂತೆ ಮಾಡುವ ಮೂಲಕ ಈ ಸರ್ಕಾರ ಒಣ ಹುಲ್ಲಿನ ಗ್ಯಾರಂಟಿ ನೀಡಿದೆ ಎಂದು ಆರೋಪಿಸಿದರು. ಪ್ರತಿದಿನ ತಮಿಳುನಾಡಿಗೆ ಮಾತ್ರ ನೀರು ಹರಿಸಲಾಗುತ್ತಿದೆ. ಹಸಿರಿನಿಂದ ಕಂಗೊಳಿಸುತ್ತಿದ್ದ ಮಂಡ್ಯದ ಭೂಮಿ ಇಂದು ನೀರಿನ ಅಭಾವದಿಂದ ಒಣಗಿ ಹೋಗುತ್ತಿದೆ ಎಂದು ಅವರು ದೂರಿದರು. ಪ್ರತಿಭಟನೆಯಲ್ಲಿ ಸಂಘಟನೆಯ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಸೌಭಾಗ್ಯ, ಉಪಾಧ್ಯಕ್ಷರಾದ ಶಿವಲಿಂಗಪ್ಪ, ಶೋಭಾ, ಪ್ರೇಮಾ, ಲೀಲಾ, ಶಾಲಿನಿ, ರಘು, ಮಂಜುನಾಥ್, ಅಭಿಷೇಕ್, ಕುಮಾರ್, ತೇಜಸ್, ಅಸ್ಲಾಂ, ಸಲ್ಮಾನ್, ಶಿವಲಿಂಗ, ಉಮೇಶ್‌ಗೌಡ ಭಾಗವಹಿಸಿದ್ದರು.

# ಬರ ಪರಿಹಾರ, ಕಬ್ಬಿನ ಬಾಕಿ ಹಣಕ್ಕೆ ಆಗ್ರಹಿಸಿ ರೈತರ ಪ್ರತಿಭಟನೆ: ಮನವಿಗೆ ಜಿಲ್ಲಾಧಿಕಾರಿ ಸ್ಪಂದನೆ

## ಸರ್ ಎಂ.ವಿ. ಪ್ರತಿಮೆಯಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ, ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಕೆ

**ಮಂಡ್ಯ:** ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಬರ ಪರಿಹಾರ, ಸಾಲ ವಸೂಲಾತಿಗೆ ತಡೆ ಮತ್ತು ಕಬ್ಬಿನ ಬಾಕಿ ಹಣ ಪಾವತಿ ಸೇರಿದಂತೆ ವಿವಿಧ ಬೇಡಿಕೆಗಳ ಮನವಿಯನ್ನು ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಯಿತು.



ಇದಕ್ಕೂ ಮುನ್ನ ಕಾವೇರಿ ವನದ ಸರ್ ಎಂ. ವಿಶ್ವೇಶ್ವರಯ್ಯ ಪ್ರತಿಮೆ ಮುಂಭಾಗ ಜಮಾಯಿಸಿದ ರೈತರು ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಎಲ್ಲಾ ಅರ್ಹ ರೈತರಿಗೆ ಸಮಾನವಾಗಿ ಬರ ಪರಿಹಾರ ನೀಡಬೇಕು.ಬರಪೀಡಿತ ಪ್ರದೇಶಗಳಲ್ಲಿ ಸಂಕಷ್ಟದಲ್ಲಿರುವ ರೈತರಿಂದ ವಾಣಿಜ್ಯ ಬ್ಯಾಂಕುಗಳು, ಸಹಕಾರಿ ಸಂಸ್ಥೆಗಳು ಮತ್ತು ಕಿರು ಹಣಕಾಸು ಸಂಸ್ಥೆಗಳು ಬಲವಂತದ ಸಾಲ ವಸೂಲಾತಿ, ಜಪ್ತಿ ಕ್ರಮ ಮತ್ತು ಕಿರುಕುಳ ನೀಡಬಾರದೆಂದು ಆದೇಶ ಹೊರಡಿಸಬೇಕು. ಕಬ್ಬು ಪೂರೈಸಿದ ಹದಿನಾಲ್ಕು ದಿನಗಳೊಳಗೆ ಬಾಕಿ ಹಣ ಪಾವತಿಸದ ಸಕ್ಕರೆ ಕಾರ್ಖಾನೆಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಮತ್ತು 2025–26ನೇ ಹಂಗಾಮಿನ ಪ್ರೋತ್ಸಾಹಧನದ ಬಾಕಿಯನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಲಾಗಿದೆ. ಕೆ.ಆರ್.ಎಸ್. ಜಲಾಶಯದಿಂದ ಬೆಂಗಳೂರಿಗೆ ನೀರು ಒದಗಿಸುವ ಕಾವೇರಿ ಆರನೇ ಹಂತದ ಕುಡಿಯುವ ನೀರಿನ ಯೋಜನೆಯ ಕುರಿತು ರೈತರೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಬೇಕು ಎಂದು ಕೋರಲಾಗಿದೆ. ನ್ಯಾಯಾಲಯದ ಆದೇಶವಿದ್ದರೂ ಬಿಡುಗಡೆ ಮಾಡದ ಗೋವುಗಳ ಪ್ರಕರಣದಲ್ಲಿ ನ್ಯಾಯಾಂಗ ನಿಂದನೆ ಕಾಯ್ದೆಯಡಿ ಕ್ರಮ ಜರುಗಿಸಬೇಕು ಮತ್ತು ಮೀಸಲು ಪ್ರದೇಶದ ರೈತರಿಂದಲೇ ಕಾರ್ಖಾನೆಗಳು ಮೊದಲು ಕಬ್ಬು ಪಡೆಯುವಂತೆ ಸೂಚಿಸಬೇಕು ಎಂದು ಮನವಿ ಸಲ್ಲಿಸಿದರು.

**ಜಿಲ್ಲಾಧಿಕಾರಿಗಳ ಭರವಸೆ:** ಮನವಿ ಸ್ವೀಕರಿಸಿ ಮಾತನಾಡಿದ ಜಿಲ್ಲಾಧಿಕಾರಿ ಡಾ. ಕುಮಾರ ಅವರು ರೈತರ ಬೇಡಿಕೆಗಳಿಗೆ ಸ್ಪಂದಿಸಲು ಜಿಲ್ಲಾಡಳಿತ ಬದ್ಧವಾಗಿದೆ ಜಿಲ್ಲೆಯಾದ್ಯಂತ ಬರ ಪರಿಸ್ಥಿತಿಯನ್ನು ಅಧಿಕೃತವಾಗಿ ಘೋಷಿಸಲಾಗಿದ್ದು ಸರ್ಕಾರದಿಂದ ಅನುದಾನ ಬಿಡುಗಡೆಯಾದ ತಕ್ಷಣ ಎಲ್ಲಾ ಅರ್ಹ ರೈತರಿಗೆ ಸಮಾನವಾಗಿ ಪರಿಹಾರ ತಲುಪಿಸಲಾಗುವುದು ಎಂದು ಅವರು ತಿಳಿಸಿದರು.

ಬಲವಂತದ ಸಾಲ ವಸೂಲಾತಿ ಮಾಡಬಾರದೆಂದು ಜಿಲ್ಲಾ ಲೀಡ್ ಬ್ಯಾಂಕ್ ವ್ಯವಸ್ಥಾಪಕರ ಸಭೆ ಕರೆದು ಎಲ್ಲಾ ಬ್ಯಾಂಕುಗಳ ಪ್ರಾದೇಶಿಕ ವ್ಯವಸ್ಥಾಪಕರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು ಅವರು ಹೇಳಿದರು.

ಕಬ್ಬಿನ ಬಾಕಿ ಹಣ ಪಾವತಿಗೆ ಕಾರ್ಖಾನೆಗಳ ಆಡಳಿತ ಮಂಡಳಿಗೆ ನಿರ್ದೇಶನ ನೀಡಲಾಗಿದ್ದು ಸರ್ಕಾರದ ಪಾಲಿನ ಹತ್ತು ಕೋಟಿ ಮೂವತ್ತಾರು ಲಕ್ಷ ರೂಪಾಯಿಯನ್ನು ಸುಮಾರು ಮೂವತ್ತೆರಡು ಸಾವಿರ ರೈತರ ಖಾತೆಗಳಿಗೆ ನೇರವಾಗಿ ಜಮಾ ಮಾಡಲಾಗಿದೆ ಎಂದು ಅವರು ವಿವರಿಸಿದರು.

ಕಾವೇರಿ ಆರನೇ ಹಂತದ ಯೋಜನೆಯ ಮನವಿಯನ್ನು ರಾಜ್ಯ ಸರ್ಕಾರಕ್ಕೆ ರವಾನಿಸಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ಆಯೋಜಿಸಲಾಗುವುದು ಎಂದು ಅವರು ಹೇಳಿದರು.

ಕಬ್ಬು ಸರಬರಾಜು ಒಪ್ಪಂದ ಮಾಡಿಕೊಂಡ ಮೀಸಲು ಪ್ರದೇಶದ ರೈತರಿಗೇ ಮೊದಲ ಆದ್ಯತೆ ನೀಡಬೇಕೆಂದು ಕಾರ್ಖಾನೆಗಳ ವ್ಯವಸ್ಥಾಪಕ ನಿರ್ದೇಶಕರಿಗೆ ಪುನಃ ಸೂಚನೆ ನೀಡಲಾಗುವುದು ಎಂದು ಅವರು ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ, ರೈತ ಮುಖಂಡರಾದ ಬಿ.ಎಸ್.ಲಿಂಗಪ್ಪಾಜಿ,ರವಿಕುಮಾರ್, ಎಂ.ಎಸ್.ವಿಜಯಕುಮಾರ್, ಬೋರಾಪುರ ಶಂಕರೇಗೌಡ, ಪಿ.ಬಾಲಕೃಷ್ಣ, ಪಿ.ನಾಗರಾಜು ಕೆನ್ನಾಳು, ಅಣ್ಣಯ್ಯ ಸೇರಿದಂತೆ ನೂರಾರು ರೈತರು ಭಾಗವಹಿಸಿದ್ದರು.

# ಭಯ ಬಿಟ್ಟರೆ ಬದುಕು ಗೆಲುವು




ಭಯವು ಕಾಲಿಗೆ ಬಿಗಿದ ಸರಪಳಿ. ಅದು ಇದ್ದರೆ ಜೀವನ ಒಂದು ಹೆಜ್ಜೆಯೂ ಮುಂದೆ ಸಾಗದು. ಭಯ ಹುಟ್ಟಿದಾಗ ಮೆದುಳಿನ ಹೈಪೋಥಲಾಮಸ್ ಎಚ್ಚರಗೊಂಡು ಗ್ಲುಕೋಕಾರ್ಟಿಕಾಯ್ಡ್ ರಸ ದೇಹದಲ್ಲಿ ಹರಿಯುತ್ತದೆ. ಎದೆ ಡವಡವ, ಕೈ ನಡುಕ, ಹೊಟ್ಟೆಯಲ್ಲಿ ಹಸಿವಿನ ನೆರಳು. ನಾರ್ವೆ ದೇಶದ ಅಧ್ಯಯನ ಹೇಳುವಂತೆ, ದಿನಕ್ಕೊಂದು ಸಣ್ಣ ಭಯವನ್ನು ದಾಟುವವರಲ್ಲಿ ಮೆದುಳಿನ ನ್ಯೂರೋಪ್ಲಾಸ್ಟಿಸಿಟಿ ಹೆಚ್ಚಿ ಹೊಸ ಕೌಶಲ ಬೇಗ ಅರಳುತ್ತದೆ. ಸರಪಳಿ ಕಿತ್ತ ಮನಸ್ಸಿಗೆ ರೆಕ್ಕೆ ಬರುತ್ತದೆ.

ಭಯರಹಿತ ಮನುಷ್ಯನೇ ಸಮಾಜಕ್ಕೆ ದೀಪ. ಕರೆಂಟ್ ತಪ್ಪಿದ ರಾತ್ರಿ ಮೇಣದಬತ್ತಿ ಹಿಡಿದು ಅಜ್ಜಿಯನ್ನು ನದಿ ದಾಟಿಸುವ ಯುವಕ ಊರಿಗೆ ಧೈರ್ಯ ತುಂಬುತ್ತಾನೆ. ಸಾಲದ ಬಗ್ಗೆ ಬೆದರದೆ ತರಕಾರಿ ಬೆಳೆದು ಮಾರುವ ಮಹಿಳೆ ನಾಲ್ಕು ಹೆಣ್ಣುಮಕ್ಕಳಿಗೆ ದುಡಿಮೆಯ ದಾರಿ ತೋರಿಸುತ್ತಾಳೆ. ಸಭೆಯಲ್ಲಿ ನಡುಗದೆ ಹಕ್ಕು ಕೇಳುವ ರೈತ ಯುವಜನತೆಗೆ ನ್ಯಾಯದ ಧ್ವನಿ ಆಗುತ್ತಾನೆ. ಒಬ್ಬರ ನಡುಕರಹಿತ ನಡೆಯು ಹತ್ತು ಬದುಕನ್ನು ಎತ್ತಿ ನಿಲ್ಲಿಸುತ್ತದೆ.

ಭಯ ಜಯಿಸುವುದು ಅಭ್ಯಾಸದಿಂದ. ನಸುಕಿನಲ್ಲಿ ಇಂದಿನ ಒಂದು ಅಂಜಿಕೆಯನ್ನು ಕಾಗದದಲ್ಲಿ ಬರೆಯಿರಿ. ಬಿಸಿಲು ಮುಳುಗುವ ಮುನ್ನ ಅದನ್ನು ಎದುರಿಸಿ ಕಾಗದವನ್ನು ನೀರಿಗೆ ಬಿಡಿ. ಕನ್ನಡಿ ಎದುರು ನಿಂತು "ನಾನು ನನ್ನ ಗೆಳೆಯ" ಎಂದು ಮೂರು ಸಲ ಹೇಳಿ. ಅಪರಿಚಿತರಿಗೆ ನೀವೇ ಮೊದಲು ನಮಸ್ಕರಿಸಿ. ಭಾನುವಾರ ದೇವಸ್ಥಾನದ ಮೆಟ್ಟಿಲೇರಿ ಊರನ್ನು ನೋಡಿ. ಆಗ ಸಮಸ್ಯೆ ಅತ್ಯಂತ ಚಿಕ್ಕದಾಗಿ ಕಾಣುತ್ತದೆ.

ಭಯದ ಕೋಟೆ ಕುಸಿದ ಕ್ಷಣ ಬದುಕಿನ ಅಂಗಳ ವಿಸ್ತಾರವಾಗುತ್ತದೆ. ದಿಗಿಲು ಕಳೆದ ದಿನದಿಂದಲೇ ಆಯುಷ್ಯದ ರುಚಿ ಹೆಚ್ಚುತ್ತದೆ. ಭಯ ಗೆದ್ದವನಿಗೆ ಸಾವು ಕೂಡ ಹೊಸ ಬೆಳಗಿನಂತೆ ಸ್ನೇಹಿತವಾಗುತ್ತದೆ.

ಅಂಕಣ-32
ಸಾವು ಸಂಕಟಪಡುವ ಸಂಗತಿಗಳು..!



|ಡಾ.ಸುಧಾಕರ.ಜಿ.ಲಕ್ಕವಳ್ಳಿ
87479 69381

# "ತಾಳಿ...ತಾಳಿ!"



। ರೂಪ ಮಂಜುನಾಥ ಹೊಳೆನರಸೀಪುರ



ಇತ್ತೀಚೆಗೆ ಮನೆಗೆ ಬಂದ ಗೆಳೆಯರು ತಮ್ಮ ಗೆಳೆಯನನ್ನು ಕುರಿತು, ಅಲ್ಲಾರೀ, ನಿಮ್ಮ ಹುಡುಗನಿಗೆ ಆಗಲೇ ಮೂವತ್ತು ದಾಟಿತು. ಒಳ್ಳೆ ಕೆಲಸ,ಐದಂಕಿಯ ಸಂಬಳ, ಯೋಗ್ಯ, ಹೀಗಿರುವಾಗಏನಕ್ಕೆ ತಡ ಮಾಡ್ತಿದೀರಾ ನಮಗೆ ಫೇಣಿ ಊಟ ಹಾಕಿಸೋದು ಯಾವಾಗ ಎಂದು ಕಾಳಜಿ ತೋರಿಸಿದರು..

ಅದಕ್ಕೆ ಪಕ್ಕದಲ್ಲೇ ನಿಂತಿದ್ದ ಅವರ ಮಗ, ಅಯ್ಯೋ ಅಂಕಲ್, ಊಟ ತಾನೇ, ಬನ್ನಿ ಈಗ್ಲೇ ನಿಮಗೆ ಯಾವ ರೆಸ್ಟೋರೆಂಟ್ ಬೇಕೋ ಅಲ್ಲಿಗೇ ಹೋಗಣಂತೆ!ಆಫೀಸ್‌ನಲ್ಲಿ ಬಾಸ್ ಕೊಡೋ ಕಾಟ, ಟಾರ್ಗೆಟ್ನೇ ಮುಗಿಸೋಕೇ ಆಗ್ತಿಲ್ಲ. ಇನ್ನು ಕಟ್ಟಿಕೊಂಡವಳ ಕಾಟ,ಸಂಸಾರದ ಟಾರ್ಗೆಟ್ ಯಾರಿಗೆ ಬೇಕಿದೆ ಈಗಿರೋ ಸಿಚುವೇಷನ್ ನಲ್ಲಿ ನಾನು ಸಿಂಗಲ್ ಆಗಿಯೇ ಹ್ಯಾಪಿ ಆಗಿದೀನಿ! ಎಂದ.

ಆ ಮಾತು ಕೇಳಿದ ಹಿರಿಯರ ಒಬ್ಬರ ಮುಖವನ್ನೊಬ್ಬರು, ಹೀಗೂ ಉಂಟೇ , ಎನ್ನುವಂತೆ ನೋಡಿಕೊಂಡರು.

ಹೌದು, ಕಾಲ ಬದಲಾಗಿದೆ. ಒಂದು ಕಾಲದಲ್ಲಿ ಮದುವೆ ವಯಸ್ಸಾಯಿತು ಎಂದರೆ ಸಾಕು ಹುಡುಗ/ ಹುಡುಗಿ ಯೋಗ್ಯಳೇ ಇರಲೊಂದು ಮನೆ ಇದೆಯೇ ಮನೆ ಖರ್ಚಿಗೊಂದು ಮೂಲ ಇದೆಯೇ ಇಷ್ಟು ಮಾತ್ರವೇ ಮದುವೆಯಾಗಲು ಯೋಗ್ಯ ಮಾನದಂಡವಾಗಿತ್ತು! ಆದರೆ, ಈಗಿನ ಯುವಜನತೆಯ ಮಾನದಂಡಗಳೇ ಬೇರೆ!

ಆದರೆ ಇಂದಿನ ಯುವಜನತೆಯ ಒಂದು ವರ್ಗವನ್ನು ನೋಡಿದರೆ, ಅಯ್ಯಪ್ಪಾ ಮದುವೆಯಾ ಆ ಜಂಜಾಟ ಕಟ್ಟಿಕೊಂಡು ಒತ್ತಡದಲ್ಲಿ ಹೆಣಗುವ ಬದಲು, ಓಟಿಟಿ ಯಲ್ಲಿ ಒಂದು ಒಳ್ಳೆಯ ಸೀರೀಸ್ ನೋಡುತ್ತಾ ನಮ್ಮ ಒತ್ತಡ ಮರೆಯುವುದೇ ಮೇಲು! ಎನ್ನುವ ಧೋರಣೆಯೂ ಕಾಣುತ್ತಿದೆ.

ಭಾರತದಲ್ಲಿ ಮದುವೆಯ ವಯಸ್ಸು ಹೆಚ್ಚುತ್ತಿರುವುದು ಮತ್ತು ಯುವಜನರಲ್ಲಿ ಅವಿವಾಹಿತರ ಪ್ರಮಾಣ ಹೆಚ್ಚುತ್ತಿರುವ ಪ್ರವೃತ್ತಿಯೂ ದಾಖಲಾಗಿದೆ. 2019ರ ವೇಳೆಗೆ 15 29 ವರ್ಷದ ಯುವಕರಲ್ಲಿ ಎಂದಿಗೂ ಮದುವೆಯಾಗದವರ ಪ್ರಮಾಣ 2011ಕ್ಕೆ ಹೋಲಿಸಿದರೆ ಹೆಚ್ಚಾಗಿತ್ತು ಎಂದು ಕೇಂದ್ರ ಸರ್ಕಾರದ ***Youth in India*** 2022 ವರದಿ ಹೇಳುತ್ತದೆ. ***(Ministry of Statistics )*** ಮುಂದೆ ಈ ಅಂಕಿಸಂಖೆಗಳು ಮತ್ತೂ ಹೆಚ್ಚಾಗುವ ಸಾಧ್ಯತೆಗಳಿವೆ. ಯುವಪೀಳಿಗೆ ಮದುವೆ, ಸಂಸಾರ ಎಂಬ ಬಂಧನಗಳಿಗೆ ಸಿಗದೆ, ಒಂಟಿಯಾಗಿಯೇ ಇರಲು ಬಯಸುತ್ತಿರುವುದು ವಿಪರ್ಯಾಸ! ಹಾಗಾದರೆ, ಇಂದಿನ ಯುವಜನತೆಗೆ ಮದುವೆ ಎಂದರೆ ಏಕಿಷ್ಟು ನಿರಾಸಕ್ತಿ

ಎಲ್ಲರಿಗೂ ಸ್ವಾತಂತ್ರ್ಯದ ಬಯಕೆ!

ಇಂದಿನ ಯುವಕ-ಯುವತಿಯರಿಗೆ ತಮ್ಮ ವೈಯಕ್ತಿಕ ಸ್ವಾತಂತ್ರ್ಯ, ವೃತ್ತಿಜೀವನ, ಪ್ರವಾಸ,ಮೋಜು, ಮಸ್ತಿ, ಹವ್ಯಾಸಗಳು ಮತ್ತು ತಮ್ಮದೇ ಆದ ಜೀವನಶೈಲಿ ಹೆಚ್ಚು ಆದ್ಯತೆಯಾಗಿವೆ. ನನ್ನ ಸಮಯ, ನನ್ನ ದುಡ್ಡು,ನನ್ನ ಬದುಕು , ನನ್ನ ನಿರ್ಧಾರ ಎನ್ನುವ ಮನೋಭಾವ ಬೆಳೆದಿರುವಾಗ, ಇನ್ನೊಬ್ಬರಿಗಾಗಿ ತಮ್ಮ ಇಷ್ಟಾನಿಷ್ಟಗಳನ್ನು ರಾಜಿ ಮಾಡಿಕೊಳ್ಳುವುದಾಗಲೀ,ತ್ಯಾಗ ಮಾಡುವುದಾಗಲೀ ಈ ಪೀಳಿಗೆಯವರಿಗೆ ಕಷ್ಟವೆನಿಸುವುದು ಸಹಜ!

ಖರ್ಚಿನ ಬಾಬತ್ತು ಕೂಡಾ!

ಮದುವೆ ಎನ್ನುವುದು ಇಂದಿನ ದಿನಗಳಲ್ಲಿ ಬರಿ ಎರಡು ಮನಸ್ಸುಗಳ ಮಿಲನವಲ್ಲ; ಅದೊಂದು ದೊಡ್ಡ ಬಜೆಟ್ ನ ಕಾರ್ಯಕ್ರಮ!ಕಲ್ಯಾಣ ಮಂಟಪ,ಅಲಂಕಾರ, ಫೋಟೋಶೂಟ್, ಬಟ್ಟೆ, ಊಟ, ಉಡುಗೊರೆಗಳು, ಇವೆಲ್ಲ ಮದುವೆಯ ಸಮಯಕ್ಕಾಗಿ ಅಲ್ಲೇ ಜೇಬು ಖಾಲಿಯಾಗಿ ಹೋದಮೇಲೆ,ಮುಂದೆ ಸಂಸಾರ ಹೂಡುವಷ್ಟರಲ್ಲಿ ಖರ್ಚು ನಿಭಾಯಿಸಲು ಹೈರಾಣಾಗುವ ಭಯವೂ ಯುವಜನರನ್ನು ಕಾಡುತ್ತದೆ.

ಸಾಲ ಮಾಡಿ ಮದುವೆಯಾಗುವುದಕ್ಕಿಂತ, ಮೊದಲು ನಮ್ಮ ಜೀವನವನ್ನು ಸ್ವಲ್ಪ ಸ್ಥಿರಪಡಿಸಿಕೊಳ್ಳೋಣ ಎನ್ನುವುದು ಅವರ ಲೆಕ್ಕಾಚಾರ.

**ಬಂಧನದ ಭಯ!**

ಇತ್ತೀಚೆಗೆ ಸಣ್ಣಸಣ್ಣ ಕಾರಣಗಳಿಗೂ ವಿಚ್ಛೇದನಗಳು, ದಾಂಪತ್ಯದಲ್ಲಿನ ಮನಸ್ತಾಪಗಳು,ಕಲಹಗಳು,ಅತಿಯಾದ ನಿರೀಕ್ಷೆ,ಸಾಮಾಜಿಕ ಜಾಲತಾಣಗಳಲ್ಲಿನ ವೈಭವಗಳನ್ನು ನೋಡುತ್ತಾ ತಮ್ಮ ಬದುಕನ್ನು ಹೋಲಿಸಿಕೊಳ್ಳುವುದು, ಹೊಂದಾಣಿಕೆಯ ಕೊರತೆ ಇವೆಲ್ಲವನ್ನು ನೋಡುತ್ತಿರುವ ಯುವಜನರಲ್ಲಿ, ಏಕೆ ಬೇಕು ಈ ಬಾಣಲೆಯಿಂದ ಬೆಂಕಿಗೆ ಬೀಳುವ ಈ ಆಟಾ ಎಂಬ ಪ್ರಶ್ನೆ ಮೂಡುವುದೂ ಅಚ್ಚರಿಯಲ್ಲ. ಆದರೆ ಇಲ್ಲಿ ಮತ್ತೊಂದು ಕುತೂಹಲಕಾರಿ ಮಗ್ಗುಲೂ ಇದೆ.



ಮದುವೆಗಳ ಸಂಖೆ ಮುಂದೆ ಕಡಿಮೆಯಾದರೆ .

ದಶಕಗಳಿಂದ ಜನಸಂಖ್ಯೆಯ ಬಗ್ಗೆ ಚರ್ಚಿಸುತ್ತಿದ್ದ ಭಾರತದಲ್ಲಿ, ಕುಟುಂಬದ ಗಾತ್ರ ಈಗಾಗಲೇ ಗಣನೀಯವಾಗಿ ಕುಗ್ಗಿದೆ. ಭಾರತದ ಒಟ್ಟು ಫಲವತ್ತತೆ ದರ ***(Total Fertility Rate)*** ಸುಮಾರು 2.0ಕ್ಕೆ ಇಳಿದಿದ್ದು, ಸಾಮಾನ್ಯವಾಗಿ ಜನಸಂಖ್ಯೆಯನ್ನು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಸಮಮಟ್ಟದಲ್ಲಿ ಉಳಿಸುವ ***replacement level 2.1*** ಎಂದು ಪರಿಗಣಿಸಲಾಗುತ್ತದೆ. ***(UNFPA India )*** ಅಂದರೆ, ಇಬ್ಬರು ಸಾಕು ಎನ್ನುವುದರಿಂದ ಒಬ್ಬರು ಸಾಕು ಎನ್ನುವ ಮನೋಭಾವದವರೆಗೆ ಕುಟುಂಬದ ಕಲ್ಪನೆ ಬದಲಾಗುತ್ತಿದೆ.

ಹೀಗಿರುವಾಗ ಮದುವೆ ತಡವಾಗುವುದು,ಆಗದೇ ಇರುವುದು, ಕಡಿಮೆ ಮಕ್ಕಳನ್ನು ಹೊಂದುವುದು ಅಥವಾ ಮಕ್ಕಳೇ ಬೇಡ ಎನ್ನುವ ವೈಯಕ್ತಿಕ ನಿರ್ಧಾರಗಳು ಮುಂದಿನ ದಿನಗಳಲ್ಲಿ ಜನಸಂಖ್ಯೆಯ ಸ್ವರೂಪದ ಮೇಲೂ ಪರಿಣಾಮ ಬೀರುವ ಸಾಧ್ಯತೆಗಳಿವೆ.

ಆದರೆ ಇಲ್ಲಿ ಒಂದು ತಿದ್ದುಪಡಿ ಅಗತ್ಯ ಇದನ್ನು ಸರ್ಕಾರದ ಜನಸಂಖ್ಯಾ ನಿಯಂತ್ರಣದ ಯಶಸ್ಸು ಎಂದು ಮಾತ್ರ ನೋಡಲು ಸಾಧ್ಯವಿಲ್ಲ. ಶಿಕ್ಷಣ, ನಗರೀಕರಣ, ಮಹಿಳೆಯರ ಉದ್ಯೋಗ, ಕುಟುಂಬ ಯೋಜನೆ, ಜೀವನಮಟ್ಟ, ವಿವಾಹದ ವಯಸ್ಸು ಮತ್ತು ವೈಯಕ್ತಿಕ ಆಯ್ಕೆಗಳು ಹಲವಾರು ಕಾರಣಗಳು ಈ ಬದಲಾವಣೆಯ ಹಿಂದೆ ಇವೆ. ಭಾರತದಲ್ಲಿಯೇ ರಾಜ್ಯದಿಂದ ರಾಜ್ಯಕ್ಕೆ ***fertility***ಯಲ್ಲಿ ದೊಡ್ಡ ವ್ಯತ್ಯಾಸಗಳಿವೆ.

ಹಾಗಾಗಿ, ಇಂದಿನ ಯುವಜನರ ಮದುವೆ ಬೇಡ ಎನ್ನುವ ಮನೋಭಾವವನ್ನು ನೋಡಿ, ಸರಿ ಬಿಡಿ ಜನಸಂಖ್ಯಾ ಸ್ಫೋಟಕ್ಕಾದರೂ ಸ್ವಲ್ಪ ರೆಸ್ಟ್ ಸಿಗಲಿ! ಎಂದು ಹಾಸ್ಯ ಮಾಡಬಹುದು; ಆದರೆ ಅದರ ಹಿಂದೆ ಇರುವ ಸಾಮಾಜಿಕ ಬದಲಾವಣೆಯನ್ನು ಗಂಭೀರವಾಗಿ ಅರ್ಥಮಾಡಿಕೊಳ್ಳುವುದೂ ಅಗತ್ಯ.

ನಮ್ಮ ಕಾಳಜಿ ಎಲ್ಲಿರಬೇಕು

ಎಲ್ಲ ನಾಣ್ಯಗಳಿಗೂ ಇರುವಂತೆ ಈ ನಾಣ್ಯಕ್ಕೂ ಇನ್ನೊಂದು ಮಗ್ಗುಲು ಇದೆ.ಮದುವೆ ಎನ್ನುವುದು ಕೇವಲ ಸಂತಾನೋತ್ಪತ್ತಿಯ ವ್ಯವಸ್ಥೆಯಲ್ಲ. ಜೀವನದ ಏರುಪೇರುಗಳಲ್ಲಿ ಒಬ್ಬರಿಗೊಬ್ಬರು ಆಸರೆಯಾಗುವುದು, ಅನಾರೋಗ್ಯದಲ್ಲಿ ಜೊತೆಯಾಗುವುದು, ವೃದ್ಧಾಪ್ಯದಲ್ಲಿ ಸಹಾಯಕ್ಕಾಗುವುದು ಇಂತಹ ಮಾನವೀಯ ಸಾಂಗತ್ಯಕ್ಕೂ ಅದೊಂದು ಸಾಮಾಜಿಕ ವ್ಯವಸ್ಥೆಯಾಗಿದೆ.ಹರೆಯದಲ್ಲಿ ಇಷ್ಟೆಲ್ಲಾ ಭವಿಷ್ಯದ ಬಗ್ಗೆ ಆಲೋಚನೆಗಳು ಬರದಿದ್ದರೂ ಮುಂದೊಂದು ದಿನ ಒಂಟಿ ಬದುಕಿನ ಸಮಸ್ಯೆಗಳ ತೀವ್ರತೆ ಅರಿವಾಗದೇ ಇರದು. ಆದರೆ ಅದೇ ಸಮಯದಲ್ಲಿ, ಮದುವೆಯಾಗುವುದು ಅಥವಾ ಆಗದಿರುವುದು ಪ್ರತಿಯೊಬ್ಬರ ವೈಯಕ್ತಿಕ ಆಯ್ಕೆ.ಯಾರನ್ನೂ ವಯಸ್ಸಾಯಿತು, ಮದುವೆಯಾಗಲೇಬೇಕು ಎಂದು ಒತ್ತಾಯಿಸುವುದೂ ಸರಿಯಲ್ಲ; ಮದುವೆಯಾಗದಿದ್ದರೆ ಜೀವನ ಅಪೂರ್ಣ ಎನ್ನುವುದೂ ಸರಿಯಲ್ಲ!

ಮದುವೆಯಾದವರೂ ಸಂತೋಷವಾಗಿರಬಹುದು. ಮದುವೆಯಾಗದವರೂ ಸಂತೋಷವಾಗಿರಬಹುದು. ಮುಖ್ಯವಾದದ್ದು ಸಂಬಂಧದ ಗುಣಮಟ್ಟ,ಹೊಂದಾಣಿಕೆ, ಪರಸ್ಪರ ಗೌರವ ಮತ್ತು ಜೀವನದ ಅರ್ಥಪೂರ್ಣತೆ!

ಬಹುಶಃ ಮುಂದಿನ ಪೀಳಿಗೆಯವರಿಗೆ ಮದುವೆ ಎನ್ನುವುದು ಬಂಧನ ವಾಗಿ ಕಾಣದೆ, ಪರಸ್ಪರ ಗೌರವಿಸುವ ಸ್ನೇಹ, ಸಹಭಾಗಿತ್ವ ಮತ್ತು ಸಾಂಗತ್ಯವಾಗಿ ಕಾಣಿಸಿದರೆ, ಅವರು ಕೂಡ ಕಲ್ಯಾಣ ಮಂಟಪದತ್ತ ಹೆಜ್ಜೆ ಹಾಕಬಹುದು!

ಅಲ್ಲಿಯವರೆಗೆ ತಾಳಿ ಕಟ್ಟುವ ತುರಾತುರಿ ಬಿಡಿ ಸ್ವಲ್ಪ ತಾಳಿ ತಾಳಿ ಎಂಬ ಯುವಜನಾಂಗದ ಇಂದಿನ ಕೂಗು ನಿಲ್ಲಬಹುದು.

ಒಟ್ಟಿನಲ್ಲಿ, ಮದುವೆ ಮಾಡಿಕೊಳ್ಳಿ, ಮಾಡಿಕೊಳ್ಳಬೇಡಿ ಅದು ನಿಮ್ಮ ವೈಯಕ್ತಿಕ ಆಯ್ಕೆ.ಆದರೆ ಬದುಕಿನಲ್ಲಿ ಯಾವುದನ್ನೂ ಅತಿ ಮಾಡಿಕೊಳ್ಳದೆ, ಆ ಬಾಂಧವ್ಯದ ಅರ್ಥವನ್ನೇ ಮೂಲೆಗೊತ್ತಿ,ಮದುವೆ ಎಂದರೆ, ಮತ್ತೊಬ್ಬರು ನೋಡಿ ಹೆದರುವಂಥ ಸ್ಥಿತಿಗೆ ನೀವು ಕಾರಣಿಗರಾಗದಿದ್ದರೆ ಸಾಕು!ಸಂಸಾರವೆಂಬ ಜೋಡೆತ್ತಿನ ಬಂಡಿಯ ಒಂದೊಂದು ಚಕ್ರಕ್ಕೂ ತನ್ನದೇ ಆದ ಕರ್ತವ್ಯ, ಬಾಧ್ಯತೆಗಳಿರುತ್ತದೆ.ಬಾಳಿನುದ್ದಕ್ಕೂ ಒಂದು ಚಕ್ರವೇ ಎಲ್ಲಾ ನಿಭಾಯಿಸಲು ಸಾಧ್ಯವಿಲ್ಲ. ಎರಡೂ ತಮ್ಮ ತಮ್ಮ ಹೊಣೆಹೊತ್ತು, ಸಮತೋಲನದಿಂದ ಉಳಿದಾಗಲೇ ಬಂಡಿ ಮುನ್ನಡೆಯಲು ಸಾಧ್ಯ.ಅಲ್ಲವೇ

# ಔದಾರ್ಯಕ್ಕೆ ಹೆಸರಾದ ಇಳಿಹಾಳ ಬೊಮ್ಮಯ್ಯ



। ವೀಣಾ ಹೇಮಂತ್‌ಗೌಡ ಪಾಟೀಲ್



ಪೆರ್ಮಾಡಿ ರಾಯನ ಕಾಲದಲ್ಲಿ ಇಂದಿನ ಬಾಗಲಕೋಟೆಯ ಉತ್ತರ ಭಾಗದಲ್ಲಿ ಹತ್ತು ಮೈಲುಗಳ ಆಚೆ ಘಟಪ್ರಭಾ ನದಿಯ ದಂಡೆಯ ಮೇಲೆ ಇದ್ದ ಇಳಿಹಾಳ ಎಂಬ ಊರಿನಲ್ಲಿ ಬೊಮ್ಮಯ್ಯವೆಂಬ ಶಿವಶರಣ ಇದ್ದ. ಅತ್ಯಂತ ಹಲಸಾದ ಭೂಮಿಯಲ್ಲಿ ಬೊಮ್ಮಯ್ಯ ಪಾಲುಗಾರಿಕೆಯಲ್ಲಿ ಕೃಷಿ ಕಾಯಕವನ್ನು ತನ್ನದಾಗಿಸಿಕೊಂಡಿದ್ದ. ಶರಣ ತತ್ವಗಳನ್ನು ತನ್ನದಾಗಿಸಿಕೊಂಡಿದ್ದ ಬೊಮ್ಮಯ್ಯ ತನ್ನ ಕಾಯಕವಾಗಿ ಆರಿಸಿಕೊಂಡಿದ್ದ ಕೃಷಿ ಕಾಯಕದ ಜೊತೆಗೆ ಅಂತರಂಗ ಮತ್ತು ಬಹಿರಂಗಗಳ ಶುದ್ದಿಗೆ ಕೂಡ ಅವ್ಯಾಹತವಾಗಿ ಪ್ರಯತ್ನ ನಡೆಸಿದ್ದ.

ಸಾಮಾನ್ಯವಾಗಿ ಒಕ್ಕಲಿಗರೆಲ್ಲರೂ ವಿಶ್ವ ಕುಟುಂಬಗಳು ಎಂಬ ಮಾತಿದೆ. ಬೊಮ್ಮಯ್ಯ ಕೂಡ ಅಂಥವರಲ್ಲಿ ಒಬ್ಬ ಸದುವಿನಯದಲ್ಲಿ, ಔದಾರ್ಯದಲ್ಲಿ, ಹಂಚಿ ತಿನ್ನುವುದರಲ್ಲಿ ಬೊಮ್ಮಯ್ಯನಂತೆ ಮತ್ತೊಬ್ಬರಿಲ್ಲ ಎಂದು ಹೇಳಬಹುದು.

ತನಗೆ ದೊರೆತ ಭೂಮಿಯಲ್ಲಿ ಚೆನ್ನಾಗಿ ಮಳೆ ಬಂದ ನಂತರ ಒಕ್ಕಲುತನ ಮಾಡಿ ಒಂದಕ್ಕೆ ಎರಡು ಪಟ್ಟು ಬೆಳೆಯನ್ನು ತೆಗೆದು ಎಲ್ಲರಿಗೂ ಹಂಚಿ ಕಂದಾಯ ಕಟ್ಟಿ ಉಳಿದ ಹಣದಲ್ಲಿ ದಾಸೋಹವನ್ನು ಮಾಡುತ್ತಿದ್ದ ವ್ಯಕ್ತಿ ಆತ.

ಆತನ ಬಹಿರಂಗ ದಾಸೋಹದಲ್ಲಿ ಎರಡೆತ್ತುಗಳನ್ನು ಹೂಡಿಕೊಂಡು ಬೀಜವನ್ನು ಬಿತ್ತಿ ನೇಗಿಲನ್ನು ಬಳಸಿ ಕಳೆಯನ್ನು ತೆಗೆದು ಬೆಳೆ ಬೆಳೆದು ಅದನ್ನು ಗುರುಲಿಂಗ ಜಂಗಮರಿಗೆ ಅರ್ಪಿಸಿ ದಾಸೋಹ ಮಾಡಿ ನಂತರ ತಾನು ಸೇವಿಸುತ್ತಿದ್ದ ಬೊಮ್ಮಯ್ಯ.

ಅಂತೆಯೇ ಆತ ತನ್ನ ತನುವೆಂಬ ಹೊಲವನ್ನು ಹಸನ ಮಾಡಿ ಪರತತ್ವ ಎಂಬ ಬೆಳೆಯನ್ನು ಬೆಳೆದು ಕ್ಷಮೆ ದಯೆ ಎಂಬ ಎರಡು ಶುಭ್ರವಾದ ಮನಸ್ಸನ್ನು ನೇಗಿಲು ಮಾಡಿಕೊಂಡು ಕಲಿಕೆಯನ್ನು ಕಳೆದು ಸಮತೆಯ ಗೊಬ್ಬರವನ್ನು ಹಾಕಿ ಗುರು ಉಪದೇಶ ಎಂಬ ಬೀಜವನ್ನು ಬಿತ್ತಿ ಸಂಸಾರ ವೃತ್ತಿಯ ಬಲದಲ್ಲಿ ಅರಿವು ಎಂಬ ಪೈರನ್ನು ಬೆಳೆದು ಸ್ಥಿರ ಮುಕ್ತಿ ಎಂಬ ಧ್ಯಾನವನ್ನು ಬೆಳೆದು ಉಂಡ ಮಹಾನುಭಾವ ಆತ.

ಇಂತಹ ಬೊಮ್ಮಯ್ಯನ ಭಕ್ತಿಯ ಶಕ್ತಿಯನ್ನು ಕೂಡ ಪರೀಕ್ಷೆಗೆ ಒಡ್ಡಲಾಯಿತು. ಅದೊಂದು ಬಾರಿ ಭೀಕರ ಬರಗಾಲ ಆ ಪ್ರದೇಶವನ್ನು ಆವರಿಸಿತು. ಜನ ಜಾನುವಾರುಗಳು ನೀರಿಲ್ಲದೆ ತತ್ತರಿಸಿದರು ಎಲ್ಲರಂತೆ ಬೊಮ್ಮಯ್ಯನ ಭೂಮಿ ಕೂಡ ಹಾಳು ಬಿದ್ದಿತ್ತು. ಒಂದೆರಡು ವರ್ಷಗಳ ಕಾಲ ಬರ ಬಿದ್ದ ಊರಿನಲ್ಲಿ ತಾನು ಪಡೆದ ಹೊಲದ ಪಾಲನ್ನು ಯಾರಿಗೆ ಕೊಡಬೇಕು ಅರಸರಿಗೆ ಎಷ್ಟು ಸುಂಕ ಕಟ್ಟಬೇಕು ಎಂದೆಲ್ಲ ಬೊಮ್ಮಯ್ಯ ಚಿಂತಿಸಿದ.... ದಿಕ್ಕೇ ತೋಚದೆ ಒದ್ದಾಡಿ ಕಣ್ಣೀರಿಟ್ಟ.

ಅಂತಿಮವಾಗಿ ಒಂದೆರಡು ವರ್ಷಗಳ ನಂತರ ಮಳೆ ಆಯಿತು... ಆದರೆ ಬಿತ್ತಲು ಬೀಜವೆಲ್ಲಿ? ಯಾರೊಬ್ಬರ ಬಳಿಯೂ ಬಿತ್ತನೆಯ ಬೀಜ ಇರಲಿಲ್ಲ ಎಲ್ಲರೂ ಬರಗಾಲದ ಸಮಯದಲ್ಲಿ ಹೊಟ್ಟೆಯ ಹಸಿವನ್ನು ತೀರಿಸಲು ಒಂದು ಹಿಡಿ ಧಾನ್ಯವನ್ನು ಬಿಡದೆ ಉಂಡು ಖಾಲಿ ಮಾಡಿದ್ದರು.

ಮನೆ ಮನೆಗಳನ್ನು ತಿರುಗಿ ಬಿತ್ತನೆ ಬೀಜ ಕೇಳಿದ ಬೊಮ್ಮಯ್ಯನಿಗೆ ಹತಾಶೆಯೇ ಎದುರಾಯಿತು. ಅಂತಿಮವಾಗಿ ಆತನಿಗೆ ಐದು ಗಳದಷ್ಟು ಕಡಲೆ ಬೀಜಗಳು ಮಾರಾಟಕ್ಕೆ ದೊರೆಯಿತು. ಬಿತ್ತುವಷ್ಟು ನೆಲ ಹಸಿಯಾಗದೆ ಹೋದರೂ ಕೂಡ ಬಿತ್ತಲೇಬೇಕಾದ ಅನಿವಾರ್ಯತೆ ಇತ್ತು... ಅಂತಿಮವಾಗಿ ದೊರೆತ ಕಡಲೆಯನ್ನು ನೀರಿನಲ್ಲಿ ನೆನೆ ಇಟ್ಟು ಮರುದಿನ ಬಿತ್ತಿದರಾಯಿತು ಎಂದು ಯೋಚಿಸಿದ ಬೊಮ್ಮಯ್ಯ ಆ ದಿನ ರಾತ್ರಿ ನೀರಿನಲ್ಲಿ ಎಲ್ಲಾ ಕಡಲೆಯನ್ನು ನೆನೆಸಿದ.

ರಾತ್ರಿ ಎಲ್ಲಾ ನೆನೆದ ಕಡಲೆಯನ್ನು ಬಟ್ಟೆಯ ಗಂಟೊಂದರಲ್ಲಿ ಕಟ್ಟಿಕೊಂಡು ಮರುದಿನ ಮುಂಜಾನೆ ಹೊಲದತ್ತ ನಡೆದ ಬೊಮ್ಮಯ್ಯ.

ಇನ್ನೇನು ಆತ ಹೊಲದ ಹಾದಿಯನ್ನು ಹಿಡಿಯಬೇಕು ಊರ ಹೊರಗಿನ ಗುಡಿಯ ಪಕ್ಕದಲ್ಲಿ ಶ್ರೀಶೈಲ ಮಲ್ಲಯ್ಯನ ಜಾತ್ರೆಗೆ ಹೊರಟ ಜನರ ಗುಂಪು ಕಾಣಿಸಿತು. ದೂರದ ಊರಿಂದ ಬಂದು ಅಲ್ಲಿ ವಸತಿ ಮಾಡಿದ್ದ ಜನರಿಗೆ ಬರಗಾಲದ ಕಾರಣ ರಾತ್ರಿ ತಿನ್ನುಣ್ಣಲು ಏನೂ ಸಿಕ್ಕಿರಲಿಲ್ಲ. ಬೊಮ್ಮಯ್ಯನನ್ನು ಕಾಣುತ್ತಲೇ ಅವರೆಲ್ಲರೂ ಆತನ ಗಂಟಿನಲ್ಲಿ ಆಹಾರ ಪದಾರ್ಥ ಇರಬಹುದು ಎಂಬ ಆಸೆಯಿಂದ ಆತನನ್ನು ನಿಲ್ಲಿಸಿದರು.

ತೀವ್ರವಾದ ಹಸಿವೆಯಿಂದ ಬಳಲುತ್ತಿದ್ದೇವೆ ತಿನ್ನಲು ಏನಾದರೂ ಕೊಟ್ಟು ಪುಣ್ಯ ಕಟ್ಟಿಕೋ ಬೊಮ್ಮಯ್ಯ ಎಂಬ ಅವರ ಮಾತಿಗೆ ಕಟ್ಟು ಬಿದ್ದ ಬೊಮ್ಮಯ್ಯ ತನ್ನ ಬಟ್ಟೆಯ ಗಂಟನ್ನು ಸಡಿಲ ಮಾಡಿದ. ಹಸಿದ ಆ ಎಲ್ಲ ಭಕ್ತರು ಕೂಡಲೇ ನೆನೆದ ಕಡಲೆಗೆ ಕೈ ಹಾಕಿದರು. ನೆನೆದ ಕಾಳುಗಳನ್ನು ಆ ಎಲ್ಲ ಯಾತ್ರಿಕರಿಗೆ ಹಂಚಿದ ಬೊಮ್ಮಯ್ಯ... ಆತನ ಮುಖದಲ್ಲಿ ಒಂದಷ್ಟು ಪಶ್ಚಾತಾಪದ ಭಾವವಿರಲಿಲ್ಲ ದೃಢ ಚಿತ್ತನಾದ ಆತ ಹಸಿದ ಹೊಟ್ಟೆಯ ಯಾತ್ರಿಕರು ತೃಪ್ತಿಯಿಂದ ನೆನೆದ ಕಡಲೆಗಳನ್ನು ತಿಂದದ್ದು ನೋಡಿ ಹಿಗ್ಗಿದ.

ಅಂತಿಮವಾಗಿ ಆತನ ಗಂಟಿನಲ್ಲಿ ಕೇವಲ ಐದು ನೆನೆದ ಕಡಲೆಗಳು ಉಳಿದಿದ್ದವು. ಇದು ಕಡಲೆಗಳನ್ನು ನೋಡಿ ಆತ ಪಂಚಮುಖ ಮಾದೇವ ಪಂಚ ಬೀಜಗಳಾಗಿ ಬಂದಿದ್ದಾನೆ ಇದುವೇ ನನ್ನ ಐದರ ಐಸಿರಿ ಎಂದು ಭಾವಿಸಿದನು. ಎಲ್ಲರಿಗೂ ಎಲ್ಲ ಕಾಲದಲ್ಲಿಯೂ ಇಲ್ಲವೆನ್ನದೆ ಕೊಡುವ ಮಹಾದೇವ ಇರುವಾಗ ನಾನೇಕೆ ಬೇಸರ ಪಟ್ಟುಕೊಳ್ಳಬೇಕು ಎಂದು ಮನದಲ್ಲಿಯೇ ಅಂದುಕೊಳ್ಳುತ್ತಾ ಆ ಐದು ಬೀಜಗಳನ್ನು ಹೊಲದಲ್ಲಿ ಅಲ್ಲಲ್ಲಿ ಊರಿ ಒಂದಷ್ಟು ನೀರು ಕಾಣಿಸಿ ಮನೆಯನ್ನು ಸೇರಿದ.

ಬೊಮ್ಮಯ್ಯ ಧಾನ್ಯಗಳನ್ನು ಶ್ರೀಶೈಲದ ಪರಿಷೆಗೆ ಹೋಗುವ ಜನರಿಗೆ ದಾನ ಮಾಡಿ ಬಂದದ್ದನ್ನು ಕೇಳಿದ ಪಾಲುಗಾರರು ಕಿಡಿಕಿಡಿಯಾದರು. ಬೊಮ್ಮಯ್ಯನಿಗೆ ಇನ್ನಿಲ್ಲದಂತೆ ಬೈದರು ಆದರೆ ಶಿವನನ್ನು ಸಂಪೂರ್ಣವಾಗಿ ನಂಬಿದ ಬೊಮ್ಮಯ್ಯ ಚಿಂತೆ ಮೋಹ ಶೋಕಗಳನ್ನು ದೂರವಿರಿಸಿದ ನಿರ್ಲಿಪ್ತ ವ್ಯಕ್ತಿಯಂತೆ ಸಮಾಧಾನಿಯಾಗಿಯೇ ಉಳಿದ.

ಆತನನ್ನು ನಂಬಿದವರ ಯೋಗಕ್ಷೇಮವನ್ನು ಆತನೇ ನೋಡಿಕೊಳ್ಳುತ್ತಾನೆ ಎಂದ ಮೇಲೆ ನಾವೇಕೆ ಅಂಜಬೇಕು, ಅಳುಕಬೇಕು ಎಂದು ಮಾತ್ರ ಬೊಮ್ಮಯ್ಯ ಹೇಳಿದಾಗ ಎಲ್ಲರೂ ಹಣೆ ಚಚ್ಚಿಕೊಳ್ಳುತ್ತ ಅಲ್ಲಿಂದ ಹೊರಟು ಹೋದರು.

ಶಿವನ ಮಹಿಮೆ ದೊಡ್ಡದು ಕೇವಲ ಐದು ಬೀಜಗಳಿಂದಲೇ ಇಡೀ ಹೊಲದ ತುಂಬಾ ಕಾಲಿಡಲು ಸ್ಥಳವಿಲ್ಲದಂತೆ , ಕಡಲೆಯ ಬೆಳೆದು ತುಂಬಿತು. ಶಿವನೊಲಿದರೆ ವಿಷವು ಅಮೃತವಾಗುತ್ತದೆ ಬರೀ ನೆಲವು ಬೆಳೆಯುತ್ತದೆ ಎಂದು ಶಿವನನ್ನು ಸ್ಮರಣೆ ಮಾಡುತ್ತಲೇ ಕಾಳನ್ನು ಒಕ್ಕಿದ ಬೊಮ್ಮಯ್ಯ.

ಉಪೇಕ್ಷಿತ ವಚನಕಾರರು

ನಂತರ ಆಯಗಾರರಿಗೆ ಕೋರುಕದಾರರಿಗೆ ಪಾಲುಕೊಟ್ಟ ಬೇಡಿದವರಿಗೆ ಮಾತ್ರವಲ್ಲ ಬೇಡದವರಿಗೂ ಪಾಲುಕೊಟ್ಟ ಆತ ಅರಸನಿಗೆ ಕರದ ರೂಪದಲ್ಲಿ ಕಾಳುಗಳನ್ನು ನೀಡಿದ. ಆತನ ಮನೆಯ ಕಾಳಿನ ಭಂಡಾರ ಅಕ್ಷಯ ಪಾತ್ರೆಯಾಗಿ ಬರಗಾಲದಲ್ಲಿ ನೊಂದು ಬೆಂದವರನ್ನು ರಕ್ಷಿಸಿತು.

ಮುಂದೆ ಅದುವೇ ಬಸವಾದಿ ಪ್ರಮಥರ ವಚನ ರಾಶಿಗೆ ಅಂಕಿತವಾಯಿತು. ಮಾನಸಿಕ ಕೃಷಿಯನ್ನು ಕೂಡ ಮಾಡಿ ಮನದೊಳಗಣ ಮಾಯೆಯನ್ನು ತೆಗೆದು ಹಾಕಿದ ಸಂತೃಪ್ತಿಯನ್ನು ಬಿತ್ತಿ ಬೆಳೆದ ಇಳಿಹಾಳ ಬೊಮ್ಮಯ್ಯ ನಾಡಿನ ಒಕ್ಕಲಿಗರ ರಕ್ಷೆಯಾಗಿ ಹುಲ್ಲು ಹುಲ್ಲಿಗೂ ಹುಲಸನ್ನು ಹರಿಸಿದ ಮಹಾನ್ ಶರಣನಾಗಿ ಬಾಳಿ ಬದುಕಿದ.

ಇಳಿಹಾಳ ಬೊಮ್ಮಯ್ಯನ ಕುರಿತು ನೂರಾರು ಹಂತಿ ಪದಗಳನ್ನು ನಾವು ಕೇಳುತ್ತೇವೆ. ಚಿರ ಮುಕ್ತಿಯನ್ನು ಪಡೆದ ಬೊಮ್ಮಯ್ಯ ದಾಸೋಹ ಜೀವಿಯಾಗಿ ನಿರಾಡಂಬರ ಭಕ್ತನಾಗಿ ಲಿಂಗ ಪೂಜಾ ನಿಷ್ಠನಾಗಿ ಶರಣರಲ್ಲಿಯೇ ಅತ್ಯುನ್ನತ ಶರಣನಾಗಿ ಬಾಳಿ ಬದುಕಿದ.

ಇಂತಹ ಮಹಾನ್ ಶರಣ ಇಳಿಹಾಳ ಬೊಮ್ಮಯ್ಯನಿಗೆ ಶರಣು ಶರಣಾರ್ಥಿ

## ಬದಲಾಗುತ್ತಿರುವ ಮನುಷ್ಯ-ಪ್ರಗತಿಯ ಓಟದಲ್ಲಿ ಕಣ್ಮರೆಯಾಗುತ್ತಿರುವ ಮಾನವೀಯತೆ



। ಪುಷ್ಪ ಪ್ರಸಾದ್



ಪ್ರಗತಿಯ ಓಟದಲ್ಲಿ ಕಣ್ಮರೆಯಾಗುತ್ತಿರುವ ಮಾನವೀಯತೆ ಇಂದಿನ ಆಧುನಿಕ ಜಗತ್ತಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿ ಗಗನ ಮುಟ್ಟುತ್ತಿದೆ. ಮನುಷ್ಯನು ಚಂದ್ರ, ಮಂಗಳ ಗ್ರಹಗಳಿಗೆ ಲಗ್ಗೆ ಇಡುತ್ತಿದ್ದಾನೆ. ಆದರೆ, ಇದೇ ವೇಗದ ಓಟದಲ್ಲಿ ಮನುಷ್ಯನ ಮನಸ್ಸು, ನಡವಳಿಕೆ ಮತ್ತು ಸಂಸ್ಕಾರಗಳು ತಲ್ಲಣಗೊಳಿಸುವಷ್ಟು ಬದಲಾಗುತ್ತಿವೆ. ಭೌತಿಕವಾಗಿ ಜಗತ್ತನ್ನು ಗೆಲ್ಲ ಹೊರಟಿರುವ ಮಾನವ, ಆಂತರಿಕವಾಗಿ ತನ್ನತನವನ್ನು ಕಳೆದುಕೊಳ್ಳುತ್ತಿದ್ದಾನೆಯೇ ಎಂಬ ಆತಂಕ ಸಮಾಜದಲ್ಲಿ ಎದ್ದುಕಾಣುತ್ತಿದೆ. ಯಾಂತ್ರಿಕ ಬದುಕು ಮತ್ತು ಕೃತಕ ಸಂಬಂಧಗಳುಒಂದಾನೊಂದು ಕಾಲದಲ್ಲಿ ಹಳ್ಳಿಗಳಲ್ಲೋ, ನಗರಗಳಲ್ಲೋ ನಾಲ್ಕು ಜನ ಒಟ್ಟಿಗೆ ಕೂತರೆ ಸುಖ-ದುಃಖಗಳ ಮಾತುಕತೆ ನಡೆಯುತ್ತಿತ್ತು. ಆದರೆ ಇಂದಿನ ಚಿತ್ರಣವೇ ಬೇರೆ.

ಮೊಬೈಲ್ ಫೋನ್‌ಗಳು ಮತ್ತು ಸಾಮಾಜಿಕ ಜಾಲತಾಣಗಳು ಮನುಷ್ಯನನ್ನು ಜಾಗತಿಕವಾಗಿ ಬೆಸೆದಿವೆ ನಿಜ, ಆದರೆ ಪಕ್ಕದಲ್ಲೇ ಇರುವ ಜೀವಗಳ ನಡುವೆ ಗೋಡೆಯನ್ನು ನಿರ್ಮಿಸಿವೆ. ಹಬ್ಬಗಳು, ಆಚರಣೆಗಳು ಮತ್ತು ಸಂತಾಪಗಳು ಇಂದು ಕೇವಲ ವಾಟ್ಸಾಪ್ ಸ್ಟೇಟಸ್ ಹಾಗೂ ಇಮೋಜಿಗಳಿಗೆ ಸೀಮಿತವಾಗಿವೆ. ಮುಖಾಮುಖಿ ಕೂತು ಮಾತನಾಡುವ ಆತ್ಮೀಯತೆ ಮಾಯವಾಗಿ, ಎಲ್ಲವೂ ಕೃತಕ ಹಾಗೂ ಯಾಂತ್ರಿಕವಾಗುತ್ತಿದೆ.ಸ್ವಾರ್ಥದ ಪರಮಾವಧಿ ಮತ್ತು ಮೌಲ್ಯಗಳ ಕುಸಿತ'ನಾವೆಲ್ಲರೂ ಒಂದು', 'ಬದುಕು ಮತ್ತು ಬದುಕಲು ಬಿಡು' ಎಂಬ ಉದಾತ್ತ ತತ್ವಗಳು ಇಂದು ಕೇವಲ ಪುಸ್ತಕದ ಬದನೆಕಾಯಿಯಂತಿವೆ. ಹಣ, ಅಧಿಕಾರ ಮತ್ತು ಅಂತಸ್ತಿನ ಬೆನ್ನಟ್ಟುವ ಕುರುಡು ಸ್ಪರ್ಧೆಯಲ್ಲಿ ಮನುಷ್ಯ ತೀರಾ ಸ್ವಾರ್ಥಿಯಾಗುತ್ತಿದ್ದಾನೆ. 'ತಾನು, ತನ್ನ ಕುಟುಂಬ' ಎಂಬ ಸಂಕುಚಿತ ಮನೋಭಾವ ಹೆಚ್ಚಾಗಿ, ನೆರೆಹೊರೆಯವರ ಕಷ್ಟಕ್ಕೆ ಮಿಡಿಯುವ ಕರುಣೆ ಕಣ್ಮರೆಯಾಗುತ್ತಿದೆ. ರಸ್ತೆಯಲ್ಲಿ ಅಪಘಾತವಾದರೆ ರಕ್ಷಿಸುವ ಬದಲು ಮೊಬೈಲ್‌ನಲ್ಲಿ ವಿಡಿಯೋ ಚಿತ್ರೀಕರಿಸುವ ಇಂದಿನ ಮಾನಸಿಕತೆ ಮನುಷ್ಯನ ಸಂವೇದನಾಶೀಲತೆ ಎಷ್ಟು ಸತ್ತಿದೆ ಎಂಬುದಕ್ಕೆ ಸಾಕ್ಷಿ.ನಿಸರ್ಗದ ಮೇಲಿನ ದೌರ್ಜನ್ಯ ಮತ್ತು ಆರೋಗ್ಯದ ಬಿಕ್ಕಟ್ಟುಕಾಂಕ್ರೀಟ್ ಕಾಡುಗಳ ವ್ಯಾಮೋಹಕ್ಕೆ ಬಿದ್ದ ಮನುಷ್ಯ ಹಸಿರನ್ನು ನಾಶ ಮಾಡುತ್ತಿದ್ದಾನೆ.

ಪ್ರಕೃತಿಯಿಂದ ದೂರ ಸರಿದು ಕೃತಕ ಹವಾನಿಯಂತ್ರಿತ ಕೊಠಡಿಗಳಲ್ಲಿ ಬದುಕುತ್ತಿರುವುದರಿಂದ ದೈಹಿಕ ಕಾಯಿಲೆಗಳಷ್ಟೇ ಅಲ್ಲದೆ, ಖಿನ್ನತೆ ಮತ್ತು ಮಾನಸಿಕ ಒತ್ತಡಗಳು ಯುವ ಪೀಳಿಗೆಯನ್ನು ಕಾಡುತ್ತಿವೆ. ತಾಳ್ಮೆಯ ಕೊರತೆ, ಸಣ್ಣ ವಿಷಯಕ್ಕೂ ಆಕ್ರೋಶ ಕೊಳ್ಳುವುದು ಇಂದಿನ ಸಮಾಜದ ಸಾಮಾನ್ಯ ಲಕ್ಷಣಗಳಾಗಿವೆ. ಚಿಂತನೆಯ ಅಗತ್ಯವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿ ಸಮಾಜಕ್ಕೆ ಅಗತ್ಯ. ಆದರೆ ಅದು ಮನುಷ್ಯನ ಮಾನವೀಯತೆಯನ್ನು ನುಂಗಿ ಹಾಕಬಾರದು. ಬುದ್ಧಿವಂತಿಕೆಯ ಜೊತೆಗೆ ಕರುಣೆ, ಪ್ರೀತಿ, ಸಹಬಾಳ್ವೆ ಮತ್ತು ಗೌರವದಂತಹ ನೈತಿಕ ಮೌಲ್ಯಗಳನ್ನು ನಾವು ಇಂದಿನ ಪೀಳಿಗೆಗೆ ಧಾರೆ ಎರೆಯಬೇಕಿದೆ. ಇಲ್ಲದಿದ್ದರೆ, ಭವಿಷ್ಯದಲ್ಲಿ ನಾವು ಕೇವಲ ರೋಬೋಟ್‌ಗಳಂತಹ ಯಾಂತ್ರಿಕ ಸಮಾಜವನ್ನು ಮಾತ್ರ ಕಾಣಬೇಕಾಗಬಹುದು. ನಮ್ಮೊಳಗಿನ ಮನುಷ್ಯತ್ವವನ್ನು ಉಳಿಸಿಕೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,